ಬೆಂಗಳೂರು
ಬುಧವಾರ, 29 ಏಪ್ರಿಲ್ 2026
ಸಂಪುಟ 33, ಸಂಚಿಕೆ 178, ಪುಟಗಳು 16+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬಂಗಾಳ: ಇಂದು 2ನೇ ಹಂತದ ಮತ | ೧೨
ಪಾಲಿಕೆ ಚುನಾವಣೆ: ಬಿಜೆಪಿ ಕ್ಲೀನ್‌ಸ್ವೀಪ್ | ೧೨
ಉಗ್ರವಾದ: ಇಬ್ಬಗೆ ನೀತಿ ಸಲ್ಲ | ೧೨

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಹಸ್ತ

### ದಿನದ ಮಾತು

ಕಣ್ಣಿರುವವನಿಗಿಂತಲೂ ಕಣ್ಣಿಲ್ಲದವನು ಕಡಿಮೆ ಬಾರಿ ಎಡವಿ ಬೀಳುತ್ತಾನೆ.
▲ಅಜ್ಞಾತ

### ನೀರಿಳಿಯದ ಗಂಟಲೊಳಗೆ ಕಡುಬು ತುರುಕಿದಂತೆ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
• ಪುಟ ೬

## ಕಿರುಸುದ್ದಿ

### ಖಾಲಿದ್ ಕಾರ್ಯಕ್ರಮದ ಸ್ಥಳದಲ್ಲಿ ಭಾರೀ ಪ್ರತಿಭಟನೆ

• **ಬೆಂಗಳೂರು:** ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಪ್ರತಿಭಟನೆಗೆ ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಲ್ಲಿ ಜೈಲುಪಾಲಾಗಿರುವ ವ್ಯಕ್ತಿಯ ಕುರಿತಾದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಬಿಜೆಪಿ ಆಗ್ರಹಿಸಿತ್ತು.
• ಪುಟ ೭

### ದೇಶದಲ್ಲಿ ಗಮನಾರ್ಹ ಪ್ರಗತಿ: ಸಚಿವೆ ನಿರ್ಮಲಾ

• **ಮಂಗಳೂರು:** ಕಳೆದ ಒಂದು ದಶಕದಲ್ಲಿ ಭಾರತವು ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯ ಪಟ್ಟರು. ಮಂಗಳೂರಿನ ದೇರಳ ಕಟ್ಟೆಯ ಕೆ.ಎಸ್.ಹೆಗ್ಡೆ ಸಭಾಂಗಣದಲ್ಲಿ ಮಂಗಳ ವಾರ ನಡೆದ ನಿಟ್ಟೆ ಡಾ.ಎನ್. ವಿನಯ ಹೆಗ್ಡೆ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಿಕಸಿತ ಭಾರತ-2047ರ ದೃಷ್ಟಿಕೋನ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು.
• ಪುಟ ೭

### ಸಹೋದರಿ ಅಸ್ಥಿಪಂಜರ ಹೊತ್ತು ತಂದ ಸಹೋದರ

• ಪುಟ ೧೨

### ಯುದ್ಧ ಇನ್ನೂ ಮುಗಿದಿಲ್ಲ ಇರಾನ್ ಸೇನಾ ವಕ್ತಾರ!

• ಪುಟ ೧೨



ಸಿಕ್ಕಿಂನಲ್ಲಿ ಮಂಗಳವಾರ ಯುವ ಪ್ರತಿಭೆಗಳ ಜತೆ ಪ್ರಧಾನಿ ಮೋದಿ ಫುಟ್ಬಾಲ್ ಆಡಿದ ಕ್ಷಣ.

### ಸಿಕ್ಕಿಂ ಭಾರತದ ಅಷ್ಟಲಕ್ಷ್ಮಿ: ಪ್ರಧಾನಿ ಮೋದಿ ಬಣ್ಣನೆ

# ಆ್ಯಕ್ಟ್ ಈಸ್ಟ್, ಆ್ಯಕ್ಟ್ ಫಾಸ್ಟ್

• **ಗ್ಯಾಂಗ್ಟಕ್:** ತಮ್ಮ ಸರಕಾರವು ತನ್ನ 'ಆ್ಯಕ್ಟ್ ಈಸ್ಟ್' ನೀತಿಗಷ್ಟೇ ಬದ್ಧವಾಗಿರುವುದಲ್ಲ, ಬದಲಿಗೆ ಸಿಕ್ಕಿಂ ಈಶಾನ್ಯದ 'ಅಷ್ಟಲಕ್ಷ್ಮಿ' ಎಂಬ ಭಾವನೆಯಲ್ಲಿ ಈ ರಾಜ್ಯದ ಅಭಿವೃದ್ಧಿಗಾಗಿ 'ಆ್ಯಕ್ಟ್ ಫಾಸ್ಟ್' ನೀತಿಯ ದೃಢ ಸಂಕಲ್ಪವನ್ನೂ ಮಾಡಿ ಕೆಲಸ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಮಂಗಳವಾರ ತಿಳಿಸಿದ್ದಾರೆ. ಈಶಾನ್ಯದ ರಾಜ್ಯಗಳೆಂದರೆ ಸಮೃದ್ಧಿ, ಸಂಪತ್ತು ಮತ್ತು ಮಂಗಳಕರ ಬಹುಮುಖಿ ಸ್ವರೂಪದ ಪ್ರತೀಕ ಎಂಬುದಾಗಿ ಮೋದಿಯವರು ಬಣ್ಣಿಸಿದ್ದಾರೆ.



ಅವರು ಸಿಕ್ಕಿಂನ ರಾಜ್ಯ ಸ್ಥಾನಮಾನದ ಸ್ವರ್ಣ ಮಹೋತ್ಸವ ಸಮಾರೋಪದಲ್ಲಿ ಮಾತನಾಡಿ, ಪ್ರವಾಸೋದ್ಯಮವೇ ಸಿಕ್ಕಿಂನ ಆರ್ಥಿಕತೆಯ ಆಧಾರಸ್ತಂಭವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಈಶಾನ್ಯದಲ್ಲಿ ಸಂಪರ್ಕ ವ್ಯವಸ್ಥೆಗೆ ವಿಶೇಷ ಒತ್ತು ನೀಡಿ ಕೆಲಸ ಮಾಡುತ್ತಿದೆ. ಇದರಿಂದ ಪ್ರವಾಸಿಗರ ಒಳಹರಿವು ಹೆಚ್ಚುವಂತಾಗಿದೆ. ಇದರಿಂದ ಈಶಾನ್ಯ ರಾಜ್ಯಗಳ ಆರ್ಥಿಕತೆಗೆ ವಿಶೇಷ ಉತ್ತೇಜನ ಲಭಿಸುತ್ತಿದೆ ಎಂದರು.

ಸಿಕ್ಕಿಂನ ಮೂಲಸೌಕರ್ಯಗಳನ್ನು ಹೆಚ್ಚಿಸಲು ತಮ್ಮ ಸರಕಾರ ಬದ್ಧವಾಗಿದ್ದು, ಪಶ್ಚಿಮ ಬಂಗಾಳದ ಬಾಗ್ಡೋಗ್ರಾದಿಂದ ಎಕ್ಸ್‌ಪ್ರೆಸ್ ಹೆದ್ದಾರಿ, ನಾಥುಲಾದಲ್ಲಿ ಇನ್ನೊಂದು ಎಕ್ಸ್‌ಪ್ರೆಸ್ ವೇ, ಗ್ಯಾಂಗ್ಟಕ್‌ನಲ್ಲಿ ರಿಂಗ್ ರೋಡ್, ರಾಜ್ಯದಲ್ಲಿ ರೋಪ್‌ವೇ ಮತ್ತು ಸ್ಕೈವೇ ಯೋಜನೆ ಸೇರಿದಂತೆ ಪ್ರವಾಸಿಗರ ಹರಿವು ಹೆಚ್ಚಿಸಲು ಹಲವು ಯೋಜನೆಗಳನ್ನು ರೂಪಿಸಿದೆ. ➡ಪುಟ ೭

### ಸಿಕ್ಕಿಂಗೆ ₹4000 ಕೋಟಿ ಯೋಜನೆ

• **ಗ್ಯಾಂಗ್ಟಕ್:** ಸಿಕ್ಕಿಂಗೆ ರಾಜ್ಯ ಸ್ಥಾನಮಾನ ಲಭಿಸಿದ ಸ್ವರ್ಣ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯಕ್ಕೆ 4000 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ನೀಡಿರುವುದಕ್ಕೆ ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರು ಪ್ರಧಾನಿಯವರಿಗೆ ಕೃತಜ್ಞತೆ ಸಲ್ಲಿಸಿದರು. ರಾಜ್ಯದ ಮೂಲಸೌಕರ್ಯಗಳು, ಸಂಪರ್ಕ ಯೋಜನೆಗಳು, ಆರೋಗ್ಯ ಕ್ಷೇತ್ರದ ಅಭಿವೃದ್ಧಿ, ಶಿಕ್ಷಣ, ವಿದ್ಯುತ್, ನಗರ ಅಭಿವೃದ್ಧಿ, ಪರಿಸರ, ಪ್ರವಾಸೋದ್ಯಮ ಮತ್ತು ಕೃಷಿ ಸಂಬಂಧಿತ ಹಲವು ಯೋಜನೆಗಳನ್ನು ಪ್ರಧಾನಿಯವರು ಸಿಕ್ಕಿಂಗೆ ಘೋಷಿಸಿದ್ದಾರೆ. ➡ಪುಟ ೭

**ಪ್ರಧಾನಿಗೆ ಸಿಕ್ಕಿಂ ಸಿಎಂ ಕೃತಜ್ಞತೆ**

### ಪಹಲ್ಗಾಮ್ ಮಾದರಿ ಘಟನೆ | ಕಲ್ಮಾ ಓದಲು ಒತ್ತಾಯ
### ಇಬ್ಬರು ಸೆಕ್ಯುರಿಟಿಗೆ ಚೂರಿ ಇರಿತ | ಎಟಿಎಸ್‌ನಿಂದ ತನಿಖೆ

# ಮುಂಬೈ ಉಗ್ರ ದಾಳಿ

• **ಮುಂಬೈ:** ಪಹಲ್ಗಾಮ್ ನಲ್ಲಿ ನಡೆದ ದಾಳಿಯ ಮಾದರಿಯಲ್ಲೇ ಸಂತ್ರಸ್ತರ ಗುರುತು ಪರಿಶೀಲಿಸಿ ದಾಳಿ ನಡೆಸಿದ ಮತ್ತೊಂದು ಬೆಚ್ಚಿಬೀಳಿಸುವ ಘಟನೆ ಮಹಾರಾಷ್ಟ್ರದ ಮುಂಬೈ ಸಮೀಪ ಮೀರಾ ರಸ್ತೆಯಲ್ಲಿ ಬೆಳಕಿಗೆ ಬಂದಿದೆ.

ಸೋಮವಾರ ಮುಂಜಾನೆ ವೇಳೆ ಭದ್ರತಾ ಸಿಬ್ಬಂದಿ ಮೇಲೆ ನಡೆದ ಚೂರಿ ದಾಳಿಯಲ್ಲಿ, ಮೊದಲು ಅವರ ಹೆಸರು ಮತ್ತು ಧರ್ಮ ವಿಚಾರಿಸಿ, ನಿರ್ದಿಷ್ಟ ಪ್ರಾರ್ಥನೆ ಹೇಳಲು ಒತ್ತಾಯಿಸಿದ ಬಳಿಕ ಇರಿಯಲಾಗಿದೆ ಎಂಬ ಸಂಗತಿ ತನಿಖೆಗೆ ಗಂಭೀರ ಉಗ್ರ ಆಯಾಮ ನೀಡಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಈಗ ಏಕಾಂಗಿ ಉಗ್ರ ದಾಳಿ ಎಂದು ಪರಿಗಣಿಸಿ ಮಹಾರಾಷ್ಟ್ರ ಭಯೋತ್ಪಾದನಾ ನಿಯಂತ್ರಣ ದಳ(ಎಟಿಎಸ್) ಸಮಗ್ರ ತನಿಖೆ ಆರಂಭಿಸಿದೆ.

**ಮುಂಬೈ ಮೀರಾ ರಸ್ತೆ ದಾಳಿಗೆ ಉಗ್ರ ಆಯಾಮ**

ಸೋಮವಾರ ಮುಂಜಾನೆ ಸುಮಾರು ನಾಲ್ಕು ಗಂಟೆಗೆ ನಯಾ ನಗರದಲ್ಲಿನ ನಿರ್ಮಾಣ ಹಂತದ ಪ್ರದೇಶದಲ್ಲಿ ಈ ದಾಳಿ ನಡೆದಿದೆ. ಭದ್ರತಾ ಸಿಬ್ಬಂದಿಯಾದ ರಾಜಕುಮಾರ ಮಿಶ್ರಾ ಮತ್ತು ಸುಬ್ರತೋ ಸೇನ್ ಕರ್ತವ್ಯದಲ್ಲಿದ್ದ ವೇಳೆ, ಜೈಬ್ ಜುಬೈರ್ ಅನ್ಸಾರಿ ಎಂಬಾತ ಸ್ಥಳಕ್ಕೆ ಬಂದು ಅವರೊಂದಿಗೆ ಮಾತನಾಡಲು ಆರಂಭಿಸಿದ್ದಾನೆ. ಪ್ರಾಥಮಿಕವಾಗಿ ಯಾವುದೇ ಅನುಮಾನ ಮೂಡದಂತೆ ನಡೆದುಕೊಂಡ ಆರೋಪಿ, ನಂತರ ಅವರ ಹೆಸರು, ಮೂಲಸ್ಥಳ ಹಾಗೂ ಧರ್ಮ ವಿಚಾರಿಸಿದ್ದಾನೆ. ಬಳಿಕ ಇಸ್ಲಾಮಿಕ್ ಕಲ್ಮಾ ಪಠಿಸಲು ಹೇಳಿದ್ದಾನೆ. ಅವರು ಅದನ್ನು ಹೇಳಲು ವಿಫಲವಾದಾಗ ತಕ್ಷಣವೇ ಚೂರಿ ತೆಗೆದು ನಿರ್ದಾಕ್ಷಿಣ್ಯವಾಗಿ ಇರಿದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ➡ಪುಟ ೭



- ಸಂತ್ರಸ್ತರ ಧರ್ಮ ಗುರಿಯಾಗಿಸಿ ದಾಳಿ
- ಕಲ್ಮಾ ಹೇಳಲು ಒತ್ತಾಯಿಸಿ ವಿಫಲ, ಚೂರಿ ಇರಿತ
- ಇಬ್ಬರು ಭದ್ರತಾ ಸಿಬ್ಬಂದಿಗೆ ಗಂಭೀರ ಗಾಯ
- ಏಕಾಂಗಿ ಉಗ್ರ ದಾಳಿ ಮಾದರಿ ಶಂಕೆ
- ಪ್ರಕರಣ ಎಟಿಎಸ್‌ಗೆ ಹಸ್ತಾಂತರ

### ಏನು ಈ ಏಕಾಂಗಿ ಉಗ್ರ ದಾಳಿ?

ಏಕಾಂಗಿ ಉಗ್ರ ಎಂದರೆ ಯಾವುದೇ ಸಂಘಟಿತ ಉಗ್ರ ಸಂಘಟನೆಯ ನೇರ ಮಾರ್ಗದರ್ಶನವಿಲ್ಲದೆ, ತೀವ್ರವಾದ ಸಿದ್ಧಾಂತಗಳಿಂದ ಪ್ರೇರಿತನಾಗಿ ಒಬ್ಬ ವ್ಯಕ್ತಿ ನಡೆಸುವ ಹಿಂಸಾಚಾರ. ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ವೇದಿಕೆಗಳ ಮೂಲಕ ಸ್ವಯಂ ಮೂಲಭೂತವಾದಿತನ ಹೆಚ್ಚುತ್ತಿರುವುದು ಈ ಮಾದರಿಯ ದಾಳಿಗಳಿಗೆ ಕಾರಣವಾಗುತ್ತಿದೆ.

### ಐಸಿಸ್ ಮಾದರಿ ಪ್ರೇರಿತ

ಇಲ್ಲಿಯವರೆಗೆ ಯಾವುದೇ ಉಗ್ರ ಸಂಘಟನೆಯೊಂದಿಗೆ ನೇರ ಸಂಪರ್ಕದ ದೃಢ ಸಾಕ್ಷ್ಯ ಸಿಕ್ಕಿಲ್ಲವಾದರೂ, ಐಸಿಸ್ ಮಾದರಿಯ ಪ್ರಚಾರದಿಂದ ಪ್ರೇರಿತನಾಗಿರುವ ಸಾಧ್ಯತೆಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಸಂಘಟಿತ ನೇಮಕಾತಿ ಇಲ್ಲದೆ, ಆನ್‌ಲೈನ್ ಪ್ರಚಾರದ ಮೂಲಕ ವ್ಯಕ್ತಿಗಳು ಸ್ವಯಂ ಮೂಲಭೂತವಾದಿಗೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವುದನ್ನು ಈ ಘಟನೆ ಮತ್ತೊಮ್ಮೆ ಹೊರಹಾಕಿದೆ ಎಂದು ಭದ್ರತಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



### ಆನ್‌ಲೈನ್ ಮೂಲಭೂತ ವಾದಿತನ ಸುಳಿವು

ಪ್ರಾಥಮಿಕ ತನಿಖೆಯಲ್ಲಿ ಆರೋಪಿ ಟೆಲಿಗ್ರಾಂ ವಾಹಿನಿಗಳ ಮೂಲಕ ಹಿಂಸಾತ್ಮಕ ಜಿಹಾದ್ ಪ್ರಚಾರ ವೀಕ್ಷಿಸಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಗಾಜಾ ಸೇರಿದಂತೆ ಜಾಗತಿಕ ಸಂಘರ್ಷಗಳ ಉಲ್ಲೇಖಗಳು ಹಾಗೂ ಜಿಹಾದ್ ಕುರಿತ ಟಿಪ್ಪಣಿಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ. ನೇರ ಉಗ್ರ ಸಂಘಟನೆಯ ಸಂಪರ್ಕದ ಸಾಕ್ಷ್ಯ ಸಿಕ್ಕಿಲ್ಲವಾದರೂ, ಐಸಿಸ್ ಮಾದರಿಯ ಪ್ರಚಾರದಿಂದ ಪ್ರೇರಿತನಾಗಿರುವ ಸಾಧ್ಯತೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

### 2,016 ಕೋಟಿ ರೂ. ದಾಖಲೆ ವಹಿವಾಟು: ಎಂ.ಬಿ.ಪಾಟೀಲ್

# ಕೆಎಸ್ಡಿಎಲ್‌ಗೆ ₹507 ಕೋಟಿ ಲಾಭ

• **ಬೆಂಗಳೂರು:** 110 ವರ್ಷ ಇತಿಹಾಸವಿರುವ, ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) 2025-26ನೇ ಹಣಕಾಸು ವರ್ಷದಲ್ಲಿ ಇದೇ ಮೊದಲ ಬಾರಿಗೆ 2,016 ಕೋಟಿ ರೂ. ವಹಿವಾಟು ನಡೆಸಿದ್ದು, 507 ಕೋಟಿ ರೂ. ಲಾಭ ಗಳಿಸಿದೆ. ಇದು ಸಂಸ್ಥೆಯ ಪಾಲಿಗೆ ಚಾರಿತ್ರಿಕ ಮೈಲಿಗಲ್ಲಾಗಿದ್ದು, ಸಾರ್ವಜನಿಕ ಉದ್ದಿಮೆಗಳ ಸಾಧನೆಯಲ್ಲಿ ಕಿರೀಟಪ್ರಾಯ ವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಮಂಗಳವಾರ ಹೇಳಿದ್ದಾರೆ. ಸಂಸ್ಥೆಯ ಈ ಅಪೂರ್ವ ಸಾಧನೆ ಸಂಭ್ರಮಾಚರಣೆ ನಿಮಿತ್ತ ನಗರದ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಮೈಸೂರು ಸ್ಯಾಂಡಲ್‌ನ ಸಾಧನೆ ಶಿಖರ ಕಾರ್ಯಕ್ರಮದಲ್ಲಿ ಸಿಬ್ಬಂದಿ, ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಥೆಯು ಮೊದಲ 1 ಸಾವಿರ ಕೋಟಿ ರೂ. ವಹಿವಾಟು ತಲುಪಲು 105 ವರ್ಷ ತೆಗೆದುಕೊಂಡಿತ್ತು. ➡ಪುಟ ೭



### ರೈತರಿಗೆ ಉತ್ತೇಜನ

ಸಂಸ್ಥೆಯ ಹೆಮ್ಮೆಯ ಉತ್ಪನ್ನವಾದ ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆಯೇ ಮೂಲವಸ್ತುವಾಗಿದೆ. ಇದರ ಸುಗಮ ಪೂರೈಕೆಗೆ ಸಂಸ್ಥೆಯು ರೈತರೊಂದಿಗೆ ಕೈಜೋಡಿಸಿದ ಗ್ರೋ ಮೋರ್ ಸ್ಯಾಂಡಲ್ ಕಾರ್ಯಕ್ರಮ ರೂಪಿಸಿದೆ. 10 ವರ್ಷಗಳಲ್ಲಿ 10 ಸಾವಿರ ಎಕರೆ ಗಂಧದ ನೆಡುತೋಪು ಬೆಳೆಸಲಾಗುವುದು. ➡ಪುಟ ೭



ಲೋಕಭವನದಲ್ಲಿ ನೂತನವಾಗಿ ನಿರ್ಮಿಸಿರುವ ನವೀಕೃತ ಸ್ವಾಗತ ಕೇಂದ್ರ ಮತ್ತು ಕಾಮಧೇನು ಲೋಕ ಗೋಶಾಲೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಉದ್ಘಾಟಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶಾಸಕ ಎ.ಎಸ್. ಪೊನ್ನಣ್ಣ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸತ್ಯನಾರಾಯಣ್ ಸೇರಿದಂತೆ ಇತರರಿದ್ದರು.

### ಕೈ ವರಿಷ್ಠರ ಜತೆ ಸಚಿವರ ಚರ್ಚೆ

• **ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಿಲ್ಲಿಗೆ ಹೋಗಿ ಬಂದ ಬೆನ್ನಲ್ಲೇ ಸಚಿವರಾದ ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಕೆ.ಎಚ್. ಮುನಿಯಪ್ಪ ಅವರು ದಿಲ್ಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಚರ್ಚೆ ನಡೆಸಿದ್ದಾರೆ. ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆ ಹಾಗೂ ಗೊಂದಲಗಳ ಬಗ್ಗೆ ವರಿಷ್ಠರಿಂದ ಸ್ಪಷ್ಟ ಸಂದೇಶ ಬಯಸಿರುವ ಈ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ್ದು, ಸಂಪುಟ ವಿಸ್ತರಣೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮತ್ತು ನಾಯಕತ್ವ ಬದಲಾವಣೆ ಗೊಂದಲದ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೇ ರಾಜ್ಯ ರಾಜಕೀಯದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸ್ಪಷ್ಟನೆ ನೀಡುವಂತೆ ಹೈಕಮಾಂಡ್ ನಾಯಕರಿಗೆ ಮನವಿ ಮಾಡಿದ್ದಾರೆ. ➡ಪುಟ ೭

**ಮಹದೇವಪ್ಪ, ಮುನಿಯಪ್ಪ, ಸತೀಶ್ ಜಾರಕಿಹೊಳಿ ದಿಲ್ಲಿಗೆ ದೌಡು**



### ದಾವೂದ್ ಸಾಮ್ರಾಜ್ಯದ ಪತನ

• ಪುಟ ೧೨

ಸುದ್ದಿ ಸಮಗ್ರ

### ಮೇ ಅಂತ್ಯಕ್ಕೆ ರಷ್ಯಾ ಪೂರೈಕೆ | ರಕ್ಷಣೆ ಬಲವರ್ಧನೆ

# ಸೇನೆಗೆ 4 ಸುದರ್ಶನ ಚಕ್ರ ಬಲ

• **ಹೊಸದಿಲ್ಲಿ:** ಮೇ ತಿಂಗಳಾಂತ್ಯದೊಳಗೆ 4 ಎಸ್-400 ಟ್ರಯಂಫ್ ವಾಯು ರಕ್ಷಣಾ ವ್ಯವಸ್ಥೆಗಳನ್ನು (ಸುದರ್ಶನ ಚಕ್ರ) ರಷ್ಯಾ ಪೂರೈಕೆ ಮಾಡಲಿದ್ದು, ಅವುಗಳನ್ನು ಪಾಕಿಸ್ತಾನ ವಿರುದ್ಧ ಭಾರತದ ಕ್ಷಿಪಣಿ ವ್ಯವಸ್ಥೆ ಬಲಗೊಳಿಸುವ ನಿಟ್ಟಿನಲ್ಲಿ ರಾಜಸ್ಥಾನ ಸೆಕ್ಟರ್‌ನಲ್ಲಿ ನಿಯೋಜಿಸುವ ಸಾಧ್ಯತೆಯಿದೆ ಎಂದು ಭಾರತೀಯ ಸೇನೆಯ ಮೂಲಗಳು ಮಂಗಳವಾರ ತಿಳಿಸಿವೆ.

ಕಳೆದ ವಾರ ನಾಲ್ಕು ಸುದರ್ಶನ ಚಕ್ರ (ಎಸ್-400)ಗಳ ರವಾನೆಗೂ ಮುನ್ನ ಭಾರತೀಯ ವಾಯುಪಡೆ (ಐಎಎಫ್) ಅಧಿಕಾರಿಗಳು ಅಗತ್ಯ ಪರಿಶೀಲನೆ ನಡೆಸಿದ್ದು, ನಂತರ ಅವುಗಳನ್ನು ಹಡಗುಗಳಿಗೆ ಲೋಡ್ ಮಾಡಲಾಗಿದೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಪ್ರದೇಶಗಳ ಮೇಲೆ ನಡೆಸಿದ ಆಪರೇಷನ್ ಸಿಂಧೂರ ಪ್ರತಿದಾಳಿಯಲ್ಲಿ ಭಾರತ, ಸುದರ್ಶನ ಚಕ್ರ ಎಂದೇ ಕರೆಯಲ್ಪಡುವ ಎಸ್-400 ವಾಯು ರಕ್ಷಣಾ ವ್ಯವಸ್ಥೆಗಳನ್ನೇ ಹೆಚ್ಚು ಪರಿಣಾಮಕಾರಿ ರೀತಿ ಬಳಸಿಕೊಂಡಿತ್ತು. ಸಿಂಧೂರ ಕಾರ್ಯಾಚರಣೆ ವಾರ್ಷಿಕೋತ್ಸವದ ಸಂದರ್ಭ ರಷ್ಯಾ ಇನ್ನೂ 4 ಎಸ್-400 ವಾಯು ರಕ್ಷಣಾ ವ್ಯವಸ್ಥೆಗಳನ್ನು ಪೂರೈಕೆ ಮಾಡಲಿದೆ. ➡ಪುಟ ೭



- 280 ಹೆಚ್ಚುವರಿ ಎಸ್-400 ಶೀಘ್ರ ಖರೀದಿ ಸಾಧ್ಯತೆ
- 400 ಕಿ.ಮೀ. ಪಾಕ್ ಗಡಿಯೊಳಗೆ ದಾಳಿ ನಡೆಸುವ ಉದ್ದೇಶದಿಂದ ರಾಜಸ್ಥಾನದಲ್ಲಿ ನಿಯೋಜನೆ
- 400 ಕಿ.ಮೀ. ದೂರವ್ಯಾಪ್ತಿ ಕ್ಷಿಪಣಿ ದಾಳಿ ಸಾಮರ್ಥ್ಯ

**ರಕ್ಷಣಾ ಆಧುನೀಕರಣ** • ಪುಟ ೭

### ಒಳಮೀಸಲಾತಿಗೆ ಸರ್ಕಾರ ಆದೇಶ

• **ಬೆಂಗಳೂರು:** ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ ಒಳಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಈ ಮೀಸಲಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಡುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿಗೆ ಲಭ್ಯ ಶೇ.15 ಮೀಸಲಾತಿಯಲ್ಲಿ ಪ್ರವರ್ಗ ಎ (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ ಬಿ (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ ಸಿಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ. 5.25, 5.25, 4.50 ಪ್ರಮಾಣದಲ್ಲಿ ಒಳಮೀಸಲಾತಿ ಜಾರಿಗೊಳಿಸಿ ಆದೇಶಿಸಲಾಗಿದೆ.
• ವಿವರ ಪುಟ ೭



| ಬೆಳ್ಳಿ ಬಂಗಾರ (ಬೆಂಗಳೂರು) | ಬೆಳ್ಳಿ: 2,60,000(2,60,000) ಅಪರಂಜಿ ಚಿನ್ನ: 1,50,930(1,53,710) ಆಭರಣ ಚಿನ್ನ: 1,38,350(1,40,900) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ,(ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ | ಬಿಎಸ್‌ಇ 76,886(416↓) ಎನ್‌ಎಸ್‌ಇ 23,995(97↓) | $1=₹94.26 |
|---|---|---|---|---|

# ಬಸವಣ್ಣ ಜೈವಿಕ ಉದ್ಯಾನ ನಿರ್ಮಾಣಕ್ಕೆ ಅನುಮೋದನೆ

**ಬೆಂಗಳೂರು:** ಮಾದಪ್ಪನಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನ ನಿರ್ಮಾಣ ಮಾಡಲು ಸಚಿವ ಸಂಪುಟದ ಅನುಮೋದನೆಯೂ ಆಗಿದ್ದು, ಮುಂದಿನ ತಿಂಗಳು ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ ಮಾಡಿಸಲಾಗುವುದು ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.



ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ವಿಶ್ವಗುರು ಬಸವಣ್ಣ ಬೃಹತ್ ಜೈವಿಕ ಉದ್ಯಾನವನ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ನಂತರದ ಅತಿ ದೊಡ್ಡ ಉದ್ಯಾನವಾಗಲಿದೆ. ಇದು ಶತಮಾನದ ಸಾಧನೆ ಎಂದರೂ ತಪ್ಪಾಗಲಾರದು. ಹಸಿರೇ ಉಸಿರು ಎಂಬುದನ್ನು ಎಲ್ಲರೂ ಮನಗಾಣಬೇಕು. ಬೆಂಗಳೂರಿಗರಲ್ಲಿ ಹಸಿರು ಕಲ್ಪನೆ ಹೆಚ್ಚಬೇಕು. ಇಲ್ಲವಾದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ ಎಂದರು. ಹಿಂದೆ ಧರ್ಮೋ ರಕ್ಷತಿ ರಕ್ಷಿತಃ ಎಂದು ಹೇಳುತ್ತಿದ್ದರು. ಇಂದು ನಾವು ವೃಕ್ಷೋ ರಕ್ಷತಿ ರಕ್ಷಿತಃ ಎಂದು ಹೇಳಬೇಕು. ಕಾರಣ ಮರಗಳಿದ್ದರೆ ನಮ್ಮ ಬದುಕು ಎಂದು ಎಚ್ಚರಿಸಿದರು.

**ಏರ್ ಶೋ ನಡೆಯುವ ಭೂಮಿಯೂ ಅರಣ್ಯ ಇಲಾಖೆಯದ್ದು:** ಬೆಂಗಳೂರಿನಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಅಂತಾರಾಷ್ಟ್ರೀಯ ವೈಮಾನಿಕ ಪ್ರದರ್ಶನ ಏರ್ ಶೋ ನಡೆಯುವ ಗಂಟಿಗಾನಹಳ್ಳಿಯಲ್ಲಿರುವ ಯಲಹಂಕ ವಾಯುನೆಲೆ ಕೂಡ ಅರಣ್ಯ ಭೂಮಿಯಾಗಿದೆ. ಗಂಟಿಗಾನಹಳ್ಳಿ ಗ್ರಾಮದ 159 ಎಕರೆ ಪ್ರದೇಶ ಸರ್ಕಾರಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ವಾಯುಪಡೆ ತೀರುವಳಿ ಪ್ರಸ್ತಾವನೆ ಸಲ್ಲಿಸಿ, ಪರ್ಯಾಯ ಭೂಮಿ ನೀಡಿದರೆ ಈ ಪ್ರದೇಶವನ್ನು ಪಡೆಯದಿದ್ದರೆ, ಅದನ್ನು ಅರಣ್ಯ ಇಲಾಖೆಗೆ ಹಿಂಪಡೆಯಲು ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಭಾರತೀಯ ವಾಯುಪಡೆ ಈ ಪ್ರದೇಶವನ್ನು ಪ್ರಸ್ತುತ ರನ್ ವೇ ಆಗಿ ಉಪಯೋಗಿಸುತ್ತಿದೆ ಎಂದರು.

ಬಿಜೆಪಿ ಪ್ರತಿಭಟನೆ




ಬೆಂಗಳೂರಿನ ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನಡೆದ (ಬಿಐಸಿ) ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

# ಪರೀಕ್ಷೆ 2ಗೆ ನೋಂದಾಯಿಸಿ

**ಬೆಂಗಳೂರು:** 2026ನೇ ಸಾಲಿನ ರಾಜ್ಯದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶ ಈಗಾಗಲೇ ಪ್ರಕಟಗೊಂಡಿದ್ದು, ಶೇ.94.18 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲೇ ದಾಖಲೆ ನಿರ್ಮಾಣವಾಗಿದ್ದು, ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಎಲ್ಲ ವಿದ್ಯಾರ್ಥಿಗಳನ್ನು ಮುಂಬರುವ ಪರೀಕ್ಷೆ 2ಕ್ಕೆ ನೋಂದಾಯಿಸಲು ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧುಬಂಗಾರಪ್ಪ ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ 1,716 ಜನ ವಿದ್ಯಾರ್ಥಿಗಳು ಸೇರಿದಂತೆ ಅಂದಾಜು 45,415 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯ ಉಜ್ವಲಗೊಳಿಸುವುದು ಸರ್ಕಾರ, ಶಿಕ್ಷಣ ಇಲಾಖೆ ಹಾಗೂ ನಮ್ಮೆಲ್ಲರ ಹೊಣೆ. ಹಾಗಾಗಿ ಪರೀಕ್ಷೆಯ ಫಲಿತಾಂಶದಿಂದಾಗಿ ಯಾವುದೇ ವಿದ್ಯಾರ್ಥಿಯು ನಿರಾಸೆಗೊಂಡು ತನ್ನ ಶಿಕ್ಷಣ ವನ್ನು ಮೊಟಕುಗೊಳಿ ಸಬಾರದು ಎಂಬುದು ಸರ್ಕಾರದ ದೃಢವಾದ ಆಶಯವಾಗಿದೆ ಎಂದು ತಿಳಿಸಿದ್ದಾರೆ.

**ಮೇ18ರಿಂದ ಎಸೆಸ್ಸೆಲ್ಸಿ ಪರೀಕ್ಷೆ-2**

ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣರಾದ ಅಥವಾ ಅಂಕಗಳನ್ನು ಸುಧಾರಿಸಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳಿಗಾಗಿ ಮೇ 18 ರಿಂದ 25ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ -2 ನಡೆಯಲಿದೆ. ಈ ಬಾರಿ ಮೂರನೇ ಪರೀಕ್ಷೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಕೇವಲ ಎರಡು ಪರೀಕ್ಷೆಗಳ ಅವಕಾಶ ಮಾತ್ರ ಲಭ್ಯವಿರಲಿದೆ.

ಈ ಹಿನ್ನೆಲೆಯಲ್ಲಿ ಅನುತ್ತೀರ್ಣರಾಗಿರುವ ಎಲ್ಲ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆ-2ಕ್ಕೆ ಕಡ್ಡಾಯವಾಗಿ ನೋಂದಾಯಿಸಿ, ಅವರನ್ನು ಶೈಕ್ಷಣಿಕವಾಗಿ ಸಜ್ಜುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಲಾ ಇಲಾಖೆಯ ಉಪನಿರ್ದೇಶಕರಿಗೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

## ಕಿರುಸುದ್ದಿ

### ಮೇ 15ಕ್ಕೆ ಡಿಕೆಶಿಗೆ ಸಿಎಂ ಸ್ಥಾನ: ಇಕ್ಬಾಲ್ ಹುಸೇನ್

**ರಾಮನಗರ:** ಮೇ 15ಕ್ಕೆ ಡಿ.ಕೆ. ಶಿವಕುಮಾರ್ ಸಿಎಂ ಆಗೋದು ಫಿಕ್ಸ್, ಇದೇ ನನ್ನ ಅಂತಿಮ ದಿನಾಂಕ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ತಿಳಿಸಿದರು. ಡಿ.ಕೆ. ಶಿವಕುಮಾರ್ ಸಿಎಂ ಆಗಲು ಈ ಹಿಂದೆ ಎರಡ್ಮೂರು ದಿನಾಂಕ ನೀಡಿದ್ದ ಇಕ್ಬಾಲ್ ಹುಸೇನ್, ಇದೀಗ ಮೇ 15ಕ್ಕೆ ಅಂತಿಮ ದಿನ ಎಂದು ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಈ ಅವಧಿಯಲ್ಲೇ ಡಿಕೆಶಿ ಸಿಎಂ ಆಗೇ ಆಗುತ್ತಾರೆ. ಅವರಿಗೆ ಅವಕಾಶ ಸಿಗಬೇಕು ಅನ್ನೋದು ಎಲ್ಲರ ಬಯಕೆ. ಅವರಿಗೆ ಸಿಎಂ ಸ್ಥಾನ ಸಿಗಬೇಕು ಎಂಬುದು ನಮ್ಮೆಲ್ಲರ ಆಸೆ. ಅವರ ಮಾರ್ಗದರ್ಶನದಲ್ಲಿ ನಾವು ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಅವರ ನೇತೃತ್ವದಲ್ಲಿ ಈ ರಾಜ್ಯದ ಅಭಿವೃದ್ಧಿ ನೋಡಬೇಕು ಅಂತ ಆಸೆ ಇದೆ. ಮೇ 15ರ ಒಳಗಡೆ ಅವರಿಗೆ ಅಧಿಕಾರ ಸಿಗುತ್ತೆ ಎನ್ನುವ ಅಭಿಲಾಷೆ ಇದೆ ಎಂದರು. ಸತೀಶ್ ಜಾರಕಿಹೊಳಿ ಹಾಗೂ ಎಚ್‌ಸಿ.ಮಹಾದೇವಪ್ಪ ದೆಹಲಿಗೆ ಹೋಗಿ ಹೈಕಮಾಂಡ್ ನಾಯಕರನ್ನ ಭೇಟಿ ಮಾಡಿರುವ ಬಗ್ಗೆ ಮಾತನಾಡಿದ ಅವರು, ನಮ್ಮ ಹಿರಿಯ ನಾಯಕರುಗಳು. ಪಕ್ಷದ ವರಿಷ್ಠರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ? ತಮ್ಮ ಕಷ್ಟ- ಸುಖ ಮಾತಾಡಲು ಹೋಗಿರುತ್ತಾರೆ ಎಂದರು.



### ಮೇ 6ರಿಂದ ವ್ಯಕ್ತಿತ್ವ ಪರೀಕ್ಷೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಒಟ್ಟು 384 ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆಯ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದೆ. 310 ಉಳಿಕೆ ಮೂಲಕ ವೃಂದ ಮತ್ತು 74 ಹೈದರಾಬಾದ್ ಕರ್ನಾಟಕ (ಎಚ್‌ಕೆ) ವೃಂದದ ಹುದ್ದೆಗಳು ಸೇರಿದಂತೆ ಒಟ್ಟು 384 ಹುದ್ದೆಗಳು. ಅರ್ಹ ಅಭ್ಯರ್ಥಿಗಳಿಗೆ ವ್ಯಕ್ತಿತ್ವ ಪರೀಕ್ಷೆ ಮತ್ತು ಮೂಲ ದಾಖಲೆಗಳ ಪರಿಶೀಲನೆಯು 2026 ರ ಮೇ 6 ರಿಂದ 10 ರವರೆಗೆ ವಿವಿಧ ದಿನಾಂಕಗಳಲ್ಲಿ ನಡೆಯಲಿದೆ. ಮುಖ್ಯ ಪರೀಕ್ಷೆಯಿಂದ 1:3ರ ಅನುಪಾತದಲ್ಲಿ ಅರ್ಹತೆ ಪಡೆದ ಒಟ್ಟು 1,158 ಅಭ್ಯರ್ಥಿಗಳು ಈ ಹಂತಕ್ಕೆ ಆಯ್ಕೆಯಾಗಿದ್ದಾರೆ. ಆಯೋಗದ ಸಭೆಯ ತೀರ್ಮಾನದಂತೆ ವ್ಯಕ್ತಿತ್ವ ಪರೀಕ್ಷೆಯ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅಭ್ಯರ್ಥಿಗಳ ನೋಂದಣಿ ಸಂಖ್ಯೆ, ಹೆಸರು, ಪರೀಕ್ಷೆಯ ದಿನಾಂಕ, ಸಮಯ ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಆಯೋಗದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳಿಗೆ ಈಗಾಗಲೇ ಸೂಚನಾ ಪತ್ರಗಳನ್ನು ರವಾನಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್ http://kpsc.kar.nic.inಗೆ ಭೇಟಿ ನೀಡಬಹುದಾಗಿದೆ ಎಂದು ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪತ್ನಿ ಹತ್ಯೆಗೈದು ಪತಿ ಆತ್ಮಹತ್ಯೆ

**ಕಲಬುರಗಿ:** ಜಿಲ್ಲೆಯ ಅಫಜಲಪುರ ತಾಲೂಕಿನ ಮದರಾ ಕೆ ಗ್ರಾಮದಲ್ಲಿ ಹೃದಯವಿದ್ರಾವಕ ಘಟನೆ ನಡೆದಿದ್ದು, ಗಂಡನೊಬ್ಬ ತನ್ನ ಹೆಂಡತಿಯನ್ನು ಬರ್ಬರವಾಗಿ ಹತ್ಯೆಗೈದು ಬಳಿಕ ತಾನು ಆತ್ಮಹತ್ಯೆಗೆ ಶರಣಾದ ಘಟನೆ ಬೆಳಕಿಗೆ ಬಂದಿದೆ. ಅಂಜಲಿ (23) ಮೃತಪಟ್ಟ ದುರ್ದೈವಿ ಎಂದು ಗುರುತಿಸಲಾಗಿದೆ. ಆರೋಪಿಯಾಗಿರುವ ಗಂಡ ಲಕ್ಷ್ಮೀಪುತ್ರ, ಕುಡುಗೋಲಿನಿಂದ ಹೆಂಡತಿಯನ್ನು ಕೊಚ್ಚಿ ಕೊಲೆ ಮಾಡಿದ ಬಳಿಕ, ತನ್ನ ಮಗುವಿನೊಂದಿಗೆ ಗ್ರಾಮದ ಹೊರವಲಯದಲ್ಲಿರುವ ಬಾವಿಗೆ ಹಾರಿದ್ದಾನೆ ಎಂದು ತಿಳಿದುಬಂದಿದೆ. ಬಾವಿಗೆ ಹಾರುವ ವೇಳೆ ಸ್ಥಳೀಯರು ಮಗುವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಲಕ್ಷ್ಮೀಪುತ್ರ ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿವೆ. ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ರೇವೂರು ಪೊಲೀಸರು ಹಾಗೂ ಸುಕೋ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹ

# ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ₹10 ಕೋಟಿ ನೀಡಿ

**ಬೆಂಗಳೂರು:** ರಾಜ್ಯದಲ್ಲಿ ಬರಗಾಲದ ಸ್ಥಿತಿ ಕಂಡುಬರುತ್ತಿದ್ದರೆ, ಸಚಿವರು ಅಧಿಕಾರಕ್ಕಾಗಿ ದಿಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಕುಡಿಯುವ ನೀರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್‌ನ ನಾಯಕತ್ವವನ್ನು ಧಿಕ್ಕರಿಸಿ ಶಾಸಕರು ದಿಲ್ಲಿಗೆ ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ ನಾಯಕತ್ವಕ್ಕೆ ಮೂರು ಕಾಸಿನ ಬೆಲೆಯಿಲ್ಲ ಎಂಬುದು ಸಾಬೀತಾಗಿದೆ. ಒಳಮೀಸಲಾತಿಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳಲು ನಡೆಸಿದ ಸಚಿವ ಸಂಪುಟ ಸಭೆಯಲ್ಲಿ, ಡಿಸಿಎಂ ಡಿ.ಕೆ.ಶಿವಕುಮಾರ್ ಇರಲಿಲ್ಲ, ಅವರು ದಿಲ್ಲಿಯಲ್ಲಿದ್ದಾಗ ಸಭೆ ಮಾಡಿದ್ದಾರೆ ಎಂದರೆ ಕಾಂಗ್ರೆಸ್‌ನಲ್ಲಿ 2 ಬಣ ಸೃಷ್ಟಿಯಾಗಿದೆ ಎಂದೇ ಅರ್ಥ ಎಂದು ಟೀಕಿಸಿದರು.

ಎಲ್ಲ ಕಡೆ ಬರಗಾಲ ಕಂಡುಬಂದಿದ್ದು, ನೀರಿಗಾಗಿ ಹಾಹಾಕಾರ ಹೆಚ್ಚಿದೆ. ಜಾನುವಾರುಗಳಿಗೆ ನೀರು ಸಿಗುತ್ತಿಲ್ಲ, ಜನರಿಗೆ ಕುಡಿಯಲು ನೀರು ದೊರೆಯುತ್ತಿಲ್ಲ, ಇಂತಹ ಸಮಯದಲ್ಲಿ ಸಚಿವರು ದಿಲ್ಲಿ ಯಾತ್ರೆ ಮಾಡಿದರೆ, ಇದು ಜನರ ಪಾಲಿಗೆ ಸತ್ತ ಸರ್ಕಾರ ಎಂದೇ ಹೇಳಬೇಕು. ಕುಡಿಯುವ ನೀರಿಗಾಗಿ ಸರ್ಕಾರದಿಂದ ನಯಾಪೈಸೆ ಬಿಡುಗಡೆ ಮಾಡಿಲ್ಲ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ನೌಕರರ ಸಂಬಳ ಕಡಿತ ಮಾಡಲಾಗಿದೆ.

**ಜನಿವಾರ ಪ್ರಕರಣ: ಬಿಜೆಪಿ ಅಧಿಕಾರಕ್ಕೆ ಬಂದಾಗ ಕ್ರಮ**



ಕೃಪಾನಿಧಿ ಕಾಲೇಜಿನಲ್ಲಿ ಜನಿವಾರ ಕಿತ್ತುಹಾಕುವ ಪ್ರಕರಣ ನಡೆದಿದೆ. ಮೊದಲು ಈ ಘಟನೆ ಆದಾಗಲೇ ಸರ್ಕಾರದಿಂದ ಕಟ್ಟುನಿಟ್ಟಿನ ಆದೇಶ ಮಾಡಬೇಕಿತ್ತು. ಆಗದೇ ಇದ್ದುದರಿಂದ ಪದೇ ಪದೆ ಘಟನೆ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿರುವವರೇ ಜನಿವಾರ ತೆಗೆಸುರುವುದರ ವಿರುದ್ಧ ಮಾತಾಡಿದ್ದಾರೆ. ಇಷ್ಟಾದರೂ ಸರ್ಕಾರ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಕಾಂಗ್ರೆಸ್ ಪಕ್ಷ ಪರೋಕ್ಷವಾಗಿ ಇಂತಹ ಘಟನೆಗಳಿಗೆ ಬೆಂಬಲ ನೀಡುತ್ತಿದೆ. ಬಿಜೆಪಿ ಸರ್ಕಾರ ಬಂದ ಬಳಿಕ ಸೂಕ್ತ ನೀತಿ, ನಿಯಮ ರೂಪಿಸಿ ಶಿಕ್ಷೆ ನೀಡುವ ಕೆಲಸ ಮಾಡುತ್ತೇವೆ. ಕುಮ್ಮಕ್ಕು ನೀಡಿದ ಅಧಿಕಾರಿಗಳ ವಿರುದ್ಧವೂ ಕ್ರಮ ವಹಿಸುತ್ತೇವೆ ಎಂದು ಆರ್. ಅಶೋಕ ಹೇಳಿದರು.

**ಕುಕ್ಕರ್ ಬಾಂಬ್ ಸ್ಫೋಟ ಮಾಡಿದ ಭಯೋತ್ಪಾದಕನಿಗೆ ಗಲ್ಲು ಶಿಕ್ಷೆ ವಿಧಿಸಬೇಕಿತ್ತು. ಆತ ಜೈಲಿನಿಂದ ಹೊರಗೆ ಬಂದರೆ ಮತ್ತೆ ಅದೇ ಕೆಲಸ ಮುಂದುವರಿಸುತ್ತಾನೆ. ಸರ್ಕಾರ ಹೈಕೋರ್ಟ್‌ಗೆ ಅಪೀಲು ಮಾಡಿ ಹೆಚ್ಚು ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಅವನೊಂದಿಗೆ ಶಾಮೀಲಾಗಿದೆ ಎಂದು ಭಾವಿಸಬೇಕಾಗುತ್ತದೆ. ನಾವು ಕೂಡ ಅಪೀಲು ಮಾಡುತ್ತೇವೆ.**

■ ಆರ್. ಅಶೋಕ, ಪ್ರತಿಪಕ್ಷ ನಾಯಕ

ಕರ್ನಾಟಕಕ್ಕೂ ಅದೇ ಸ್ಥಿತಿ ಬರುವ ಲಕ್ಷಣ ಕಾಣುತ್ತಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕುಡಿಯುವ ನೀರಿಗಾಗಿ 10 ಕೋಟಿ ರೂ. ಬಿಡುಗಡೆ ಮಾಡಬೇಕು. ಇದನ್ನು ಬೋರ್‌ವೆಲ್ ಪುನಶ್ಚೇತನ, ಟ್ಯಾಂಕರ್ ನೀರು ಪೂರೈಕೆಗೆ ಬಳಸಬೇಕು ಎಂದು ಒತ್ತಾಯಿಸಿದರು.

ಕೂಡಲೇ ಗೋಶಾಲೆಗಳನ್ನು ನಿರ್ಮಿಸಿ, ಜಾನುವಾರುಗಳಿಗೆ ಮೇವು ಪೂರೈಸಬೇಕು. ಹವಾಮಾನ ಇಲಾಖೆಯ ವರದಿ ಪ್ರಕಾರ, ಈ ಬಾರಿ ಮಳೆ ಕಡಿಮೆ ಇರಲಿದೆ. ಇದನ್ನು ಮಾಡಲು ಆಗದಿದ್ದರೆ ಸಚಿವರು ದಿಲ್ಲಿಯಲ್ಲೇ ಕೂರಲಿ. ಉಳಿದ 2 ವರ್ಷವನ್ನು ದಿಲ್ಲಿಯಲ್ಲಿ ಕಳೆದರೆ ರಾಜ್ಯದ ಅಭಿವೃದ್ಧಿ ನಡೆಯಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಹಾಗೂ ಸಚಿವರು ಹೇಳಿಕೆ ನೀಡುವುದರಿಂದ ಪ್ರಯೋಜನವಿಲ್ಲ. ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ಈವರೆಗೆ ಹಣ ಬಿಡುಗಡೆ ಮಾಡಿಲ್ಲ, ಇದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಗೆ ಆದೇಶವನ್ನೂ ನೀಡಿಲ್ಲ, ಅಧಿಕಾರಿಗಳನ್ನು ಕೇಳಿದರೆ ಆದೇಶ ಬಂದಿಲ್ಲ ಎನ್ನುತ್ತಾರೆ ಎಂದು ದೂರಿದರು.

ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ ಮೇಲೆ ನಿಗಾ

# ಅಶ್ಲೀಲ ಹಾಡಿಗೆ ಕಡಿವಾಣ

**ಬೆಂಗಳೂರು:** ಇತ್ತೀಚಿನ ದಿನಗಳಲ್ಲಿ ಶಾಲಾ ಕಾರ್ಯಕ್ರಮಗಳಲ್ಲಿ ಮಕ್ಕಳು ಅಶ್ಲೀಲ ಹಾಡುಗಳಿಗೆ ಮತ್ತು ಸಂಸ್ಕೃತಿಗೆ ಹೊಂದಿಕೆಯಾಗದ ರೀತಿಯಲ್ಲಿ ನೃತ್ಯ ಮಾಡುವುದು ಹೆಚ್ಚುತ್ತಿರುವುದನ್ನು ಗಮನಿಸಿದ ಮೇರೆಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲೆ ನಿಗಾ ಇಡಲು ಶಿಕ್ಷಣ ಇಲಾಖೆಗೆ ಸರ್ಕಾರ ಆದೇಶ ಹೊರಡಿಸಿದೆ.



ಶಾಲೆ ಎಂಬುದು ಕೇವಲ ಪಠ್ಯಪುಸ್ತಕದ ಜ್ಞಾನ ನೀಡುವ ಸ್ಥಳವಲ್ಲ, ಬದಲಾಗಿ ಅದು ಮಗುವಿನ ವ್ಯಕ್ತಿತ್ವ ರೂಪಿಸುವ ತಾಣ. ಮಗುವಿನ ಬೆಳವಣಿಗೆಯಲ್ಲಿ ಸಂಸ್ಕಾರ, ವಿನಯತೆ, ಉತ್ತಮ ನಡತೆ, ಮಾನಸಿಕ ಸ್ಥಿತಿ ಮತ್ತು ನೈತಿಕ ಮೌಲ್ಯಗಳು ಅತ್ಯಗತ್ಯ. ಈ ಎಲ್ಲಾ ಗುಣಗಳು ಮಗುವಿನಲ್ಲಿ ಶಾಲಾ ಪರಿಸರದಲ್ಲಿ ಮೊಳಕೆಯೊಡೆಯುತ್ತದೆ.

ಶಾಲೆಯು ಮಗುವಿನ ಭವಿಷ್ಯಕ್ಕೆ ಅಡಿಪಾಯ ಹಾಕುವ ಕೇಂದ್ರವಾಗಿರುವುದರಿಂದ, ಅಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯೂ ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಉನ್ನತ ಮಟ್ಟದಲ್ಲಿರಬೇಕು ಎಂದು ಸರ್ಕಾರ ಹೇಳಿದೆ.

ಇತ್ತೀಚಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಶ್ಲೀಲ ಭಾವನೆಗಳನ್ನು ಕೆರಳಿಸುವ ಸಿನಿಮಾ ಹಾಡುಗಳಿಗೆ ಮಕ್ಕಳನ್ನು ಕುಣಿಸುವುದು ಕಂಡುಬರುತ್ತಿದೆ. ಇದರಿಂದ ಉಂಟಾಗುವ ದುಷ್ಪರಿಣಾಮಗಳು ಉಂಟಾಗುತ್ತಿವೆ. ಚಿಕ್ಕ ವಯಸ್ಸಿನ ಮಕ್ಕಳು ಅಶ್ಲೀಲ ಪದಗಳ ಅರ್ಥ ತಿಳಿಯದಿದ್ದರೂ, ಆ ಹಾಡುಗಳಿಗೆ ನರ್ತಿಸುವುದರಿಂದ ಅವರ ಮುಗ್ಧತೆ ನಾಶವಾಗುತ್ತದೆ. ಶಾಲೆಯಲ್ಲಿ ಸಿಗಬೇಕಾದ ಶಿಸ್ತು, ಸಂಸ್ಕೃತಿಯ ಬದಲಿಗೆ ಅನಗತ್ಯ ಚಟುವಟಿಕೆಗಳು ಮಕ್ಕಳ ನಡವಳಿಕೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಜ್ಞಾನಾರ್ಜನೆಯ ಕೇಂದ್ರಗಳು ಕೇವಲ ಮನರಂಜನೆಯ ಕೇಂದ್ರಗಳಾಗಿ ಬದಲಾಗುವುದು ಶಿಕ್ಷಣದ ಮೂಲ ಉದ್ದೇಶಕ್ಕೆ ಮಾರಕವಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

**ಸರ್ಕಾರದ ಪ್ರಮುಖ ನಿರ್ದೇಶನಗಳು**

- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳಲ್ಲಿ ಅಶ್ಲೀಲ ಅಥವಾ ದ್ವಂದ್ವಾರ್ಥವಿರುವ ಹಾಡುಗಳಿಗೆ ಮಕ್ಕಳಿಂದ ನೃತ್ಯ ಮಾಡಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
- ಮಕ್ಕಳಲ್ಲಿ ರಾಷ್ಟ್ರಾಭಿಮಾನ, ನಾಡಪ್ರೇಮ ಮತ್ತು ಸಕಾರಾತ್ಮಕತೆಯನ್ನು ಮೂಡಿಸುವ ಹಾಡುಗಳನ್ನು ಆರಿಸಿಕೊಳ್ಳಬೇಕು. ಕನ್ನಡ ನಾಡಿನ ಹಿರಿಮೆ, ಗರಿಮೆ ಮತ್ತು ಮೌಲ್ಯಾಧಾರಿತ ಹಾಡುಗಳಿಗೆ ಆದ್ಯತೆ ನೀಡಬೇಕು.
- ಮಕ್ಕಳಲ್ಲಿ ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಂತಹ ಸಾಹಿತ್ಯದ ಹಾಡುಗಳನ್ನೇ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಬೇಕು. ಹಾಡುಗಳು ಮತ್ತು ನೃತ್ಯಗಳ ಆಯ್ಕೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಶಾಲಾ ಆಡಳಿತ ಮಂಡಳಿಯೇ ನೇರ ಜವಾಬ್ದಾರರಾಗಿರುತ್ತಾರೆ.
- ಯಾವುದೇ ತಪ್ಪುಗಳಾದಲ್ಲಿ ಇವರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ನೃತ್ಯ ಅಥವಾ ಯಾವುದೇ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸುವ ಮಕ್ಕಳು ಸಭ್ಯವಾದ ಮತ್ತು ಸಂಸ್ಕೃತಿಗೆ ಪೂರಕವಾದ ಉಡುಪುಗಳನ್ನು ಧರಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

# ಒಳಮೀಸಲು ವರ್ಗೀಕರಣಕ್ಕೆ ವಿರೋಧ

**ಬೆಂಗಳೂರು:** ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ವರ್ಗೀಕರಣವನ್ನು ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳು ವಿರೋಧಿಸಿವೆ.



ಮಂಗಳವಾರ ನಗರದ ಗಾಂಧಿ ಭವನದಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ ನೇತೃತ್ವದಲ್ಲಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಬಂಜಾರ, ಭೋವಿ, ಕೊರಚ, ಕೊರಮ, ಸೂಕ್ಷ್ಮ ಸಮುದಾಯಗಳ ಮುಖಂಡರ ಸಭೆ ನಡೆಸಲಾಯಿತು.

ಪ್ರವರ್ಗ ಸಿ ಗುಂಪಿನಲ್ಲಿ ಬಲಗೈ ಸಂಬಂಧಿತ 16 ಜಾತಿಗಳು ಮತ್ತು ಎಡಗೈ ಸಂಬಂಧಿತ 9 ಜಾತಿಗಳು ವಿಲೀನಗೊಂಡಿವೆ. ಇವುಗಳನ್ನು ಬೇರ್ಪಡಿಸಬೇಕು. ನೇಮಕಾತಿ ರೋಸ್ಟರ್ ಬಿಂದು ನಿಗದಿ ನಿಯಮದಲ್ಲಿ ಅನ್ಯಾಯ ಮಾಡಬಾರದು. ತಕ್ಷಣ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಮತ್ತು ಸಚಿವ ಸಂಪುಟದ ಸದಸ್ಯರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಲಾಗುವುದು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಹೋರಾಟ ರೂಪಿಸಲಾಗುವುದು. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ನಿರ್ಧರಿಸಲಾಯಿತು.

**ಮತ್ತೊಂದು ಒಳಮೀಸಲಾತಿ ಬೇಡ**

ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿಯ ಪ್ರಕಾರ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅತೀ ಹಿಂದುಳಿದಿರುವ ಪ್ರವರ್ಗ ಸಿ ಗುಂಪಿಗೆ ಶೇ.5 ಕ್ಕೂ ಹೆಚ್ಚು ಮೀಸಲಾತಿಯನ್ನು ಹಂಚಿಕೆ ಮಾಡಬೇಕು. ಅತಿ ಹಿಂದುಳಿದಿರುವ 64 ಜಾತಿಗಳನ್ನು ಒಳಗೊಂಡ ಈ ಗುಂಪನ್ನು ನ್ಯಾಯ ಬದ್ಧವಾಗಿ ಮೊದಲನೆಯ ಗುಂಪು ಎಂದು ನಮೂದಿಸಬೇಕು. ಪ್ರವರ್ಗ ಸಿ ನಲ್ಲಿ ಒಳಮೀಸಲಾತಿ ಒಳಗೆ ಮತ್ತೊಂದು ಒಳಮೀಸಲಾತಿ ಮಾಡಬಾರದು ಎಂದು ಒತ್ತಾಯಿಸಲಾಯಿತು.

# ಮೇ 1ಕ್ಕೆ ಕರುಣಾಶರಧಿ ಪುಸ್ತಕ ಸಮರ್ಪಣೆ

**ಕುಮಟಾ:** ದೀವಗಿಯ ಶ್ರೀ ರಾಮಾನಂದ ಅವಧೂತ ಸ್ವಾಮೀಜಿ ಮಠದಲ್ಲಿ ವೈಶಾಖ ಪೂರ್ಣಿಮೆಯ ದಿನ ಮೇ 1ರಂದು ಶ್ರೀ ಗುರು ಹಾಗೂ ಶ್ರೀದೇವರ ವಿಶೇಷ ಪೂಜೆ, ಹವನಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.



ಈ ಪುಣ್ಯಪ್ರದ ಪೂರ್ಣಿಮೆಯ ದಿನದಂದು ಮಧ್ಯಾಹ್ನ ಶ್ರೀಗುರುಗಳ ಅನುಗ್ರಹದಿಂದ ಶ್ರೀ ವಿನಾಯಕ ವೆಂ ಭಟ್, ಅಂಬ್ಲಿಹೊಂಡ ಇವರು ಕೈಂಕರ್ಯ ಭಾವದಿಂದ ರಚಿಸಿದ 'ಕರುಣಾಶರಧಿ-ಭಗವಾನ್ ಸದ್ಗುರು ಶ್ರೀ ರಾಮಾನಂದ ಅವಧೂತ ಮಹಾಸ್ವಾಮಿಗಳು' ಎನ್ನುವ ಪುಸ್ತಕದ ಸಮರ್ಪಣೆ ಹಾಗೂ ಲೋಕಾರ್ಪಣೆಯ ಕಾರ್ಯವೂ ಶ್ರೀ ಗುರುಗಳ ದಿವ್ಯ ಪಾದ ಸಾನ್ನಿಧ್ಯದಲ್ಲಿ ನಡೆಯಲಿದೆ.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟ, ಯಕ್ಷಗಾನ ಕಲಾವಿದ ಹಾಗೂ ಲೇಖಕ, ದಿವಾಕರ ಹೆಗಡೆ, ನಿವೃತ್ತ ಪ್ರಾಂಶುಪಾಲ ಹಾಗೂ ಕ್ರೀಡಾ ಪತ್ರಕರ್ತ ವಸಂತ ಮುರ್ಡೇಶ್ವರ, ದೀವಗಿಯ ಶ್ರೀ ರಾಮಾನಂದ ಅವಧೂತ ಸ್ವಾಮೀಜಿ ಮಠ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಪ್ರಕಾಶ ಪಂಡಿತ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪ್ರಸಾದ ಭೋಜನದ ನಂತರ, ಅತ್ಯಂತ ಅನನ್ಯವಾದ 'ಕನಕ ಜಾನಕಿ' ಎಂಬ ಏಕವ್ಯಕ್ತಿ ತಾಳಮದ್ದಲೆಯ ಕಾರ್ಯಕ್ರಮವಿದ್ದು, ದಿವಾಕರ ಹೆಗಡೆಯವರು ಪ್ರಸ್ತುತ ಪಡಿಸಲಿದ್ದಾರೆ.

# 12 ಪೊಲೀಸ್ ಠಾಣೆಗಳ ಸ್ಥಾಪನೆಗೆ ಅನುಮೋದನೆ

**ಕಲಬುರಗಿ:** ಈ ಸಲದ ಬಜೆಟ್‌ನಲ್ಲಿ 12 ಪೊಲೀಸ್ ಠಾಣೆಗಳ ಸ್ಥಾಪನೆಗೆ ಅನುಮೋದನೆ ಕೊಡಲಾಗಿದೆ. ಇಲಾಖೆಯೇ ಬಂದಿರುವ ಅನುದಾನವೆಲ್ಲವೂ ಶೀಘ್ರದಲ್ಲಿ ಇಲಾಖೆಗೆ ಕೈ ಸೇರಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.



ನಗರದ ಪೊಲೀಸ್ ಆಯುಕ್ತಾಲಯದ ಕಚೇರಿಯಲ್ಲಿ ಕೆಕೆಆರ್‌ಡಿಬಿ ಅನುದಾನದಡಿಯಲ್ಲಿ ಖರೀದಿಸಲಾದ ನೂತನ ವಾಹನಗಳ ಹಸ್ತಾಂತರ ಕಾರ್ಯಕ್ರಮ ಹಾಗೂ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸೆಂಟರ್ ಉದ್ಘಾಟನೆ ನೆರವೇರಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಇನ್ನು ಸೈಬರ್ ಕ್ರೈಂ ಪ್ರಕರಣಗಳನ್ನು ನಿರ್ವಹಿಸಲು ಪ್ರತ್ಯೇಕ ಡಿಜಿಪಿ ನೇಮಕ ಮಾಡಲಾಗಿದ್ದು, ಅದರಂತೆಯೇ 2024ರಲ್ಲಿ 24 ಸಾವಿರ ಪ್ರಕರಣಗಳು ಬೆಳಕಿಗೆ ಬಂದಿದ್ದವು.

**ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ಹಂಚಿಕೆ ಪ್ರಮಾಣ ಸಮಸ್ಯೆ ನಿವಾರಣೆಯಾಗಿದ್ದು, ಮೀಸಲಾತಿ ಹಂಚಿಕೆ ಕಾರಣದಿಂದ ನೇಮಕಾತಿಗೆ ತಡೆ ಹಿಡಿಯಲಾಗಿದ್ದ 8,000 ಪೊಲೀಸ್ ಅಧಿಕಾರಿ-ಸಿಬ್ಬಂದಿಗಳ ನೇಮಕಾತಿಗೆ ಶೀಘ್ರವೇ ಚಾಲನೆ ನೀಡಲಾಗುವುದು.**

■ ಡಾ.ಜಿ.ಪರಮೇಶ್ವರ, ಗೃಹ ಸಚಿವ

2025ರ ವೇಳೆಗೆ ಅದರ ಪ್ರಮಾಣ 14 ಸಾವಿರಕ್ಕೆ ಇಳಿದಿದೆ ಎಂದರು.

56 ಸಾವಿರ ಹುದ್ದೆಗಳಲ್ಲಿ 8 ಸಾವಿರ ಪೊಲೀಸ್ ಕಾನ್‌ಸ್ಟೇಬಲ್ ಹಾಗೂ 600 ನೂತನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. 545 ಪಿಎಸ್‌ಐ ನೇಮಕಾತಿ ಪ್ರಕರಣ ಬಳಿಕ ಅವುಗಳನ್ನು ಸ್ಥಗಿತಗೊಳಿಸಿ ಮತ್ತೊಮ್ಮೆ ನೇಮಕಾತಿ ಮಾಡಿಕೊಂಡಿದ್ದೇವೆ. ಅದರ ಜತೆಗೆ 402 ಪಿಎಸ್‌ಐ ಗಳ ನೇಮಕ ಮಾಡಿಕೊಂಡು ತರಬೇತಿಗೆ ಕಳುಹಿಸಿದ್ದೇವೆ ಎಂದರು.

# ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ

**ಬೆಂಗಳೂರು:** ಕರ್ನಾಟಕ ಲಲಿತಕಲಾ ಅಕಾಡೆಮಿಯು 2023-24, 2024-25 ಹಾಗೂ 2025-26ನೇ ಸಾಲಿನ ವಿವಿಧ ಪ್ರಶಸ್ತಿಗಳಿಗೆ 36 ಕಲಾವಿದರನ್ನು ಪ್ರಶಸ್ತಿಗಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ತಿಳಿಸಿದರು.

ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಆರು ಹಿರಿಯ ಕಲಾವಿದರಿಗೆ ತಲಾ 50 ಸಾವಿರ ರೂ. ನಗದು ಪುರಸ್ಕಾರದ ಗೌರವ ಪ್ರಶಸ್ತಿಯನ್ನು, ವರ್ಣಶ್ರೀ ಪ್ರಶಸ್ತಿಗೆ ನಿರಂತರವಾಗಿ ಕಲಾ ಸೇವೆಯಲ್ಲಿರುವ 20 ಕಲಾವಿದರಿಗೆ ತಲಾ 25 ಸಾವಿರ ರೂ. ನಗದು ಪುರಸ್ಕಾರವನ್ನು ಹಾಗೂ ವಾರ್ಷಿಕ ಕಲಾ ಬಹುಮಾನಕ್ಕಾಗಿ 53ನೇ ವಾರ್ಷಿಕ ಕಲಾ ಪ್ರದರ್ಶನದ 10 ಉತ್ತಮ ಕಲಾಕೃತಿಗಳಿಗೆ ತಲಾ 25 ಸಾವಿರ ರೂ.ನಗದು ಬಹುಮಾನ ಘೋಷಿಸಲಾಗಿದೆ ಎಂದು ಅವರು ತಿಳಿಸಿದರು.

**ಪ್ರಮುಖ ಪ್ರಶಸ್ತಿ ಪುರಸ್ಕೃತರು:** 2024-25ನೇ ಸಾಲಿನ ಗೌರವ ಪ್ರಶಸ್ತಿಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ ಅವರನ್ನು ಆಯ್ಕೆ ಮಾಡಲಾಗಿದೆ. 2025-26ನೇ ಸಾಲಿನ ಗೌರವ ಪ್ರಶಸ್ತಿಗೆ ಹಾಸನದ ಬಿ.ಎಸ್. ದೇಸಾಯಿ, ವಿಜಯಪುರದ ಡಾ.ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ. ಚಿಕ್ಕಣ್ಣ ಆಯ್ಕೆಯಾಗಿದ್ದಾರೆ.

**ವಾರ್ಷಿಕ ಕಲಾ ಬಹುಮಾನ:** 53ನೇ ವಾರ್ಷಿಕ ಕಲಾ ಬಹುಮಾನಕ್ಕೆ ಧಾರವಾಡದ ಆಲೋಕ ಬಿ ಮನಸೂರ, ಬೀದರ್‌ನ ಸಂದೀಪ ಸಜ್ಜನ ಶೆಟ್ಟಿ, ಉಡುಪಿಯ ಹರೀಶ್ ನಾಯ್ಕ, ಬೆಂಗಳೂರಿನ ಅಕ್ಷಯ ಭಟ್, ಬೆಂಗಳೂರಿನ ಲೋಹಿತ್ ಪತ್ತಾರ, ಬಾಗಲಕೋಟೆಯ ನೂರ್ಜಾನ ಎಮ್. ದಫೇದಾರ, ದ.ಕನ್ನಡದ ಜೀವನ್ ಸಾಲಿಯಾನ್ ಅವರನ್ನು ಆಯ್ಕೆ ಮಾಡಲಾಗಿದೆ.

**ವರ್ಣಶ್ರೀ ಪ್ರಶಸ್ತಿ ಪುರಸ್ಕೃರು**

ವರ್ಣಶ್ರೀ ಪ್ರಶಸ್ತಿಗೆ, ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುಣಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ. ಕೆ. ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್.ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್, ಮಂಗಳೂರಿನ ಮೋಹನ್ ಕುಮಾರ್ ಬಿ.ಪಿ., ಚಾಮರಾಜನಗರದ ಮಹದೇವ ಎಚ್, ಯಾದಗಿರಿಯ ಮೇಘನಾಥ ಅಬ್ರಹಂ ಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್, ಬೀದರ್‌ನ ಡಾ.ವೈಶಾಲಿ ಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ, ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್ ಕುಮಾರ್ ಡಿ.ಜೈನ್ ಹಾಗೂ ಬೆಂಗಳೂರಿನ ಪೂರ್ಣಿಮಾ ಯಲ್ಲಾಪುರಕರ್ ಅವರಿಗೆ ನೀಡಲಾಗಿದೆ.

ಹುಲಿಕಲ್ ಘಾಟ್ ರಸ್ತೆ ತಡೆಗೋಡೆ ಕಾಮಗಾರಿ ಪರಿಶೀಲಿಸಿದ ಸಚಿವ ಮಧು ಬಂಗಾರಪ್ಪ

# ಮಣ್ಣು ಕುಸಿತ ಅವಘಡ ತಪ್ಪಿಸಲು ಕ್ರಮ

**ಶಿವಮೊಗ್ಗ:** ಹೊಸನಗರ ತಾಲೂಕಿನ ವ್ಯಾಪ್ತಿಯ ಹುಲಿಕಲ್ ಘಾಟ್ ರಸ್ತೆ ಕಾಮಗಾರಿ ವೇಳೆ ಸಂಭವಿಸಿದ ಮಣ್ಣು ಕುಸಿತ ಅವಘಡದ ಕುರಿತು ಸಮಗ್ರ ವಿವರ ಪಡೆದು, ತಪ್ಪಿತಸ್ಥರ ವಿರುದ್ಧ ಕಾನೂನಾತ್ಮಕ ಕ್ರಮ ವಹಿಸಲಾಗುವುದು ಎಂದು ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.

ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಹುಲಿಕಲ್ ಘಾಟ್ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿ, ಕಾಮಗಾರಿ ಮತ್ತು ಮಣ್ಣು ಕುಸಿತದ ಪ್ರದೇಶವನ್ನು ಅಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಮಾತನಾಡಿದರು.

ಹುಲಿಕಲ್ ರಸ್ತೆ ತಡೆಗೋಡೆ ನಿರ್ಮಾಣ ವೇಳೆ ಮಣ್ಣು ಕುಸಿತ ಅವಘಡ ಸಂಭವಿಸಿ ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. ಸೂಕ್ತ ರೀತಿಯ ಮುನ್ನೆಚ್ಚರಿಕೆ ವಹಿಸದೆ ಕಾಮಗಾರಿ ನಡೆಸಿದ ತಪ್ಪಿತಸ್ಥ ಅಧಿಕಾರಿ, ಗುತ್ತಿಗೆದಾರರ ವಿರುದ್ಧ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ನ್ಯಾಯ ಒದಗಿಸಲಾಗುವುದು ಎಂದು ತಿಳಿಸಿದರು. ಲೋಕೋಪಯೋಗಿ ಸಚಿವರೊಂದಿಗೆ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ತುರ್ತಾಗಿ ವ್ಯವಸ್ಥಿತ ರೀತಿಯ ಕಾಮಗಾರಿ ನಡೆಸಲು ಕ್ರಮ ವಹಿಸಲಾಗುವುದು. ಈ ಭಾಗದ ಜನಸಾಮಾನ್ಯರ ಅಹವಾಲುಗಳಿಗೆ ಪರಿಹಾರ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಭರವಸೆ ನೀಡಿದರು.



**ಹೇರ್ ಪಿನ್ ತಿರುವುಗಳ ಸುಧಾರಣೆ:** ರಸ್ತೆಯ ಸರಪಳಿ 42.05 ಕಿ.ಮೀ ನಿಂದ 42.25 ಕಿ.ಮೀ ವರೆಗಿನ ಭಾಗವು ಪ್ರಸ್ತುತ ಅತ್ಯಂತ ಕಿರಿದಾದ ಹೇರ್ ಪಿನ್ ತಿರುವುಗಳಿಂದ ಕೂಡಿದೆ. ಈ ಭಾಗದ ಸುಧಾರಣೆಗೂ ಆದ್ಯತೆ ನೀಡಲಾಗಿದೆ ಎಂದರು. ಇದೇ ವೇಳೆ ಸಾರ್ವಜನಿಕರು ಮಾತನಾಡಿ, ಹುಲಿಕಲ್ ಘಾಟ್ ರಸ್ತೆ ಮೂಲಕ ಸುಗಮ ಸಂಚಾರಕ್ಕೆ ವ್ಯವಸ್ಥಿತ ಯೋಜನೆ ರೂಪಿಸಿ, ಅನುದಾನ ನಿಗದಿಗೊಳಿಸಿ ಶಾಶ್ವತ ಪರಿಹಾರ ಒದಗಿಸುವಂತೆ ಮನವಿ ಮಾಡಿದರು. ಎಂಎಡಿಬಿ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ, ಪಿಡಬ್ಲ್ಯುಡಿ ಅಧೀಕ್ಷಕ ಅಭಿಯಂತರ ಗಣೇಶ್, ಇತರ ಅಧಿಕಾರಿಗಳು ಹಾಜರಿದ್ದರು.

**ಶಾಶ್ವತ ಪರಿಹಾರಕ್ಕಾಗಿ 435 ಲಕ್ಷ ರೂ. ಅನುದಾನ**

ಮಳೆಯಿಂದ ಭೂಕುಸಿತ ಉಂಟಾಗಿದ್ದ ಹುಲಿಕಲ್ ಘಾಟ್ ಸ್ಥಳದಲ್ಲಿ ಶಾಶ್ವತ ಪರಿಹಾರಕ್ಕಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ತಡೆಗೋಡೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಮೊದಲ ಹಂತದಲ್ಲಿ 435 ಲಕ್ಷ ರೂ. ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಸುಮಾರು 80 ಮೀಟರ್ ಉದ್ದದ ಆರ್.ಸಿ.ಸಿ. ತಡೆಗೋಡೆಯನ್ನು ಇಲಾಖೆಯ ತಾಂತ್ರಿಕ ವಿನ್ಯಾಸದಂತೆ ನಿರ್ಮಿಸಲಾಗುತ್ತಿದೆ. ಡಿಸೆಂಬರ್ ಮಾಹೆಯಲ್ಲಿ ಕಾಮಗಾರಿ ಆರಂಭವಾಗಿದೆ.

## ಕಿರುಸುದ್ದಿ

### ನಾಳೆ ಶ್ರೀ ಸತ್ಯವಲ್ಲಭ ಸಭಾಭವನ ಉದ್ಘಾಟನೆ



• **ತಾವರೆಕೆರೆ:** ಹೊಸಕೋಟೆ ತಾಲೂಕಿನ ದೊಡ್ಡನಲ್ಲೂರಹಳ್ಳಿ ಗ್ರಾಮದ ಸುಪ್ರಸಿದ್ಧ ಅಭಯ ಶನೈಶ್ವರ ಸ್ವಾಮಿ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿರುವ ಸತ್ಯವಲ್ಲಭ ಸಭಾಭವನವನ್ನು ಏ.30ರಂದು ಗುರುವಾರ ಲೋಕಾರ್ಪಣೆಗೊಳ್ಳಲಿದೆ ಎಂದು ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಿ.ಎಲ್.ವೀರಬ್ರಹ್ಮಚಾರ್ ಗುರೂಜಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸುಮಾರು ನಾಲ್ಕು ವರ್ಷದ ಪರಿಶ್ರಮಕ್ಕೆ ಇಂದು ಭವನ ನಿರ್ಮಾಣವಾಗಿದೆ. ಎರಡು ದಿನಗಳ ಕಾಲ ನಡೆಯುವ ಪೂಜಾ ಕಾರ್ಯಕ್ರಮಗಳು ಬುಧವಾರ ಮತ್ತು ಗುರುವಾರದಂದು ನಡೆಯಲಿದೆಂದರು. 51ಜನ ಸುಮಂಗಲಿಯರೊಂದಿಗೆ ಮಂಗಳವಾದ್ಯ ಸಮೇತ ಶ್ರೀ ಭದ್ರಮಹಾಕಾಳಿ ಶಕ್ತಿ ಪೀಠದಿಂದ ಕಳಶ ಪೂಜೆ ಮೆರವಣಿಗೆ ನಡೆಯಲಿದೆ. ಗಣಪತಿ ಹೋಮ, ಕಲ್ಯಾಣ ವೆಂಕಟೇಶ್ವರ ಸ್ವಾಮಿ ಹೋಮ, ಗಾಯತ್ರಿ ದೇವಿ ಹೋಮ, ಹೀಗೆ ವಿವಿಧ ಬಗೆಯ ಹೋಮ ಹಾಗೂ ವಿಶೇಷ ಪೂಜೆಯೊಂದಿಗೆ ಪ್ರಾರಂಭವಾಗಲಿದೆಂದು ಹೇಳಿದರು. ಗುರುವಾರ ಗ್ರಾಮ ದೇವರ ಹೋಮದೊಂದಿಗೆ ಸತ್ಯವಲ್ಲಭ ಭವನದಲ್ಲಿ ಶ್ರೀ ಲಕ್ಷ್ಮಿ ಸಮೇತ ಶ್ರೀ ಸತ್ಯನಾರಾಯಣ ಸ್ವಾಮಿ ವ್ರತ ಆಚರಿಸುವುದರ ಮೂಲಕ ಭವನ ಉದ್ಘಾಟನೆ ಆಗಲಿದೆ. ಕಾರ್ಯಕ್ರಮಕ್ಕೆ ಸಿಸಿ ಬಾಲಯೋಗಿ ಸ್ವಾಮಿ ಮಂಜುನಾಥ ಮಹಾರಾಜ್ ಶ್ರೀಗಳು ಆಗಮಿಸಲಿದ್ದಾರೆ. ಪೂಜಾ ಕಾರ್ಯಕ್ರಮಕ್ಕೆ ಎಲ್ಲ ಭಕ್ತ ಸಮೂಹ ಹಾಗೂ ಸ್ಥಳೀಯರು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಿ ತೀರ್ಥ ಪ್ರಸಾದ ಪಡೆಯಬೇಕು ಎಂದರು.

### ಏ.30ರಂದು ಸ್ವಾತಿ ಪೂಜೆ

• **ಮೈಸೂರು:** ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಏ.30ರಂದು ಚಾಂದ್ರಮಾನ ನರಸಿಂಹ ಜಯಂತಿ ಹಾಗೂ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 8ಕ್ಕೆ ಪ್ರಾಕಾರೋತ್ಸವ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

## ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಬತ್ತಿದ ಅಂತರ್ಜಲ: 52 ಗ್ರಾಮಗಳಲ್ಲಿ ಕುಡಿವ ನೀರಿಗೆ ಹಾಹಾಕಾರ

# ಗ್ರಾಮೀಣರನ್ನು ಬಿಡದ ನೀರಿನ ಕೊರತೆ

▸ ಎಸ್. ರುದ್ರೇಶ್ವರ

• **ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸದ್ಯಕ್ಕೆ 52 ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಬೇಸಿಗೆ ಆಗಮನದೊಂದಿಗೆ ನೀರಿನ ಸಮಸ್ಯೆ ಜಿಲ್ಲೆಯನ್ನು ದಿನ ಕಳೆದಂತೆ ವ್ಯಾಪಿಸುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ ನೀರಿನ ಸೆಲೆಗಳು ಬರಿದಾಗುತ್ತಿವೆ.

ಏಪ್ರಿಲ್‌ನ ತಿಂಗಳ ಅಂತ್ಯಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆಯ 52 ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದೆ. ಮುಂದಿನ ದಿನಗಳಲ್ಲಿ ಈ ಪರಿಣಾಮ ಮತ್ತಷ್ಟು ಹೆಚ್ಚಾಗುವ ಎಲ್ಲಾ ಸೂಚನೆ ಗೋಚರಿಸುತ್ತಿದೆ. ರಾಮನಗರ ಮತ್ತು ಮಾಗಡಿ ತಾಲೂಕಿನಲ್ಲಿಯೇ ಹೆಚ್ಚು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಜಲಸಂಪನ್ಮೂಲ ಸಚಿವ ಹಾಗೂ ಉಪ ಮುಖ್ಯಮಂತ್ರಿ ಆಗಿರುವ ಡಿ.ಕೆ. ಶಿವಕುಮಾರ್ ಕ್ಷೇತ್ರ ಕನಕಪುರ ತಾಲೂಕಿನಲ್ಲಿ ಈ ಬಾರಿ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ.

**ಬರಿದಾದ ಕೆರೆಗಳಲ್ಲಿರುವ ನೀರು:** ಕಳೆದ ವರ್ಷ ಉಂಟಾಗಿದ್ದ ಬರದಿಂದ ಈ ಬಾರಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವಂತೆ ಮಾಡಿದೆ. ಜತೆಗೆ, ಕಳೆದ ವರ್ಷದಲ್ಲಿನ ಮಳೆ ಕೊರತೆ ಅದರಲ್ಲೂ ರಾಮನಗರ, ಮಾಗಡಿ ಹಾಗೂ ಕನಕಪುರ ತಾಲೂಕಿನಲ್ಲಿ ಮಳೆ ಕಡಿಮೆಯಾಗಿತ್ತು. ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ಅಂತ್ಯದೊಳಗೆ ಈ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹಲವು ಕೆರೆಗಳು ಬರಿದಾಗಿ ನೀರಿನ ಸಮಸ್ಯೆ ಹೆಚ್ಚಳವಾಗುವಂತೆ ಮಾಡಿದೆ.

**ಆರು ಗ್ರಾಮಗಳಿಗೆ ಖಾಸಗಿ ಬೋರ್ ಮೂಲಕ ನೀರು:** ಕನಕಪುರ ತಾಲೂಕಿನ ಏಳು ಗ್ರಾಮ ಪಂಚಾಯಿತಿಗಳ ಕೆಲ ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ಎರಡು ಗ್ರಾಮಗಳಿಗೆ ಟ್ಯಾಂಕರ್, 11 ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್ ಗಳಿಂದ ನೀರು ಪೂರೈಸಲಾಗುತ್ತಿದೆ. ಇನ್ನು ಮಾಗಡಿ ತಾಲೂಕಿನ 8 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 9 ಗ್ರಾಮಗಳಿಗೆ ಟ್ಯಾಂಕರ್, 10 ಗ್ರಾಮಗಳಿಗೆ ಖಾಸಗಿ ಬೋರ್ ವೆಲ್ ಗಳಿಂದ ಹಾಗೂ ರಾಮನಗರ ತಾಲೂಕಿನ 6 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 6 ಗ್ರಾಮಗಳಿಗೆ ಟ್ಯಾಂಕರ್, 4 ಗ್ರಾಮಗಳಿಗೆ ಖಾಸಗಿ ಬೋರ್ ವೆಲ್ ಗಳಿಂದ ಪೂರೈಕೆ ಮಾಡಲಾಗುತ್ತಿದೆ. ನೀರಿನ ಅಭಾವ ಇರುವ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೆ 18 ಟ್ಯಾಂಕರ್ ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಚನ್ನಪಟ್ಟಣ ಮತ್ತು ಹಾರೋಹಳ್ಳಿ ತಾಲೂಕುಗಳಲ್ಲಿ ಟ್ಯಾಂಕರ್ ಮೂಲಕ ನೀರು ಮಾಡಲಾಗುತ್ತಿಲ್ಲ, ಬದಲಿಗೆ ಖಾಸಗಿ ಕೊಳವೆ ಬಾವಿ ಪಡೆದು, ಗ್ರಾಮಗಳಲ್ಲಿ ನೀರು ಪೂರೈಕೆ ಮಾಡಲಾಗುತ್ತಿದೆ. ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಆಯಾಯ ಗ್ರಾಮ ಪಂಚಾಯಿತಿಗಳ ಮೂಲಕ ಖಾಸಗಿ ಕೊಳವೆ ಬಾವಿಗಳನ್ನು ಪಡೆದು ನೀರು ಪೂರೈಕೆ ಮಾಡಲಾಗುತ್ತಿದೆ. ಗ್ರಾಮಾಂತರ ಭಾಗದಲ್ಲಿ 35 ಕೊಳವೆ ಬಾವಿಗಳನ್ನು ಪಡೆದುಕೊಳ್ಳಲಾಗಿದೆ.

**ಪ್ರತಿ ಬಡಾವಣೆಗಳಿಗೂ ಟ್ಯಾಂಕರ್ ನೀರು:** ಬೇಸಿಗೆ ಆರಂಭದಲ್ಲಿ ಪ್ರತಿ ಬಾರಿ ಗ್ರಾಮಾಂತರ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿಯೇ ಅತೀ ಹೆಚ್ಚು ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿತ್ತು. ಅದರಲ್ಲೂ ಜಿಲ್ಲಾ ಕೇಂದ್ರದಲ್ಲಿ ಕಳೆದ ಬೇಸಿಗೆಯಲ್ಲಿ 20 ದಿನಕೊಮ್ಮೆ ನೀರಿನ ಪೂರೈಕೆ ಮಾಡಲಾಗಿತ್ತು. ಪ್ರತಿ ಬಡಾವಣೆಗಳಿಗೆ ಟ್ಯಾಂಕರ್ ನೀರು ಸರಬರಾಜು ಮಾಡಲಾಗುತ್ತಿತ್ತು.




### ಟ್ಯಾಂಕರ್ ಮೂಲಕ ನೀರು

ಜಿಲ್ಲೆಯಲ್ಲಿ ಉದ್ಭವಿಸಿರುವ ನೀರಿನ ಸಮಸ್ಯೆ ಬಗೆಹರಿಸಲು ಜಿಲ್ಲಾ ಪಂಚಾಯಿತಿ ಆಯಾಯ ಗ್ರಾಮ ಪಂಚಾಯಿತಿಯಿಂದ ಪ್ರತ್ಯೇಕವಾಗಿ ಟ್ಯಾಂಕರ್ ವ್ಯವಸ್ಥೆ ಮಾಡುತ್ತಿದೆ. ಕೆಲವು ಕಡೆಯಲ್ಲಿ ಖಾಸಗಿ ಬೋರ್ ವೆಲ್ ಗಳನ್ನು ಪಡೆದು, ಜನರಿಗೆ ಕುಡಿಯುವ ನೀರನ್ನು ಪೂರೈಕೆ ಮಾಡುವ ಕೆಲಸ ಮಾಡಲಾಗುತ್ತಿದೆ. ಖಾಸಗಿ ಟ್ಯಾಂಕರ್ ಮೂಲಕ ಪ್ರತಿ ದಿನ ಮೂರು ಟ್ರಿಪ್ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಚನ್ನಪಟ್ಟಣ ತಾಲೂಕಿನ 4 ಗ್ರಾಮ ಪಂಚಾಯಿತಿಗಳ 5 ಗ್ರಾಮಗಳಿಗೆ ಖಾಸಗಿ ಬೋರ್ ವೆಲ್ ಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಹಾರೋಹಳ್ಳಿ ತಾಲೂಕಿನ 3 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಕೆಲ ಗ್ರಾಮಗಳಲ್ಲಿ ನೀರಿನ ಸಮಸ್ಯೆಯಿದ್ದು, ಅಲ್ಲಿಗೆ ಖಾಸಗಿ ಬೋರ್ ವೆಲ್ ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

### ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಪೂರೈಕೆ

ಈ ಬಾರಿ ಎಲ್ಲೂ ನೀರಿನ ಸಮಸ್ಯೆ ಕಂಡುಬರುತ್ತಿಲ್ಲ. ದಿನದ 24 ಗಂಟೆ ನೀರು ಪೂರೈಸುವ ನೆಟ್ಟಿಲ್ ಯೋಜನೆ ಪೂರ್ಣಗೊಂಡಿದೆ. ಹಾಗಾಗಿ ಜಿಲ್ಲಾ ಕೇಂದ್ರದಲ್ಲಿ ಎರಡು ದಿನಕ್ಕೊಮ್ಮೆ ನೀರು ಪೂರೈಕೆ ಮಾಡ ಲಾಗುತ್ತಿದೆ. ಯಾವುದಾದರು ವಾರ್ಡ್‌ಗಳಲ್ಲಿ ನೀರು ಸಮಸ್ಯೆ ಕಂಡು ಬಂದಲ್ಲಿ ಟ್ಯಾಂಕರ್ ನೀರು ಪೂರೈಕೆಗೆ ಸೂಚನೆ ನೀಡಲಾಗಿದೆ.

### ವಾರಕ್ಕೊಮ್ಮೆ ನೀರು ಸರಬರಾಜು

ಜಿಲ್ಲಾ ಕೇಂದ್ರ ರಾಮನಗರ, ಕನಕಪುರ , ಚನ್ನಪಟ್ಟಣ ಮತ್ತು ಹಾರೋಹಳ್ಳಿ ಪಟ್ಟಣ ವ್ಯಾಪ್ತಿಯಲ್ಲಿ ಸದ್ಯಕ್ಕೆ ನೀರಿನ ಸಮಸ್ಯೆ ಇಲ್ಲ, ಮಾಗಡಿ ನಗರ ಪ್ರದೇಶದಲ್ಲಿ ವಾರಕೊಮ್ಮೆ ನೀರು ಪೂರೈಸುತ್ತಿದ್ದು, ಉಳಿದ ದಿನಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

### ಪರ್ಯಾಯ ವ್ಯವಸ್ಥೆಗೆ ಕ್ರಮ

ಬೆಂಗಳೂರು ದಕ್ಷಿಣ ಜಿಲ್ಲೆಯ 52 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದೆ. ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಜತೆಗೆ, ಖಾಸಗಿ ಕೊಳವೆ ಬಾವಿಯಿಂದ ನೀರು ಕೊಡಲಾಗುತ್ತಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಇ ಎನ್.ಕೆ. ಜ್ಞಾನಮೂರ್ತಿ ತಿಳಿಸಿದರು.

ದಿಗಂತ ವಿಶೇಷ




## ಇನ್ನೂರು ಮಕ್ಕಳಿಗೆ ವಿದ್ಯಾರ್ಥಿವೇತನ



• **ಬೆಂಗಳೂರು:** ಲಂಬೋದರ 2.0 ಚಿತ್ರದ ನಾಯಕ ಹಾಗೂ ರಾಜಕಾರಣಿ ಅನಿಲ್ ಶೆಟ್ಟಿ ಅವರು ಬೆಂಗಳೂರು ಫೌಂಡೇಷನ್‌ನಿಂದ ಇನ್ನೂರು ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಿಸಿದರು. ಕೋರಮಂಗಲದ ಸತ್ಯಸಾಯಿ ಸದನದಲ್ಲಿ ನವಬೆಂಗಳೂರು ಫೌಂಡೇಷನ್ ಹಾಗೂ ಆಸ್ಟ್ರೋಟಾಕ್ ಫೌಂಡೇಷನ್ ವತಿಯಿಂದ ವಿದ್ಯಾರ್ಥಿವೇತನ ನೀಡಲಾಯಿತು. ಕಾರ್ಯಕ್ರಮದಲ್ಲಿ ವಿಶ್ವಸುಂದರಿ ಮತ್ತು ಬಾಲಿವುಡ್ ನಟಿ ಮಾನುಷಿ ಚಿಲ್ಲರ್ ಅಲ್ಲದೆ ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ಎಂಎಲ್‌ಸಿ ಗೋಪಿನಾಥ್ ರೆಡ್ಡಿ ಹಾಗೂ ಚಿತ್ರನಿರ್ದೇಶಕ ಸಿಂಪಲ್ ಸುನಿ ಉಪಸ್ಥಿತರಿದ್ದರು.

## ವೀರಬ್ರಹ್ಮೇಂದ್ರಸ್ವಾಮಿ ಆರಾಧನಾ ಮಹೋತ್ಸವ

• **ದೊಡ್ಡಬಳ್ಳಾಪುರ:** ವೀರಬ್ರಹ್ಮೇಂದ್ರಸ್ವಾಮಿ ಸೇವಾ ಟ್ರಸ್ಟ್ ನಿಂದ ಮದ್ವಿರಾಟ್ ಪೋತಲೂರು ವೀರಬ್ರಹ್ಮೇಂದ್ರ ಸ್ವಾಮಿಗಳ 15ನೇ ಆರಾಧನಾ ಮಹೋತ್ಸವ ಕಾರ್ಯಕ್ರಮ ನಗರದ ಕನ್ನಡ ಜಾಗೃತ ಭವನದಲ್ಲಿ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ವಿಶೇಷವಾಗಿ ಅಲಂಕರಿಸಿದ್ದ ವೀರಬ್ರಹ್ಮೇಂದ್ರ ಸ್ವಾಮಿ ಅವರ ಭಾವಚಿತ್ರಕ್ಕೆ ವಿಶ್ವಕರ್ಮ ಸಮುದಾಯದವರಿಂದ ಪೂಜೆ ಸಲ್ಲಿಸಿ, ಪ್ರಸಾದ ವಿನಿಯೋಗ ಮಾಡಲಾಯಿತು. ವಿವಿಧ ಕಲಾವಿದರಿಂದ ವೀರಬ್ರಹ್ಮೇಂದ್ರಸ್ವಾಮಿ ಅವರ ಗೀತೆಗಳ ಗಾಯನ ನಡೆಯಿತು. ವೀರಬ್ರಹ್ಮೇಂದ್ರಸ್ವಾಮಿ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಮಾತನಾಡಿ, ವೀರಬ್ರಹ್ಮೇಂದ್ರಸ್ವಾಮಿ ಅವರ ಆರಾಧನೆಯ ಮೂಲಕ ಅವರ ತತ್ವವನ್ನು ತಿಳಿಸಲು ಟ್ರಸ್ಟ್ ವತಿಯಿಂದ 15 ವರ್ಷದಿಂದ ಆರಾಧನಾ ಮಹೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ಜ್ಞಾನದ ಕೊರತೆಯಿಂದ ವೈಜ್ಞಾನಿಕ ಸತ್ಯಗಳಿಂದ ದೂರ ಉಳಿದಿದ್ದೇವೆ ಎಂದರು. ಇದೇ ವೇಳೆ ವಿಶ್ವಕರ್ಮ ಸಮುದಾಯದ ಗಣ್ಯರನ್ನು ಸನ್ಮಾನಿಸಲಾಯಿತು. ಶಾಸಕ ಧೀರಜ್ ಮುನಿರಾಜು, ರಾಜ್ಯ ವಿಶ್ವಕರ್ಮ ನಿಗಮದ ಅಧ್ಯಕ್ಷ ಪಿ.ಸುಜ್ಞಾನಮೂರ್ತಿ, ರಾಜ್ಯ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷ ಈಶ್ವರಾಚಾರ್, ಉಮೇಶ್. ಬಿ, ಬಾಬು ಪತ್ತಾರ್, ಮಹಿಳಾ ರಾಜ್ಯಾಧ್ಯಕ್ಷೇ ಶೋಭಾ, ರಾಜ್ಯ ಉಪಾಧ್ಯಕ್ಷ ರವಿಶಂಕರ್, ಶರತ್ ಚಂದ್ರ, ಲಕ್ಷ್ಮಣ್, ಚಂದ್ರಶೇಖರ್, ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘದ ರಾಜ್ಯಾಧ್ಯಕ್ಷ ಎಚ್.ಎಸ್.ನಾಗೇಶ್, ಟ್ರಸ್ಟಿನ ಗೌರವ ಅಧ್ಯಕ್ಷ ಬೋಜಾಚಾರ್, ಅಧ್ಯಕ್ಷ ವೆಂಕಟಾಚಲಪತಿ, ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಕುಮಾರ್, ವಿಶ್ವಕರ್ಮ ಸಮುದಾಯದವರಿದ್ದರು.



## AFFIDAVIT

I, **NABIN KUMAR CHETRY,** S/o. JAG BAHADUR CHETRY, resident at No. 698, 6th A Cross, Opp. BAD Complex, Koramangala 4th Block, Bengaluru-560034, do hereby declare that both the names **NAVEEN CHATTRI** & **NABIN KUMAR CHETRY** refer to one and the same person, vide affidavit dated 11.03.2026, sworn to before Sumithra .N, Advocate & Notary, Govt. of India, Bengaluru.

## PUBLIC NOTICE

The General Public are hereby informed that, our client **SMT. SHANTHI** W/o Vela. G residing at No. 10, 3rd Cross, 3rd Main, Brahmapuram, Sreeramapura, Bengaluru-560021. Our client purchased the immovable property bearing house property site Nos. 206 and 207 (Formerly Middle Portion of Property No.207), measuring 25 x 33 feet and portion in the Site No. 207, measuring 2 x 33 feet, both formed in the converted land bearing Sy. No.25/5, (duly converted for non-agricultural/residential purpose as per the Official Memorandum bearing No. ALN(N)SR15/05-06, dated 20.04.2005 issued by the Special Deputy Commissioner, Bengaluru District) of Kanvobanahalli Village, Yeshwanthpura Hobli, Bengaluru North Taluk, now within the limits of Bengaluru Mahanagara Palike, Ward No.40, Bengaluru, E-PID No.2416467243 altogether measuring: East to West: 27-0 feet, North to South: 33-0 feet, in all measuring 891 square feet, situated at No. 206,207, pillanna layout, kanhoabanahalli, kanhobanahalli revenue layout, near asham athma Vidyalaya -560073, consisting of Ground, First, and a room in terrace floor R.C.C. Roofed building measuring 800 square feet in Ground Floor, 400 square feet of R.C.C Roofed building in the First Floor and 450 Square feet of A.C.C Sheet roof in terrace floor constructed with cement and brick, jungle woods doors and windows, having mosaic flooring, with all civic amenities. Our client intends to Mortgage the said Property and mentioned below.

Any person or persons asserting any right, title, interest or claim of the Schedule Property should write to the undersigned within 7 DAYS from the date of issuance of this notice with all documentary proof on which they are basing and asserting their rights with of the Schedule Property or any part thereof, after which period we shall proceed on the basis that there are no claims of whatsoever nature with regard to the said property.

**SCHEDULE PROPERTY**

All that piece and parcel of the house property bearing site Nos. 206 and 207 (Formerly Middle Portion of Property No.207), measuring 25 x 33 feet and portion in the Site No. 207, measuring 2 x 33 feet, both formed in the converted land bearing Sy. No.25/5, (duly converted for non-agricultural/residential purpose as per the Official Memorandum bearing No. ALN(N)SR15/05-06, dated 20.04.2005 issued by the Special Deputy Commissioner, Bengaluru District) of Kanvobanahalli Village, Yeshwanthpura Hobli, Bengaluru North Taluk, now within the limits of Bengaluru Mahanagara Palike, Ward No.40, Bengaluru, E-PID No.2416467243 altogether measuring: East to West: 27-0 feet, North to South: 33-0 feet, in all measuring 891 square feet, situated at No. 206,207, pillanna layout, kanhoabanahalli, kanhobanahalli revenue layout, near asham athma Vidyalaya -560073, consisting of Ground, First, and a room in terrace floor R.C.C. Roofed building measuring 800 square feet in Ground Floor, 400 square feet of R.C.C Roofed building in the First Floor and 450 Square feet of A.C.C Sheet roof in terrace floor constructed with cement and brick, jungle woods doors and windows, having mosaic flooring, with all civic amenities and bounded on:

**East by :** Property belongs to Sri M Chandrashekar,
**West by :** Remaining portion of the same property No.207 belonging to Smt. Latha, Rakshitha, Shree S and Gokulesh S,
**North by :** Road
**South by :** Private Property

**M D ASSOCIATES**
**MURALI D Advocate**
No.638/A, 1st Main Road, 1st K Block 2nd Stage, Rajajinagar, Bangalore -560 010,
Ph. No. +91- 9110424934 8553325866

## IN THE COURT OF THE ASSISTANT COMMISSIONER, DODDABALLAPURA SUB-DIVISION AT DODDABALLAPURA
### R.A(DHL) NO. 306 /2023

BETWEEN
Sri. Manjunath and another ...Appellant
AND
The Tahasildar and others ...Respondents

**NOTICE TO RESPONDENT NO.2 & 4**

**R.(2). Smt. Pillamma,** W/o Late Munishamappa, R/at, Avathi Village, Kasaba Hobli, Devanahalli Taluk, Bengaluru Rural District.

**R.(4). Smt. Rathnamma,** W/o Late Bachappa, R/at, Avathi Village, Kasaba Hobli, Devanahalli Taluk, Bengaluru Rural District.

**Whereas** the Appellant has filed the above Appeal against the Respondents with respect to property bearing **Sy. No 58,** measuring total extent of 10 acres 34 guntas, in that an extent of 2 acres 02 guntas, situated at **Avathi Village, Kasaba Hobali, Devanahalli Taluk, Bangalore Rural District.** Further you are hereby directed to appear before this Hon'ble Court in person or through an advocate to answer with respect to the issues involved in the above Appeal **on 6/5/2026 at 03-00 P.M.** failing which matter will be determined placing you ex-parte.

**Given under my hand and seal of this Hon'ble Court on 23-4-2026**

**By the Order of the Court**
**Assistant Commissioner**
**Doddaballapur Sub-Division**
**Doddaballapur.**
**Bangalore Rural Dist.**
Advocate for Plaintiffs
**Sri.Siddiq Pasha J,**
**Advocate**
Court Complex, Shanthinagar, Sulibele Road, Devanahalli Town, Bengaluru Rural -562 110.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ...

[illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ...

[illegible]

[illegible]

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿವಿಲ್ ಜಡ್ಜ್ (ಹಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಶ್ರೀರಂಗಪಟ್ಟಣ

[illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ...

## IN THE COURT OF THE CIVIL JUDGE AND J.M.F.C. AT PAVAGADA
### CMIS.No. 192/2026

**PETITIONER : Siddeesha** J s/o Joganna, aged about 29 years, R/at Kadirehalli village Nidagal Hobli, Pavagada Taluk, Tumkur Dist

V/S

**RESPONDENT : 1. The Deputy Tahasildar, Nada Kacheri, Mangalawada, Pavagada Taluk, Tumkur Dist.**
**2. Ramanna** s/o late Kadappa, aged about 65 years, **3. Joganna** s/o late Kadappa, aged about 63 years, **4. Shivanna** S/o late Kadappa, aged about 47 years, **5.Eshwara** S/o late Kadappa, aged about 45 years, **6. Thimmaraju** S/o Joganna, aged about 27 year, The respondent No.2 to 6 are R/at Kadirehalli village, Nidagal Hobli, Pavagada Taluk, Tumkur Dist.

**PAPER PUBLICATION**

WHEREAS, the petitioner has filed the above petition seeking issue of a Death Cerufucate of his petitioner grandfather Kadappa S/o late Borappa was died on 11/01/2019. Now the matter is set down for issue notice/suit summons to all or any interested person or legal heirs whoever got ahy objection over the above said Death Certificate may appear in this case either as respondent/petitions and may prosecute the same on the date of hearing I.e **on 30/05/2026.**

You are hereby called upon to appear before this court at 11:00 am on the said date of hearing either in person or through your council. If you fails to appear this court the matter will be heard and decided exparte. Given under my hand and seal of the court. This day of 28/04/2026.

**By order, Sheritedar, CMO.**
**Prj. Civil Judge court Pavagada.**
Advocate for petitioner : **Shivanna KR**
Advocate, Pavagada.

## IN THE COURT OF THE HON'BLE SENIOR CIVIL JUDGE AND JMFC AT CHINTAMANI
### O.S.No.157/2024

**BETWEEN: Sri.Ramanjini,** S/o Late Muniyappa, Aged about 54 years, R/at: No.302, BKR Nilaya, 11th Cross, Kanakabhavana Main Road, Hosakote Town, Bangalore Rural District- 562 114 ... **PLAINTIFF**

**AND: Sri.Rajagopal. H, and Ors ... DEFENDANTS**

**SUIT SUMMONS TO DEFENDANT NO.1 TO 3**

**1. Rajagopal .H,** S/o late. Ramappa @ Bhajanthri Ramaih, Aged about 63 years, **2.Smt.Lakshmidevi .P,** W/o Rajagopal.H, Aged about 57 years, **3.Smt.Padmashree,** D/o Rajagopal.H, W/o Anand, Aged about 41 years, R/at: Motamakalahalli Village, Chilakalnerpu Hobli, Chinthamani Taluk, Chikkaballapura District-563125.

Whereas, the Plaintiff has filed the above suit for the relief of Specific performance and other relief with respect to suit schedule property against the defendants. Whereas, in the above case you are defendant No.1 to 3 hereby called upon to appear before the Hon'ble Senior Civil Judge and JMFC at Chinthamani in personally or by a pleader on **03-06-2026** at 11:00 A.M to answer the same, failing which the suit filed by Plaintiff will be decided in your absence.

**SCHEDULE PROPERTY**

All that piece and parcel of the property bearing Sy.No.45 with an extent of 3-06 guntas out of 6-12 guntas of land situated at Chinthamakalahalli Village, Chilakalnerpu Hobli, Chinthamani Taluk, and Chikkaballapura District. And bounded on: East by: Nadimpalli Gadi; West by: Road and Subbamma's Land; North by Motamakalahalli Boundary; South by: Remaining land of Byyanna.

Given under my hand and seal of court, on 08-04-2026.

By order of the court, Chief Ministerial Officer, Senior Civil Judge and JMFC at Chintamani.

**M.SUBRAMANYA,** Advocate
No.71, 1st main, 3rd Cross, Thyagaraja Layout, Hosakote Town, Bangalore Rural District- 562 114. Mob: 9945782522

## IN THE COURT OF THE PRL,SENIOR CIVIL JUDGE AND MACT AT MADDUR
### MVC NO: 2052/2025

Petitioner : Sharadamma
V/s
Respondent : Prop. Vanitha & others

Respondent No.1 : Prop. Vanitha W/o Annadurai Aged about 38 years, Vakula transport, #30A,Khta No 13,Gollahalli village, Anjanapura post, Uttarahalli, Bengaluru-560108. [Owner of Concrete mixer lorry bearing No KA01/AL6959]

**NOTICE**

WHEREAS, the petitioners have instituted the above case against you /respondent claiming compensation for the sustained injuries to her in the motor vehicle accident. You are hereby summoned to appear in this court in person or by a pleader on the **20day of may, 26** at 11'0 clock in the forenoon to answer the same, failing which the suit will be disposed of exparte. Given under my hand and seal of this court on 25/4/26.

**By the order of the court,**
**CHIEF MINISTERIAL OFFICER**
**COLFCC**
**IN THE COURT OF PRL SENIOR CIVIL JUDGE & MACT, MADDUR**
Advocate for petitioner :
**HS Prabhakar.**



## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು

ಜಿಲ್ಲೆ: ಮೈಸೂರು) ಪಿನ್- 571 105 (ರಾಜ್ಯ:ಕರ್ನಾಟಕ
ಕ್ರಮ ಸಂಖ್ಯೆ:ಕೃ.ಉ.ಮಾ.ಸ.(ಹು)/28/2026-27 ದಿನಾಂಕ: 23.04.2026

**ಹಂಚಿಕೆ ಪ್ರಕಟಣೆ**

ಸಮಿತಿಯ ಮುಖ್ಯ ಮಾರುಕಟ್ಟೆ ಹಾಗೂ ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿಯಿರುವ ಒಟ್ಟು ವಿವಿಧ ಅಳತೆ ಮತ್ತು ದರಗಳ 12 ಸಂಖ್ಯೆ ಗೋದಾಮು ಮತ್ತು ಅಂಗಡಿ ಮಳಿಗೆಗಳನ್ನು ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಮತ್ತು 33 ತಿಂಗಳಿಗೊಮ್ಮೆ ಪ್ರತಿ ಶತ ಶೇ.5 ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕದ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಇಲಾಖೆಯ 2004 ಹಂಚಿಕೆ ನಿಯಮಗಳನ್ವಯ ಜೇಷ್ಠತೆಯ ಆಧಾರದ ಮೇಲೆ ಹಂಚಿಕೆ ಮಾಡಲು ಪೇಟೆಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಂಚಿಕೆ ಮಾಡಲು ಉದ್ದೇಶಿಸಿರುವ ಕಟ್ಟಡಗಳ ಪೈಕಿ 02 ಸಂಖ್ಯೆ ಕಟ್ಟಡಗಳನ್ನು ಪರಿಶಿಷ್ಟ ಜಾತಿಯವರಿಗೆ, ತಲಾ 01 ಕಟ್ಟಡಗಳನ್ನು ಪರಿಶಿಷ್ಟ ಪಂಗಡ, ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ ಮೀಸಲಿರಿಸಲಾಗಿರುತ್ತದೆ. ಉಳಿದಂತೆ ಕಟ್ಟಡಗಳ ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕ ಮತ್ತು ಠೇವಣಿ, ಮೀಸಲಾತಿ ವಿವರ, ಮೀಸಲಿರಿಸಿದ ಕಟ್ಟಡಗಳ ಅಳತೆ ಮತ್ತು ಸಾಮರ್ಥ್ಯ ಇತ್ಯಾದಿ ವಿವರಗಳನ್ನು ಕಛೇರಿಯಲ್ಲಿ ಸಂಪರ್ಕಿಸಿ ಪಡೆಯುವುದು.

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ ಹುಣಸೂರು
ಸಹಿ/- ಆಡಳಿತಾಧಿಕಾರಿ, ಕೃ.ಉ.ಮಾ.ಸ., ಹುಣಸೂರು
DIPR/DDMYS/110/KSMCA/99/2026-27

ಸಾರ್ವಜನಿಕ ಪ್ರಕಟಣೆ
ಶ್ರೀರಂಗಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ
ಅ.ಮೂ. ಸಂಖ್ಯೆ :32/2023.

[illegible]

## PUBLIC NOTICE

The General Public is hereby informed that my client is intending to purchase the below-mentioned schedule of property from its owners, namely: Mrs. Sulochana Jackson, W/o Bishop Dr. M. Francis Jackson and Bishop Dr. M. Francis Jackson, S/o Mr. Munugesh Both residing at: No. 12, 3rd Main, Appaiah Layout, Saraswatipuram, Bangalore North, Bangalore-560008. If any person(s) has any objection, claim, interest, or dispute in respect of the above intended sale transaction, such person(s) may contact the undersigned along with documentary proof substantiating their claim/objection/dispute within fifteen (15) days from the date of this publication. Failing which, my client shall proceed to complete the sale transaction with the above-mentioned owners, treating that there are no third-party claims, objections, or disputes in respect of the schedule property. Thereafter, no claims, objections, or disputes shall be entertained.

**SCHEDULE OF PROPERTY**

All that piece and parcel of dry land property measuring 3.06 acres out of 5.10 guntas (out of 4.13 acres plus 37 guntas of kharab), bearing: Sur- vey No.: 6 (Six). Situated at: Garudadrahally Village, Beth- amangala Hobli, Then Bangarpet Taluk, now K.G.F. Taluk. Boundaries: East: Survey No. 8, West: Survey No. 4, North: Survey No.7, South: Road and remaining land measuring 1.07 acres in the same Survey No.6.

**T.G. Manmatha Reddy**
**P. Suvarna Reddy Advocates Kolar 563101.**
**Mobile: 9008122611, 9008122622.**

## ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (B-Smile)

ಯೋಜನಾ ಅಭಿಯಂತರರು-01 ರವರ ಕಛೇರಿ,
ನಂ. 30/1, 3ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ,
ವಸಂತನಗರ, ಬೆಂಗಳೂರು - 560052.

ಸಂಖ್ಯೆ: ಬಿ-ಸ್ಮೈಲ್/ಯೋಅ-01/ಟೆಂಡರ್/02/2026-27 ದಿನಾಂಕ: 27-04-2026

**ಪ್ರಸ್ತಾವನೆಗಾಗಿ ಆಹ್ವಾನ (ಆರ್‌ಎಫ್‌ಪಿ)**
(ದ್ವಿ-ಲಕೋಟೆ ಪದ್ಧತಿ) (ಜೆಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಯೋಜನಾ ಅಭಿಯಂತರರು-01, ಬಿ-ಸ್ಮೈಲ್, ಗ್ರೇಟೆಂಪ್ರಾ, ಬೆಂಗಳೂರು ಇವರು ಈ ಕೆಳಕಂಡ **ಮಾನವ ಶಕ್ತಿ (ಮ್ಯಾನ್ ಪವರ್)** ಇದೇ ತರಹದ ಕೆಲಸವನ್ನು ಮಾಡುವ ಅನುಭವ ಹೊಂದಿರುವ ನೋಂದಾಯಿತ ಸಂಸ್ಥೆ / ಏಜೆನ್ಸಿಗಳು / ವ್ಯಕ್ತಿಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕೆಲಸದ ಹೆಸರು |
|---|---|
| 1 | ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ಕಛೇರಿ ಸಿಬ್ಬಂದಿ ಮತ್ತು ಸಹಾಯಕ ಸಿಬ್ಬಂದಿಯನ್ನು ಒದಗಿಸುವುದು. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.00 ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 28,000/-** |

**ಟೆಂಡರ್ ವೇಳಾಪಟ್ಟಿ:** 1) ಆರ್‌ಎಫ್‌ಪಿ ದಾಖಲೆಗಳನ್ನು ಜೆಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **29-04-2026, 16.30 ಗಂಟೆಯ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **06-05-2026** ರಂದು **16.00 ಗಂಟೆಗೆ.** 3) ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **12-05-2026** ರಂದು **16.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **13-05-2026** ರಂದು ಬೆಳಗ್ಗೆ **11.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಮೌಲ್ಯಮಾಪನ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಯೋಜನಾ ಅಭಿಯಂತರರು-01, ಬಿ-ಸ್ಮೈಲ್, ಗ್ರೇಟೆಂಪ್ರಾ,

## ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ ಕೋಲಾರ ಜಿಲ್ಲೆ, ಕೋಲಾರ

ಸಂಖ್ಯೆ: ಸಶಿಅ/ಅ2/ಬ್ಲಾ.ಹಂ. ARP/ನೇ.ಇ-ಟೆಂಡರ್/2026-27
ದಿನಾಂಕ:21.04.2026

**ಇ-ಟೆಂಡರ್ ಪ್ರಕಟಣೆ**

2026-27ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮಗಳ ಅನುಷ್ಠಾನ ಸಂಬಂಧ 6 ಬಿ.ಆರ್.ಸಿ. ಕೇಂದ್ರಗಳಿಗೆ ತಲಾ ಒಬ್ಬರಂತೆ Block Academic Resource Person for Career Counsellor ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಒದಗಿಸಲು ಅರ್ಹ ಅಧಿಕೃತ ಸರಬರಾಜುದಾರರು /ಏಜೆನ್ಸಿಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **http://kppp.karanatka.gov.in** ವೀಕ್ಷಿಸಿ. **ಚಟುವಟಿಕೆ:** ಬ್ಲಾಕ್ ಕಛೇರಿಗೆ ತಲಾ ಒಬ್ಬರಂತೆ Block Academic Resource Person for Career Counsellor ಒಟ್ಟು 6 ಹೊರಗುತ್ತಿಗೆ ನೌಕರರ ಸೇವೆ ಒದಗಿಸಲು. ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **08.05.2026ರ ಸಂಜೆ: 4.00 ಗಂಟೆ. ಟೆಂಡರ್‌ಗೆ ಇಟ್ಟ ಮೊತ್ತ:** ರೂ 19.80 ಲಕ್ಷಗಳು. **ಇಲಾಖೆಯ ವೆಬ್‌ಸೈಟ್: http://kppp.karanatka.gov.in**

ಸಹಿ/-ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಶಿಕ ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:48/ಕೆಎಸ್‌ಎಂಸಿಎ/2026-27

## ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ,
ಶಾಸಕರ ಭವನ, 1ನೇ ಮಹಡಿ, 3ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು-560 040

ಸಂ.: ಕಾ.ಪಾ.ಅ(ವಿಜನ)/ಟೆಂಡರ್/ಕೆಪಿಪಿಪಿ/01/2026-27 ದಿನಾಂಕ: 28.04.2026

**ಟೆಂಡರ್ ಪ್ರಕಟಣೆ**

(ಏಕ ಲಕೋಟೆ ಪದ್ಧತಿ) (ಜೆಟಿಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಬೆಂಪನಪಾ/ಬಿಬಿಎಂಪಿಯಲ್ಲಿ ನೋಂದಾಯಿತ ಹಾಗೂ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಕೆಡಬ್ಲ್ಯು-1 ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜನ್ನು ಆಹ್ವಾನಿಸಿದ್ದಾರೆ.

| ಕ್ರ ಸಂ. | ಕಾಮಗಾರಿಯ ಹೆಸರು |
|---|---|
| | (ದ್ವಿ ಲಕೋಟೆ ಪದ್ಧತಿ) (ಕೆಡಬ್ಲ್ಯು-1) |
| 1 | ವಿಜಯನಗರ ಉಪ ವಿಭಾಗದಲ್ಲಿ (ವಾರ್ಡ್ ನಂ 83, 84, 85, 86, 87, 88 & 89) ತಾತ್ಕಾಲಿಕ ಮಳೆಗಾಲ ನಿಯಂತ್ರಣ ಕೊಠಡಿ ನಿರ್ಮಾಣ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 17.50, ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ: 17.47, ಇಎಂಡಿ ಮೊತ್ತ ರೂ.: 43,675.00, ವರ್ಗ: ಇತರೆ.** |
| 2 | ಗಾಳಿ ಆಂಜನೇಯ ದೇವಸ್ಥಾನ ಉಪ ವಿಭಾಗದಲ್ಲಿ (ವಾರ್ಡ್ ನಂ 82, 90, 91, 92, 93 & 94) ತಾತ್ಕಾಲಿಕ ಮಳೆಗಾಲ ನಿಯಂತ್ರಣ ಕೊಠಡಿ ನಿರ್ಮಾಣ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 15.00, ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ: 14.99, ಇಎಂಡಿ ಮೊತ್ತ ರೂ.: 37,475.00, ವರ್ಗ: ಇತರೆ.** |

**ವೇಳಾಪಟ್ಟಿ:** (1) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ **29.04.2026, ಸಂಜೆ 4:30**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **08.05.2026**ರ **ಸಂಜೆ 4:30 ಗಂಟೆ**ವರೆಗೆ. (3) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **11.05.2026**ರ ಬೆಳಗ್ಗೆ **11:00 ಗಂಟೆ**ಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿಜಯನಗರ), ಬೆಂಪನಪಾ, ವಲಯ-02

## ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್

LIC HFL — LIC HOUSING FINANCE LTD

ಬ್ಯಾಕ್ ಆಫೀಸ್, 1 ನೇ ಮಹಡಿ, ಜೀವನ್ ಮಂಗಲ್, ಹೇಯ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು, ಕರ್ನಾಟಕ – 560025.

**ಇ-ಹರಾಜು ಮಾರಾಟ ಪ್ರಕಟಣೆ**

ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ರ ಅಡಿ ಚಾರ್ಜ್ ಮಾಡಲಾದ ಸ್ಥಿರ ಆಸ್ತಿಗಳ ಮಾರಾಟ ಸೂಚನೆ

ಕೆಳಸಹಿದಾರರು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿ (ಎಲ್‌ಐಸಿ ಹೆಚ್‌ಎಫ್‌ಎಲ್) ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ಮತ್ತು ಸೆಕ್ಷನ್ 13(2) ರ ನಿಯಮ 3ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಈ ಕೆಳಗಿನ ಸಾಲಗಾರರು/ಅಡಮಾನದಾರರು ಮತ್ತು ಜಾಮೀನುದಾರರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಬಾಕಿ ಮೊತ್ತ ಪಾವತಿಸುವಂತೆ ಸೂಚಿಸಲಾಗಿತ್ತು. ಆದಾಗ್ಯೂ, ಸಾಲಗಾರರು/ಅಡಮಾನದಾರರು ಮತ್ತು ಜಾಮೀನುದಾರರು ಹಣ ಮರುಪಾವತಿಸುವಲ್ಲಿ ವಿಫಲರಾಗಿದ್ದು, ಕೆಳಸಹಿದಾರರು ಈ ಕೆಳಗಿನ ಆಸ್ತಿಗಳನ್ನು ಸೆಕ್ಷನ್ 13(4) ಮತ್ತು 14 ರ ಕಾಯಿದೆ ನಿಯಮ 8 ರ ಅನ್ವಯ ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಈ ಸೂಚನೆಯ ಮೂಲಕ ಸಾರ್ವಜನಿಕರು ಹಾಗೂ ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಎಲ್‌ಐಸಿ ಹೆಚ್‌ಎಫ್‌ಎಲ್ ಗೆ ಅಡಮಾನ ಮಾಡಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿ, ಎಲ್‌ಐಸಿ ಹೆಚ್‌ಎಫ್‌ಎಲ್ ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದು, ಆಸ್ತಿಗಳನ್ನು ಈ ಕೆಳಗೆ ವಿವರಿಸಿರುವಂತೆ "ಎಲ್ಲಿ ಹೇಗಿದೆಯೋ ಹಾಗೆ", "ಏನು ಇದೆಯೋ ಹಾಗೆ", ಮತ್ತು "ಯಾವುದು ಇದೆಯೋ ಹಾಗೆ" "ಯಾವುದೇ ಅವಲಂಬನೆ ಇಲ್ಲದೆ" ಮಾರಾಟ ಮಾಡಲಿರುವರು.

**ಆಸ್ತಿ ವಿವರ : ಶೆಡ್ಯೂಲ್ 'ಎ' (ಸಂಪೂರ್ಣ ಆಸ್ತಿ) ;** ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಪ್ರಸ್ತುತ ಮುನ್ಸಿಪಲ್ ನಂ. 9 (ಈ ಮೊದಲು ಸರ್ವೆ ನಂ. 59/1, ವಿಸ್ತೀರ್ಣ 23 ಗುಂಟೆಗಳು ಮತ್ತು ಸರ್ವೆ ನಂ. 59/3, ವಿಸ್ತೀರ್ಣ 1 ಎಕರೆ 23 ಗುಂಟೆಗಳು ಕೂಡ್ಲು ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು), ವಾರ್ಡ್ ನಂ. 191, ಒಟ್ಟು ಎಲ್ಲ ವಿಸ್ತೀರ್ಣ 91595.28 ಚದರ ಅಡಿ ಮತ್ತು ಚಕ್ಕುಬಂದಿ ಈ ಕೆಳಗಿನಂತಿದೆ : ಪೂರ್ವಕ್ಕೆ : ಟ್ಯಾಂಕ್ ಬೆಡ್ ಮತ್ತು ಕೆರೆಯ ಗಡಿ, ಪಶ್ಚಿಮಕ್ಕೆ : ಶ್ರೀನಿವಾಸ ರೆಡ್ಡಿ ರವರಿಗೆ ಸೇರಿದ ಭೂಮಿ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಟ್ಯಾಂಕ್ ಬೆಡ್ ಮತ್ತು ರಘುರಾಮ ರೆಡ್ಡಿ ರವರಿಗೆ ಸೇರಿದ ಭೂಮಿ.

**ಶೆಡ್ಯೂಲ್ –'ಬಿ' : (ಭಾಗ ಮಾಡಲಾಗದ ಪಾಲನ್ನು ಇಲ್ಲಿ ವಿವರಿಸಲಾಗಿದೆ) :** ಭಾಗ ಮಾಡಲಾಗದ ಪಾಲು **2.62% (2400 ಚದರ ಅಡಿಗಳಿಗೆ ಸಮನಾದುದು)** ಭೂಮಿ ಸೇರಿದಂತೆ, ಶೆಡ್ಯೂಲ್ 'ಎ' ಆಸ್ತಿಯಲ್ಲಿದೆ.

**ಶೆಡ್ಯೂಲ್ 'ಸಿ' (ಸಾಲು ಮನೆಗಳ ವಿವರವನ್ನು ಇಲ್ಲಿ ವಿವರಿಸಲಾಗಿದೆ) :** ವಾಸಯೋಗ್ಯ ಸಾಲು ಮನೆಗಳ ನಂ. **4, 3 ಮತ್ತು 1 ಬ್ಲಾಕ್ "ಅಲೆಕ್ಸಿಸ್" ಆಫ್ "ಬ್ಲ್ಯೂಸ್", ನಂ. 5 ಬ್ಲಾಕ್ "ಜೋ" ಆಫ್ "ಬ್ಲ್ಯೂಸ್" ಮತ್ತು ನಂ. 1 ಬ್ಲಾಕ್ "ಡೋರಿಸ್" ಆಫ್ "ಬ್ಲ್ಯೂಸ್"** ನ್ನು ಶೆಡ್ಯೂಲ್ "ಎ" ಆಸ್ತಿಯಲ್ಲಿದ್ದು, ಸೂಪರ್ ಬಿಲ್ಟಪ್ ಪ್ರದೇಶ ಕ್ರಮವಾಗಿ 5118, 5118, 5118, 5185 ಮತ್ತು **5185 ಚದರ ಅಡಿಗಳ** ಸೂಪರ್ ಬಿಲ್ಟಪ್ ಪ್ರದೇಶ ಜೊತೆಗೆ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳ ಹಕ್ಕು ಮತ್ತು ಸಾಮಾನ್ಯ ಸೌಲಭ್ಯಗಳು ಮತ್ತು ಸೌಕರ್ಯಗಳು ಸಮನಾಗಿ ಭಾಗಮಾಡಲಾಗದ ಪಾಲು ಇಲ್ಲಿ ನೀಡಲಾಗಿದ್ದು, ಮತ್ತು **ಎರಡು ಕಾರು ನಿಲುಗಡೆಗೆ** ಸ್ಥಳಾವಕಾಶವು ತಳಮಹಡಿಯಲ್ಲಿ ಕ್ರಮವಾಗಿ ನಂ. 4, 5, 3, 1 ಮತ್ತು 1 ಎಂದು ಗುರುತು ಹಾಕಲಾಗಿದೆ (ಈ ಕೆಳಗಿನ ಕೋಷ್ಟಕದಲ್ಲಿರುವಂತೆ)

| ಕ್ರ. ಸಂ. | ಹೆಸರು | ಎಲ್‌ಎಎನ್ | ತಗಾದೆ ಸೂಚನೆ ದಿನಾಂಕ | ಪಾವತಿಸಬೇಕಾದ ಮೊತ್ತ |
|---|---|---|---|---|
| | | | ತಗಾದೆ ಸೂಚನೆ ದಿನಾಂಕ | |
| 1 | ಶ್ರೀ ನಾಗರಾಜು ಬಸವರಾಜ್. | 411900014344 | 26-02-2020 | ₹ 9,51,22,601.50/- |
| 2 | ಶ್ರೀಮತಿ ಸುಮತಿ ಸುರೇಶ | 411900014343 | 26-11-2019 | ₹ 8,29,61,585.30/- |
| 3 | ಶ್ರೀ ಮನೋಜ್ ಸುಂದರೇಶ್ವರನ್ | 411900014182 | 26-02-2020 | ₹ 8,71,99,027.53/- |
| 4 | ಶ್ರೀ ಹರಿಕೃಷ್ಣ ಸುವರ್ಣಂಕರ ಮತ್ತು ಮೇ ಬ್ಲಾಕ್ ಪೆಪ್ಪರ್ ಟೆಕ್ನಾಲಜೀಸ್ ಪ್ರೈ | 411900014030 | 26-02-2020 | ₹ 9,26,35,446.41/-- |
| 5 | ಶ್ರೀ ಶ್ರೀನಿವಾಸ ರಾವ್ ಪುಟ್ಟ. | 411900013712 | 30-11-2019 | ₹ 8,87,95,856.38/- |

| ಕ್ರ. ಸಂ. | ವಿಲ್ಲಾ ಹೆಸರು | ಎಲ್‌ಎಎನ್ | ಆರ್‌ಪಿ ಮೊತ್ತ | ಇಎಂಡಿ | ವರ್ಚುವಲ್ ಖಾತೆ (ಫಲಾನುಭವಿ ಹೆಸರು : ಎಲ್‌ಐಸಿಹೆಚ್‌ಎಫ್‌ಎಲ್, ಐಎಫ್‌ಎಸ್ ಕೋಡ್: HDFC0000009) |
|---|---|---|---|---|---|
| 1 | 4. ಬ್ಲಾಕ್ ಅಲೆಕ್ಸಿಸ್ | 411900014344 | ₹ 2,61,00,000/- | ₹ 26,10,000/- | LHFLBA411900014344 |
| 2 | 5. ಬ್ಲಾಕ್ ಜೋ | 411900014343 | ₹ 2,61,00,000/- | ₹ 26,10,000/- | LHFLBA411900014343 |
| 3 | 3. ಬ್ಲಾಕ್ ಅಲೆಕ್ಸಿಸ್ | 411900014182 | ₹ 2,61,00,000/- | ₹ 26,10,000/- | LHFLBA411900014182 |
| 4 | 1. ಬ್ಲಾಕ್ ಅಲೆಕ್ಸಿಸ್ | 411900014030 | ₹ 2,61,00,000/- | ₹ 26,10,000/- | LHFLBA411900014030 |
| 5 | 1. ಬ್ಲಾಕ್ ಡೋರಿಸ್ | 411900013712 | ₹ 2,61,00,000/- | ₹ 26,10,000/- | LHFLBA411900013712 |

| | |
|---|---|
| ಸ್ವಾಧೀನತೆ ದಿನಾಂಕ (ಭೌತಿಕ) | 03/09/2021 |
| ಇ-ಹರಾಜು ವೆಬ್‌ಸೈಟ್ | https://online.lichousing.com/eauction/ & https://www.auctionbazaar.com |
| ಆಸ್ತಿ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ | 13ನೇ ಮೇ 2026 ಮತ್ತು ಬೆಳಗ್ಗೆ 10:30ರಿಂದ ಮಧ್ಯಾಹ್ನ 3:00 ಗಂಟೆ |
| ಆಸ್ತಿ ದಾಖಲೆ ಪರಿಶೀಲಿಸುವ ವಿಳಾಸ | ಬ್ಯಾಕ್ ಆಫೀಸ್, 1 ನೇ ಮಹಡಿ, ಎಲ್‌ಐಸಿ ಜೀವನ್ ಮಂಗಲ್ ಕಟ್ಟಡ, ಹೇಯ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು, ಕರ್ನಾಟಕ - 560025. |
| ಆಸ್ತಿಯ ದಾಖಲೆ ಪರಿವೀಕ್ಷಣೆ ದಿನಾಂಕ ಮತ್ತು ಪರಿಶೀಲನೆ ಸಮಯದ ಅವಧಿ | 14ನೇ ಮೇ 2026 ಮತ್ತು ಬೆಳಗ್ಗೆ 10:00 ರಿಂದ ಮಧ್ಯಾಹ್ನ 1:00ಗಂಟೆ |
| ಸಂಪರ್ಕಿಸಬೇಕಾದ ವ್ಯಕ್ತಿ | ಶ್ರೀ ಎ ಎಸ್ ಆರ್ ಫಣೀಂದ್ರ, ಸಹಾಯಕ ಮುಖ್ಯ ವ್ಯವಸ್ಥಾಪಕರು, ಮೊಬೈಲ್ ಸಂ. 8008177199 |
| ಆನ್‌ಲೈನ್ ಟೆಂಡರ್/ಬಿಡ್ ಸಲ್ಲಿಸಲು ಕೊನೆಯ ದಿನಾಂಕ | 15ನೇ ಮೇ 2026 ಮಧ್ಯಾಹ್ನ 3 ಗಂಟೆವರೆಗೆ |
| ಇ-ಹರಾಜು ದಿನಾಂಕ ಮತ್ತು ಸಮಯ | 16ನೇ ಮೇ 2026 ಮತ್ತು ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ |

- ಆರಂಭದಲ್ಲಿ ಬಿಡ್ ಹೆಚ್ಚಳ ಮೊತ್ತ ರೂ.25000/- ಆಗಿರುತ್ತದೆ ಆದಾಗ್ಯೂ ಅಧಿಕೃತ ಅಧಿಕಾರಿ ಬಿಡ್ಡಿಂಗ್ ಹೆಚ್ಚಳ ಮೊತ್ತವನ್ನು ಪ್ರತಿ ಆಸ್ತಿಯ ಬಿಡ್ಡಿಂಗ್ ಸಂದರ್ಭದಲ್ಲಿ ಬಿಡ್ಡಿಂಗ್ ಮೊತ್ತದ ಹೆಚ್ಚಳವನ್ನು ಉಲ್ಲೇಖಿಸುವರು ಇಲ್ಲವಾದರೆ ನಿರ್ಧರಿಸಲಿರುವರು.
- ನಿಯಮ ಮತ್ತು ನಿಬಂಧನೆಗಳಿಗಾಗಿ ಈ ವೆಬ್‌ಸೈಟ್ ವೀಕ್ಷಿಸಿ : **https://online.lichousing.com/eauction/**

ಸ್ಥಳ: ಬೆಂಗಳೂರು
ದಿನಾಂಕ : 29.04.2026

ಸಹಿ/-
ಅಧಿಕೃತ ಅಧಿಕಾರಿ
ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

## ಕರ್ನಾಟಕ ಸರ್ಕಾರ
## ಕಾರ್ಯಪಾಲಕ ಇಂಜಿನಿಯರರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋಇವಿ:ಎಇ-3:ಟೆಂಡರ್-05:2026-27 ದಿನಾಂಕ: 28.04.2026

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

**ಕಾಮಗಾರಿಗಳ ವಿವರ :- ಕೆಪಿಪಿ ಪೋರ್ಟಲ್ ಮೂಲಕ- ದ್ವಿ ಲಕೋಟೆ ಪದ್ಧತಿ :- ಸಾಮಾನ್ಯ :- ಲೆಕ್ಕ ಶೀರ್ಷಿಕೆ: 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆ :-** (1) ಮೊಳಕಾಲ್ಮೂರು ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 13 ಚಿತ್ರಪಳ್ಳಿ ಸರ್ಕಲ್‌ನಿಂದ ಕೊಳಹಾಳು ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ (ಎಸ್.ಹೆಚ್.243) (ವ.ಇಂ. 27836)/2ನೇ ಕರೆ **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):-200.00**

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ 04-05-2026 ಸಮಯ 17-30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 05-05-2026 ಸಮಯ 16-00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 06-05-2026 ಸಮಯ 16-15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 08-05-2026 ಸಮಯ 11-00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು

DIPR/CTA/KSMCA/70/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

## ಕರ್ನಾಟಕ ಸರ್ಕಾರ
## ಕಾರ್ಯಪಾಲಕ ಅಭಿಯಂತರ ರವರ ಕಛೇರಿ
## ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು-570023

ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ-ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.
ಪ್ರಕಟಣೆ ಸಂಖ್ಯೆ.: 01/2026-27 ದಿನಾಂಕ: 16.04.2026

**ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್‌ಪ್ರಕಟಣೆ**

ಈ ಕಛೇರಿಯಿಂದ ಉಲ್ಲೇಖಿ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ತಿ.ನರಸೀಪುರ ತಾಲ್ಲೂಕಿನ 2025-26ನೇ ಸಾಲಿನ ಲೆಕ್ಕಶೀರ್ಷಿಕೆ:- ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಹಾಗೂ 2024-25ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 5054 ಯೋಜನೆ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ದಿ: 27.04.2026 ರಿಂದ ದಿ: 19.05.2026 ರವರೆಗೆ ಸಂಜೆ 16.30 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 18.05.2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 20.05.2026ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರ.ಸಂ. 01. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಅಂಕನಹಳ್ಳಿ, ಕೋಣಗಹಳ್ಳಿ, ಕಳ್ಳೀಪುರ, ಕೇತುಪುರ, ಗಾಣಿಗನಕೊಪ್ಪಲು, ಗುಡ್ಡದಕೊಪ್ಪಲು, ಕರಿಹುರಳಿಕೊಪ್ಪಲು, ಮೇಣಸಿಕ್ಯಾತನಹಳ್ಳಿ, ದೊಡ್ಡಮುಲಗೂಡು, ಕಾಡುಕೊತ್ತನಹಳ್ಳಿ ಮತ್ತು ಹನುಮನಾಳು ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25492) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 205.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 170.90 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,56,500.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

**ಕ್ರ.ಸಂ.02. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಚಿಕ್ಕಬೂಹಳ್ಳಿ, ಎಂ.ಕೆಬ್ಬೆಹುಂಡಿ, ಮುಸುವಿನಕೊಪ್ಪಲು, ಕೈಯಂಬಳ್ಳಿ, ಬೊಮ್ಮನಹಳ್ಳಿ, ಸೋಸಲೆ, ದೊಡ್ಡಬಾಗಿಲು, ಹೊರಳಹಳ್ಳಿ, ಎಸ್.ದೊಡ್ಡಪುರ, ಕೆಂಪನಪುರ, ಎಸ್.ಕೆಬ್ಬೆಹುಂಡಿ, ಕೊಳತ್ತೂರು ಮತ್ತು ಚಿದರಹಳ್ಳಿ ಗ್ರಾಮಗಳ ಸಾಮನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25489) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 230.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 193.28 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,90,000.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

**ಕ್ರ.ಸಂ.03. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಕರೋಹಟ್ಟಿ, ವಾಟಾಳು, ವಾಟಾಳುಪುರ, ಸುಜ್ಜಲೂರು, ಆದಿಬೆಟ್ಟಹಳ್ಳಿ, ಮೂಗೂರು, ಮಾದ್ರಹಳ್ಳಿ, ಮಾವಿನಹಳ್ಳಿ, ಮಾದಾಪುರ, ಜಾಲಹಳ್ಳಿ, ಹೆಮ್ಮಿಗೆ, ಟಿ.ಮೇಗಡಹಳ್ಳಿ, ಹೊಸಹಳ್ಳಿ ಮತ್ತು ಚೌಹಳ್ಳಿ ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25490) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 210.38 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,16,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

**ಕ್ರ.ಸಂ.04. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ತಿ.ನರಸೀಪುರ ತಾಲ್ಲೂಕು ಮಾದೇಗೌಡನಹುಂಡಿ ಗ್ರಾಮದಿಂದ ಗರ್ಗೇಶ್ವರಿ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ಮಾದೇಗೌಡನಹುಂಡಿ, ಪಟ್ಟೆಹುಂಡಿ, ರಂಗಸಮುದ್ರ, ಕುಪ್ಯ, ತುಂಬಲ, ನಿಂಗೇಗೌಡನಹುಂಡಿ, ಹಳೆಕೆಂಪಯ್ಯನಹೊಂಡಿ, ಗರ್ಗೇಶ್ವರಿ ಗ್ರಾಮ ಪರಿಮಿತಿಯಲ್ಲಿ ಮತ್ತು ಬಿಲಿಗೆರೆಹುಂಡಿ ಗ್ರಾಮದಿಂದ ಆಲಸ್ತಿಕಟ್ಟೆಹುಂಡಿ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ಸಿಸಿ ರಸ್ತೆ ನಿರ್ಮಾಣ ಕಾಮಗಾರಿ. (RDPR/2025-26/RD/WORK_INDENT25617) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 209.11 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,14,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821-2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಮೊಬೈಲ್ ಸಂಖ್ಯೆ: ಕಿ.ಇಂ. 8971599285

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು
DIPR/DDMYS/118/KSMCA/102/2026-27

ಹೊಸ ದಿಗಂತ
ಬುಧವಾರ, 29 ಏಪ್ರಿಲ್ 2026
ಬೆಂಗಳೂರು

# ನವಭಾರತದ ಡಿಜಿಟಲ್ ಪ್ರತಿರೋಧ

## ಪ್ರಹಾರ್ ನೀತಿ ಮತ್ತು ಬದಲಾಗುತ್ತಿರುವ ಭದ್ರತಾ ಆಯಾಮಗಳು



### ತ್ವರಿತ ವಿಶ್ಲೇಷಣೆಗೆ ಪ್ರಹಾರ್ ಬದ್ಧ

ದತ್ತಾಂಶಗಳ ವೈಜ್ಞಾನಿಕ ಮತ್ತು ಆಳವಾದ ವಿಶ್ಲೇಷಣೆಯು ಈ ಇಡೀ ಭದ್ರತಾ ವ್ಯವಸ್ಥೆಯ ಬೆನ್ನೆಲುಬಾಗಿದೆ ಎನ್ನಬಹುದು. ಕಳೆದ ಎರಡು ವರ್ಷಗಳ ಅಂದರೆ 2024 ರಿಂದ ಇಲ್ಲಿಯವರೆಗೂ ಅಧಿಕೃತ ಅಂಕಿ-ಅಂಶಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದರೆ, ಭಾರತದ ಗುಪ್ತಚರ ಸಂಸ್ಥೆಗಳು ಈ ಹೊಸ ತಾಂತ್ರಿಕ ನಿಗಾ ವ್ಯವಸ್ಥೆಯ ಮೂಲಕ ಸಾಧಿಸಿದ ಯಶಸ್ಸು ಕಣ್ಣಿಗೆ ಕಟ್ಟುವಂತಿದೆ. ಈ ಯಶಸ್ಸಿನ ಹಿಂದೆ 'ನ್ಯಾಟ್‌ಗ್ರಿಡ್' ಅಥವಾ ನ್ಯಾಷನಲ್ ಇಂಟೆಲಿಜೆನ್ಸ್ ಗ್ರಿಡ್‌ನ ವಿಶೇಷ ಪಾತ್ರವಿದೆ. 3,400 ಕೋಟಿ ರೂ. ಹೂಡಿಕೆಯೊಂದಿಗೆ 21 ಸಂಸ್ಥೆಗಳ ದತ್ತಾಂಶ ಜೋಡಿಸಿದ ಈ ವ್ಯವಸ್ಥೆ ಪ್ರತಿ ತಿಂಗಳು 45,000 ಗುಪ್ತಚರ ಕ್ವೆರಿಗಳನ್ನು ಸಂಸ್ಕರಿಸುತ್ತದೆ. ತೆರಿಗೆ ವಿವರಗಳು, ಬ್ಯಾಂಕ್ ವಹಿವಾಟುಗಳು, ಪಾಸ್‌ಪೋರ್ಟ್ ವಿವರಗಳು, ವಿಮಾನ ಮತ್ತು ರೈಲು ಪ್ರಯಾಣದ ದಾಖಲೆಗಳು ಹಾಗೂ ದೂರಸಂಪರ್ಕ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಜೋಡಿಸುವ ಮೂಲಕ ಸಂಶಯಾಸ್ಪದ ವ್ಯಕ್ತಿಗಳ ಚಟುವಟಿಕೆಗಳನ್ನು ತ್ವರಿತವಾಗಿ ವಿಶ್ಲೇಷಿಸಲು ನಮ್ಮ ಏಜೆನ್ಸಿಗಳಿಗೆ ಈಗ ಸಾಧ್ಯವಾಗುತ್ತಿದೆ.



ಭಾರತದ ಆಂತರಿಕ ಭದ್ರತೆಯ ಇತಿಹಾಸದಲ್ಲಿ ನಾವು ಒಂದು ಅತ್ಯಂತ ಸಂಕೀರ್ಣವಾದ ಮತ್ತು ಸವಾಲಿನ ಕಾಲಘಟ್ಟದಲ್ಲಿ ನಿಂತಿದ್ದೇವೆ. ಜಾಗತಿಕವಾಗಿ ಯುದ್ಧದ ಪರಿಕಲ್ಪನೆಗಳು ಬದಲಾಗುತ್ತಿವೆ. ಒಂದು ಕಾಲದಲ್ಲಿ ಎರಡು ರಾಷ್ಟ್ರಗಳ ನಡುವಿನ ಸಂಘರ್ಷ ಎಂದರೆ ದೇಶದ ಗಡಿಭಾಗದಲ್ಲಿ ಸೈನಿಕರು ಮುಖಾಮುಖಿಯಾಗಿ ನಡೆಸುವ ಹೋರಾಟವಾಗಿತ್ತು. ಆದರೆ ಇಪ್ಪತ್ತೊಂದನೇ ಶತಮಾನದ ಈ ಮೂರನೇ ದಶಕದಲ್ಲಿ ಯುದ್ಧವು ಕೇವಲ ಭೂಮಿ, ಆಕಾಶ ಅಥವಾ ಸಮುದ್ರಕ್ಕೆ ಸೀಮಿತವಾಗಿಲ್ಲ, ಇಂದಿನ ಯುದ್ಧಗಳು ಕಣ್ಣಿಗೆ ಕಾಣದ ಡಿಜಿಟಲ್ ತರಂಗಾಂತರಗಳಲ್ಲಿ, ದತ್ತಾಂಶಗಳ ನಡುವೆ ಮತ್ತು ಪ್ರತಿಯೊಬ್ಬ ನಾಗರಿಕನ ಮನಸ್ಸಿನಲ್ಲಿ ಮೂಡುವ ಆಲೋಚನೆಗಳನ್ನು ಗುರಿಯಾಗಿಸಿ ನಡೆಯುತ್ತಿವೆ. ಈ ಹೊಸ ಮಾದರಿಯ ಯುದ್ಧವನ್ನು ತಾಂತ್ರಿಕವಾಗಿ 'ಹೈಬ್ರಿಡ್ ವಾರ್‌ಫೇರ್' ಎಂದು ಕರೆಯಲಾಗುತ್ತದೆ.

### ಅದೃಶ್ಯ ಶತ್ರು ಎದುರಿಸಲು ಪ್ರಹಾರ್

ಇಂತಹ ಅದೃಶ್ಯ ಶತ್ರುಗಳನ್ನು ಎದುರಿಸಲು ಮತ್ತು ದೇಶದ ಸಾರ್ವಭೌಮತ್ವವನ್ನು ಕಾಪಾಡಲು ಸರ್ಕಾರ ಫೆಬ್ರವರಿ 23, 2026ರಂದು ಜಾರಿಗೆ ತಂದ 'ಪ್ರಹಾರ್' (PRAHAAR) ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ನೀತಿಯು ದೇಶದ ರಕ್ಷಣಾ ವ್ಯೂಹದಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಈ ನೀತಿಯು ಕೇವಲ ಶಸ್ತ್ರಾಸ್ತ್ರ ಬಲವನ್ನು ನಂಬದೆ, ಆಧುನಿಕ ತಂತ್ರಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆಯನ್ನು ತನ್ನ ಅಸ್ತ್ರವನ್ನಾಗಿ ಮಾಡಿಕೊಂಡಿರುವುದು ವಿಶೇಷ.

PRAHAAR

### ಪ್ರಚೋದನಾತ್ಮಕ ಪೋಸ್ಟ್‌ಗಳ ಮೇಲೆ ಕಣ್ಗಾವಲು



ತಂತ್ರಜ್ಞಾನದ ಬಳಕೆಯು ಕೇವಲ ದತ್ತಾಂಶಗಳಿಗೆ ಮಾತ್ರ ಸೀಮಿತವಾಗಿಲ್ಲ, ಭಾರತೀಯ ಸೇನೆ ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಗಳು ಇಂದು ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ "ಇಂಟೆಲಿಜೆನ್ಸ್ ಫ್ಯೂಷನ್ ಸೆಂಟರ್‌ಗಳನ್ನು ನಿರಂತರವಾಗಿ ನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ಪ್ರತಿ ಕ್ಷಣವೂ ಲಕ್ಷಾಂತರ ಮಾಹಿತಿಗಳು ವಿಶ್ಲೇಷಣೆಗೆ ಒಳಪಡುತ್ತವೆ. ಉದಾಹರಣೆಗೆ, ಯಾವುದಾದರೂ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಪ್ರಚೋದನಾತ್ಮಕ ಪೋಸ್ಟ್‌ಗಳ ಸಂಖ್ಯೆ ಹೆಚ್ಚಾದರೆ ಅಥವಾ ವಿದೇಶಿ ಐಪಿ ವಿಳಾಸಗಳಿಂದ ಸುಳ್ಳು ಸುದ್ದಿಗಳು ದೊಡ್ಡ ಮಟ್ಟದಲ್ಲಿ ಹರಡುತ್ತಿದ್ದರೆ, ಈ ತಾಂತ್ರಿಕ ವ್ಯವಸ್ಥೆಯು ತಕ್ಷಣವೇ ಗೃಹ ಸಚಿವಾಲಯಕ್ಕೆ ಎಚ್ಚರಿಕೆಯ ಸಂದೇಶವನ್ನು ಕಳುಹಿಸುತ್ತದೆ. ಇದರಿಂದ ಸ್ಥಳೀಯ ಪೊಲೀಸರು ಮತ್ತು ಆಡಳಿತ ಮಂಡಳಿಯು ಅಹಿತಕರ ಘಟನೆಗಳು ಸಂಭವಿಸುವ ಮೊದಲೇ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಬೇಕಾದ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ. ಇದು ಡಿಜಿಟಲ್ ಜಗತ್ತಿನಲ್ಲಿ ಭಾರತವು ಸಾಧಿಸಿರುವ ತಾಂತ್ರಿಕ ಪ್ರಭುತ್ವಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

### ತಪ್ಪು ಮಾಹಿತಿಗೆ ತಡೆಗೋಡೆ

ಸಶಕ್ತ ತಂತ್ರಜ್ಞಾನದ ಜೊತೆಗೆ ಬಲಿಷ್ಠವಾದ ಕಾನೂನು ಚೌಕಟ್ಟು ಕೂಡ ಈ ಹೋರಾಟದಲ್ಲಿ ಅಷ್ಟೇ ಪ್ರಬಲವಾದ ಪಾತ್ರ ನಿರ್ವಹಿಸುತ್ತದೆ. 2025 ಮತ್ತು 2026ರಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆಗೆ ತರಲಾದ ಮಹತ್ವದ ತಿದ್ದುಪಡಿಗಳು ಕೇಂದ್ರ ಸರ್ಕಾರಕ್ಕೆ ಡಿಜಿಟಲ್ ರಕ್ಷಣೆಯ ವಿಷಯದಲ್ಲಿ ಹೆಚ್ಚಿನ ಅಧಿಕಾರವನ್ನು ನೀಡಿವೆ. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಅಥವಾ ಸಾರ್ವಜನಿಕ ಶಾಂತಿಯನ್ನು ಕದಡುವ ಯಾವುದೇ ಮಾಹಿತಿಯನ್ನು ಅಥವಾ ಖಾತೆಯನ್ನು ಮೂರು ಗಂಟೆಗಳ ಕಾಲಾವಧಿಯೊಳಗೆ ಡಿಜಿಟಲ್ ವೇದಿಕೆಗಳಿಂದ ತೆಗೆದುಹಾಕುವ ಅಧಿಕಾರವನ್ನು ಈಗ ಭಾರತೀಯ ಏಜೆನ್ಸಿಗಳು ಹೊಂದಿವೆ. ಕೇಂದ್ರ ಗೃಹ ಸಚಿವಾಲಯದ ವಾರ್ಷಿಕ ವರದಿ 2024-25ರ ಪ್ರಕಾರ ಕಳೆದ ಒಂದು ವರ್ಷದಲ್ಲಿ 1,11,185 ವಿಧ್ವಂಸಕ ಮತ್ತು ದ್ವೇಷಪೂರಿತ ಸೋಷಿಯಲ್ ಮೀಡಿಯಾ ಪೋಸ್ಟ್‌ಗಳನ್ನು ಗುರುತಿಸಿ ತೆಗೆದು ಹಾಕಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವಲ್ಲ, ಬದಲಾಗಿ ದೇಶದ ನೂರ ನಲವತ್ತು ಕೋಟಿ ಜನರ ಸುರಕ್ಷತೆ ಮತ್ತು ರಾಷ್ಟ್ರೀಯ ಭದ್ರತೆಗಾಗಿ ಅನಿವಾರ್ಯವಾದ ಒಂದು ಶಿಸ್ತುಕ್ರಮವಾಗಿದೆ. ವಿಶೇಷವಾಗಿ ಸೈಬರ್ ಅಪರಾಧಗಳ ತಡೆ ವಿಭಾಗವು ಇಂದು ಅತ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮಾಜದಲ್ಲಿ ಅಶಾಂತಿ ಹರಡುವ ಯಾವುದೇ ಸಣ್ಣ ಪ್ರಯತ್ನವನ್ನೂ ಆರಂಭದಲ್ಲೇ ಚಿವುಟಿ ಹಾಕುತ್ತಿದೆ.



ಅಜಿತ್ ಶೆಟ್ಟಿ ಹೆರಂಜೆ



### ಮಾಹಿತಿ ಪ್ರಸರಣಕ್ಕೆ ಕಡಿವಾಣ

ಭಾರತವು ಎದುರಿಸುತ್ತಿರುವ ಅತಿದೊಡ್ಡ ಆತಂಕವೆಂದರೆ ಸಾಮಾಜಿಕ ಜಾಲತಾಣಗಳ ಮೂಲಕ ಹರಡುತ್ತಿರುವ ವ್ಯವಸ್ಥಿತ ಸಂಚುಗಳು ಮತ್ತು ಮಾಹಿತಿ ಪ್ರಸರಣಗಳು. ಇದನ್ನು ತಾಂತ್ರಿಕವಾಗಿ 'ಸೋಷಿಯಲ್ ಮೀಡಿಯಾ ಇಂಟೆಲಿಜೆನ್ಸ್' ಅಥವಾ ಸಂಕ್ಷಿಪ್ತವಾಗಿ 'SOCMINT' ಎಂದು ಗುರುತಿಸಲಾಗುತ್ತದೆ. ಭಯೋತ್ಪಾದಕ ಸಂಘಟನೆಗಳು ಯುವಜನತೆಯನ್ನು ಸೆಳೆಯಲು ಗಡಿ ದಾಟಿ ಬರುವ ಅಗತ್ಯವಿಲ್ಲ, ಅವರು ತಮ್ಮ ತತ್ವ ಸಿದ್ಧಾಂತಗಳನ್ನು, ಪ್ರಚೋದನಾತ್ಮಕ ಭಾಷಣಗಳನ್ನು ಮತ್ತು ತಿರುಚಿದ ಮಾಹಿತಿಗಳನ್ನೊಳಗೊಂಡ ವಿಡಿಯೋಗಳನ್ನು ಇಂಟರ್ನೆಟ್ ಮೂಲಕ ನೇರವಾಗಿ ನಮ್ಮ ಯುವಕರ ಕೈಯಲ್ಲಿರುವ ಮೊಬೈಲುಗಳಿಗೆ ತಲುಪಿಸುತ್ತಿದ್ದಾರೆ. ಸುಳ್ಳು ಸುದ್ದಿ ಅಥವಾ ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸಿದ 'ಡೀಪ್ ಫೇಕ್' ವಿಡಿಯೋಗಳನ್ನು ಬಳಸಿ ಸಮಾಜದಲ್ಲಿ ಕೋಮು ದ್ವೇಷವನ್ನು ಬಿತ್ತುವುದು ಇಂದಿನ ಶತ್ರುಗಳ ಪ್ರಧಾನ ಕಾರ್ಯತಂತ್ರವಾಗಿದೆ. 'ಪ್ರಹಾರ್' ನೀತಿಯು ಈ ಮೂಲವನ್ನೇ ಭೇದಿಸುವ ಗುರಿ ಹೊಂದಿದೆ. ಇದು ಕೇವಲ ದುರಂತ ನಡೆದ ನಂತರ ತನಿಖೆ ನಡೆಸುವ ಹಳೆಯ ಪದ್ಧತಿಯಲ್ಲದೆ, ಸಂಚುಗಳು ರೂಪಿತವಾಗುತ್ತಿರುವ ಹಂತದಲ್ಲೇ ಅವುಗಳನ್ನು ಗುರುತಿಸಿ ವಿಫಲಗೊಳಿಸುವ ಒಂದು ಸಕ್ರಿಯ ಪ್ರೋ ಆಕ್ಟೀವ್ ರಕ್ಷಣಾ ಕವಚವಾಗಿದೆ.

### ಹಣಕಾಸಿನ ವ್ಯವಹಾರದ ಮೇಲೆ ಕಟ್ಟೆಚ್ಚರ

ಯಾವುದೇ ಭಯೋತ್ಪಾದನಾ ಚಟುವಟಿಕೆಗಳು ಜೀವಂತವಾಗಿರಲು ಹಣಕಾಸಿನ ನೆರವು ಅನಿವಾರ್ಯ. ಈ ಹಣಕಾಸಿನ ಮೂಲಗಳನ್ನೇ ಗುರಿಯಾಗಿಸಿಕೊಂಡು ನಡೆಸಿದ ಕಾರ್ಯಾಚರಣೆಗಳು ಈ ಹೊಸ ನೀತಿಯ ಅಡಿಯಲ್ಲಿ ಅಭೂತಪೂರ್ವ ಯಶಸ್ಸನ್ನು ಕಂಡಿವೆ.




ಹವಾಲಾ ಜಾಲಗಳು, ಅಕ್ರಮ ದೇಣಿಗೆಗಳು ಮತ್ತು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿರುವ ಕ್ರಿಪ್ಟೋಕರೆನ್ಸಿ ಮೂಲಕ ನಡೆಯುವ ವಹಿವಾಟುಗಳ ಮೇಲೆ ತೀವ್ರ ನಿಗಾ ಇಡಲಾಗುತ್ತಿದೆ. ಭಾರತವು ಈಗ ಅಂತಾರಾಷ್ಟ್ರೀಯ ಮಟ್ಟದ ಹಣಕಾಸು ಕಾರ್ಯಪಡೆಯೊಂದಿಗೆ ಅಂದರೆ FATF ಜೊತೆಗೂಡಿ ನಿರಂತರವಾಗಿ ಕೆಲಸ ಮಾಡುತ್ತಿದೆ. ಈ ಸಮನ್ವಯದ ಪರಿಣಾಮವಾಗಿ ವಿದೇಶಗಳಿಂದ ದೇಶವಿರೋಧಿ ಚಟುವಟಿಕೆಗಳಿಗೆ ಹರಿಯುತ್ತಿದ್ದ ಹಣದ ಹರಿವನ್ನು ಬಹುಮಟ್ಟಿಗೆ ಸ್ಥಗಿತಗೊಳಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಇದು ಆಂತರಿಕವಾಗಿ ದೇಶದ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಒಂದು ಗಟ್ಟಿಯಾದ ತಳಹದಿಯನ್ನು ನಿರ್ಮಿಸಿದೆ.

FATF

### ಗಡಿ ನಿರ್ವಹಣೆಯಲ್ಲಿ ತಂತ್ರಜ್ಞಾನ

ಭಾರತದ ಕರಾವಳಿ ಭದ್ರತೆ ಮತ್ತು ಗಡಿ ನಿರ್ವಹಣೆಯಲ್ಲೂ ತಂತ್ರಜ್ಞಾನದ ಅಳವಡಿಕೆ ಒಂದು ಹೊಸ ಆಯಾಮವನ್ನು ಪಡೆದುಕೊಂಡಿದೆ. 2000ದಲ್ಲಿ ಕಾರ್ಗಿಲ್ ರಿವ್ಯೂ ಕಮಿಟಿ ಕರಾವಳಿ ರೇಡಾರ್ ಜಾಲದ ಅಗತ್ಯವನ್ನು ಸ್ಪಷ್ಟಪಡಿಸಿತು, ವಾಜಪೇಯಿ ಸರ್ಕಾರ ಇದನ್ನು ಮೊದಲ ಬಾರಿಗೆ ಪ್ರಸ್ತಾಪ ಮಾಡಿತು. ನಂತರ ಬಂದ ಕಾಂಗ್ರೆಸ್ ಸರ್ಕಾರ ಅದನ್ನು ಮುಂದುವರಿಸಲಿಲ್ಲ, 2008ರ 26/11 ಮುಂಬೈ ದಾಳಿಯಲ್ಲಿ 166 ಜೀವ ಹೋದ ನಂತರ ಎಚ್ಚೆತ್ತ ಕಾಂಗ್ರೆಸ್ 2009ರಲ್ಲಿ ಅನುಮತಿ ನೀಡಿತಾದರೂ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಯೋಜನೆಯ ಅನುಷ್ಠಾನದಲ್ಲಿ ನಿಧಾನ ಮಾಡಿತು. 2014ರಲ್ಲಿ ಮೋದಿ ಸರ್ಕಾರ ನಿಜವಾದ ರಾಜಕೀಯ ಇಚ್ಛಾಶಕ್ತಿ ತೋರಿಸಿ 2015ರಲ್ಲಿ SAGAR ಅನ್ನುವ ಸುರಕ್ಷಾ ಯೋಜನೆಯನ್ನು ಘೋಷಿಸಿ, 2016ರಲ್ಲಿ ಮೊದಲ ಹಂತವನ್ನು ಪೂರ್ಣಗೊಳಿಸಿ, 2018ರಲ್ಲಿ ಎರಡನೇ ಹಂತಕ್ಕೂ ಅನುಮೋದನೆ ಕೊಟ್ಟು ಈ ಯೋಜನೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದರು. ಇಂದು ಗುಜರಾತಿನ ಸರ್ ಕ್ರೀಕಿನಿಂದ ಪಶ್ಚಿಮ ಬಂಗಾಳದ ಸುಂದರಬನ್ ವರೆಗೆ 7,516 ಕಿಲೋಮೀಟರ್ ಕರಾವಳಿ ತೀರದಲ್ಲಿ DRDO ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ನಿರ್ಮಿಸಿದ Integrated Coastal Surveillance System ಅಡಿ 46 ರೇಡಾರ್ ಕೇಂದ್ರಗಳು 24/7 ಗಂಟೆ ನಿಗಾ ಇಡುತ್ತಿವೆ. ನೌಕಾ ಸೇನೆ, ಕೋಸ್ಟ್ ಗಾರ್ಡ್ ಮತ್ತು ಮರೀನ್ ಪೊಲೀಸ್ ಮೂರು ಹಂತದಲ್ಲಿ ಒಂಬತ್ತು ಕರಾವಳಿ ರಾಜ್ಯಗಳು, ಲಕ್ಷದ್ವೀಪ ಮತ್ತು ಅಂಡಮಾನ್-ನಿಕೋಬಾರ್ ದ್ವೀಪ ಪ್ರದೇಶಗಳ ರಕ್ಷಣೆ ನಡೆಸುತ್ತಿವೆ. ಕೊಚ್ಚಿನ್ ಶಿಪ್ಯಾರ್ಡ್ ಅಂತಹ ಪ್ರಮುಖ ಸಂಸ್ಥೆಗಳು ದೇಶೀಯವಾಗಿ ನಿರ್ಮಿಸಿದ INS ವಿಕ್ರಾಂತ್ ವಿಮಾನವಾಹಕ ನೌಕೆ ಮತ್ತು ಅತ್ಯಾಧುನಿಕ ಗಸ್ತು ಹಡಗುಗಳು ಭಾರತದ ಜಲ ಗಡಿಯನ್ನು ರಕ್ಷಣೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಮೀನುಗಾರ ಸಮುದಾಯ Community Interaction Programme ಮೂಲಕ ಈ ಜಾಲದ 'ಕಣ್ಣು ಮತ್ತು ಕಿವಿ'ಯಾಗಿ ಈ ಒಟ್ಟು ರಕ್ಷಣಾ ಜಾಲದ ಪ್ರಾಥಮಿಕ ಹಂತದ ಮಾಹಿತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ವ್ಯವಸ್ಥಿತ ಕಾವಲು 26/11ರ ಅನಾಹುತದಂತಹ ಘಟನೆಗಳು ಪುನಃ ಸಂಭವಿಸದಂತೆ ನೋಡಿಕೊಳ್ಳುವಲ್ಲಿ, ಸಮಾಜ ಹಾಗು ಸರಕಾರ ಒಂದು ಯೋಜನಾ ಬದ್ಧ ರೀತಿಯಲ್ಲಿ ದೇಶದ ರಕ್ಷಣೆಯಲ್ಲಿ ತೊಡಗಿಸಿಕೊಂಡ ಒಂದು ವಿನೂತನ ಪ್ರಯೋಗವಾಗಿದೆ.





INS ವಿಕ್ರಾಂತ್

### ಮಾಹಿತಿ ನಂಬುವ ಮುನ್ನ ಎಚ್ಚರವಿರಲಿ

ದಿಲ್ಲಿಯಲ್ಲಿ ಸ್ಥಾಪಿಸಲಾಗಿರುವ ರಾಷ್ಟ್ರೀಯ ಸೈಬರ್ ಭದ್ರತಾ ಕೇಂದ್ರವು ದಿನದ 24 ಗಂಟೆಯೂ ದೇಶದ ಪ್ರಮುಖ ಮೂಲಸೌಕರ್ಯಗಳಾದ ವಿದ್ಯುತ್ ಕೇಂದ್ರಗಳು, ಪರಮಾಣು ಸ್ಥಾವರಗಳು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಅಭೇದ್ಯವಾದ ಕಾವಲು ಕಾಯುತ್ತಿದೆ. ಆದರೆ ಯಾವುದೇ ಭದ್ರತಾ ನೀತಿಯ ಅಂತಿಮ ಯಶಸ್ಸು ಕೇವಲ ಸರ್ಕಾರದ ಸಿದ್ಧತೆ ಅಥವಾ ಸೈನ್ಯದ ಶಕ್ತಿಯ ಮೇಲೆ ಮಾತ್ರ ಅವಲಂಬಿತವಾಗಿರುವುದಿಲ್ಲ, ಇದು ಒಂದು 'ಸಂಪೂರ್ಣ ಸಮಾಜದ ಸಹಭಾಗಿತ್ವ'ದ ಮೇಲೆ ನಿಂತಿದೆ. ಡಿಜಿಟಲ್ ಯುಗದ ನಾಗರಿಕರಾಗಿ ನಮಗೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಪ್ರತಿಯೊಂದು ಮಾಹಿತಿಯನ್ನೂ ಸತ್ಯವೆಂದು ನಂಬುವ ಮುನ್ನ ಅದರ ಮೂಲ ಮತ್ತು ಉದ್ದೇಶವನ್ನು ಅರಿಯುವ ವಿವೇಕ ಇರಬೇಕಾದುದು ಅತ್ಯಗತ್ಯ. ಶತ್ರುಗಳು ನಮ್ಮ ಭಾವನೆಗಳನ್ನು ಕೆರಳಿಸಿ ಆ ಮೂಲಕ ದೇಶದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸುತ್ತಿರುವಾಗ, ಸಂಯಮ ಮತ್ತು ರಾಷ್ಟ್ರೀಯ ಏಕತೆಯ ಮನೋಭಾವವೇ ಅವರಿಗೆ ನೀಡುವ ಅತ್ಯಂತ ದೊಡ್ಡ ಪ್ರತ್ಯುತ್ತರವಾಗುತ್ತದೆ. ತಂತ್ರಜ್ಞಾನವು ಎಷ್ಟೇ ಮುಂದುವರಿದರೂ ಭಾರತದ ಸಾಂಸ್ಕೃತಿಕ ಒಗ್ಗಟ್ಟು ಮತ್ತು ಪ್ರತಿಯೊಬ್ಬ ನಾಗರಿಕನ ಜಾಗೃತ ಪ್ರಜ್ಞೆಯೇ ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧದ ಅಂತಿಮ ವಿಜಯವನ್ನು ಸಾಧಿಸಬಲ್ಲವು ಎಂಬುದರಲ್ಲಿ ಸಂಶಯವಿಲ್ಲ.

### ಪ್ರಮುಖ ಅಂಶಗಳು

ದತ್ತಾಂಶ ವಿಶ್ಲೇಷಣೆಯೇ ಪ್ರಹಾರ್‌ನ ಅಸ್ತ್ರ 1

ಪ್ರಚೋದನಾತ್ಮಕ ಭಾಷಣಗಳನ್ನು ಮತ್ತು ತಿರುಚಿದ ಮಾಹಿತಿಗಳನ್ನೊಳಗೊಂಡ ವಿಡಿಯೋಗಳಿಗೆ ಬೀಳಲಿದೆ ಕಡಿವಾಣ 2

ತೆರಿಗೆ, ಬ್ಯಾಂಕ್ ವಹಿವಾಟು, ಪಾಸ್‌ಪೋರ್ಟ್ ವಿವರ, ವಿಮಾನ ಮತ್ತು ರೈಲು ಪ್ರಯಾಣದ ದಾಖಲೆಗಳು ಹಾಗೂ ದೂರಸಂಪರ್ಕ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಜೋಡಿಸುವಲ್ಲಿ ಪಾತ್ರ 3

ಪ್ರಚೋದನಕಾರಿ ಪೋಸ್ಟ್‌ಗಳ ಕಡಿವಾಣಕ್ಕೆ ಕೃತಕ ಬುದ್ಧಿಮತ್ತೆ ಆಧಾರಿತ 'ಇಂಟೆಲಿಜೆನ್ಸ್ ಫ್ಯೂಷನ್ ಸೆಂಟರ್ ಬಳಕೆ 4

ಹವಾಲಾ ಜಾಲಗಳು, ಅಕ್ರಮ ದೇಣಿಗೆಗಳು ಮತ್ತು ಕ್ರಿಪ್ಟೋಕರೆನ್ಸಿ ಮೂಲಕ ನಡೆಯುವ ವಹಿವಾಟುಗಳ ಮೇಲೆ ತೀವ್ರ ನಿಗಾ 5



### ದತ್ತಾಂಶಗಳ ಸುರಕ್ಷತೆಗೆ ಪ್ರಹಾರ್

ಸಾಂಪ್ರದಾಯಿಕ ಯುದ್ಧಗಳ ಕಾಲವು ಈಗ ಇತಿಹಾಸದ ಪುಟಗಳಿಗೆ ಸೇರುತ್ತಿದೆ ಎಂಬುದು ಸತ್ಯ. ಇಂದಿನ ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಮಾಹಿತಿಯೇ ನಿಜವಾದ ಸಂಪತ್ತು ಮತ್ತು ಶಕ್ತಿಶಾಲಿ ಆಯುಧವಾಗಿದೆ. ಈ ನಿಟ್ಟಿನಲ್ಲಿ 'ಪ್ರಹಾರ್' ನೀತಿಯ ಅಡಿಯಲ್ಲಿ ಭಾರತವು ತನ್ನದೇ ಆದ ಸ್ವದೇಶಿ ರಕ್ಷಣಾ ತಂತ್ರಜ್ಞಾನಗಳನ್ನು ಮತ್ತು ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ಮತ್ತು ಆಶಾದಾಯಕ ಬೆಳವಣಿಗೆಯಾಗಿದೆ. ವಿದೇಶಿ ತಂತ್ರಜ್ಞಾನಗಳ ಮೇಲಿನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡುತ್ತಾ, ಭಾರತೀಯ ದತ್ತಾಂಶಗಳನ್ನು ಭಾರತದ ಒಳಗಿನ ಸರ್ವರ್‌ಗಳಲ್ಲೇ ಸುರಕ್ಷಿತವಾಗಿ ಸಂರಕ್ಷಿಸುವ 'ಡೇಟಾ ಸಾರ್ವಭೌಮತ್ವ'ಕ್ಕೆ ಈ ನೀತಿಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದು ಶತ್ರು ದೇಶಗಳು ಅಥವಾ ವಿದೇಶಿ ಹ್ಯಾಕರ್‌ಗಳು ನಮ್ಮ ರಾಷ್ಟ್ರೀಯ ದತ್ತಾಂಶಗಳನ್ನು ಕದ್ದು ಅವುಗಳನ್ನು ನಮ್ಮ ವಿರುದ್ಧವೇ ಸೈಬರ್ ದಾಳಿ ಮಾಡಲು ಬಳಸಿಕೊಳ್ಳುವುದನ್ನು ಸಮರ್ಥವಾಗಿ ತಡೆಯುತ್ತದೆ.


### ಬಲಿಷ್ಠ ಶಕ್ತಿ

ಒಟ್ಟಾರೆಯಾಗಿ ಹೇಳುವುದಾದರೆ, 'ಪ್ರಹಾರ್' ನೀತಿಯು ಭಾರತವನ್ನು ಕೇವಲ ಅನಾಹುತಗಳಿಗೆ ಪ್ರತಿಕ್ರಿಯಿಸುವ ರಾಷ್ಟ್ರವಾಗಿರಿಸದೆ, ಶತ್ರುವಿನ ಪ್ರತಿಯೊಂದು ಸಂಚನ್ನು ಆಕ್ರಮಣಕಾರಿಯಾಗಿ ಎದುರಿಸುವ ಮತ್ತು ಅದನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಸಮಯ ಮತ್ತು ಸಂದರ್ಭದಲ್ಲಿ ಕಾರ್ಯಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ವಿಫಲಗೊಳಿಸುವ ಒಂದು ಬಲಿಷ್ಠ ಶಕ್ತಿಯನ್ನಾಗಿ ರೂಪಿಸಿದೆ. ಇಂದು ನಾವು ನಮ್ಮ ಭೌತಿಕ ಗಡಿಗಳನ್ನು ಮಾತ್ರವಲ್ಲ, ನಮ್ಮ ಡಿಜಿಟಲ್ ಗಡಿಗಳನ್ನು, ನಮ್ಮ ನಾಗರಿಕರ ದತ್ತಾಂಶಗಳನ್ನು ಮತ್ತು ಮುಖ್ಯವಾಗಿ ನಮ್ಮ ಯುವಜನತೆಯ ಯೋಚನಾ ರೀತಿಯಲ್ಲಿ ಪ್ರಭಾವ ಬೀರುವ ದೇಶ ವಿರೋಧಿ ಶಕ್ತಿಗಳಿಂದ ರಕ್ಷಿಸುತ್ತಿದ್ದೇವೆ. ಆಧುನಿಕ ಯುಗದ ಸಂಕೀರ್ಣ ಸವಾಲುಗಳಿಗೆ ಆಧುನಿಕ ಮತ್ತು ತಾಂತ್ರಿಕ ಪರಿಹಾರಗಳೇ ಸರಿಯಾದ ಉತ್ತರ ಎಂಬುದನ್ನು ಭಾರತವು ಇಂದು ಇಡೀ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿದೆ. ಭವಿಷ್ಯದ ಸುರಕ್ಷಿತ ಭಾರತದ ನಿರ್ಮಾಣದಲ್ಲಿ ಇಂತಹ ತಾಂತ್ರಿಕ, ಕಾನೂನಾತ್ಮಕ ಮತ್ತು ಬೌದ್ಧಿಕ ಸನ್ನದ್ಧತೆಗಳು ಅತ್ಯಂತ ಅನಿವಾರ್ಯವಾಗಿವೆ. ನವಭಾರತದ ಈ ಡಿಜಿಟಲ್ ಕವಚವು ಮುಂದಿನ ಪೀಳಿಗೆಯ ಸಮೃದ್ಧಿ ಮತ್ತು ಶಾಂತಿಗೆ ಭದ್ರವಾದ ಬುನಾದಿಯಾಗಲಿದೆ ಎಂಬುದು ಖಚಿತ. ಜಾಗೃತ ನಾಗರಿಕರಾಗಿ ಭದ್ರತಾ ಸಂಸ್ಥೆಗಳೊಂದಿಗೆ ಸಹಕರಿಸುವುದು ಮತ್ತು ತಾಂತ್ರಿಕ ಜಗತ್ತಿನ ಅಪಾಯಗಳ ಬಗ್ಗೆ ಎಚ್ಚರದಿಂದಿರುವುದು ಇಂದಿನ ಕಾಲದ ಅತಿದೊಡ್ಡ ಆದ್ಯತೆಯಾಗಿದೆ. ಈ ಸಂಘಟಿತ ಪ್ರಯತ್ನದಿಂದ ಮಾತ್ರ ನಾವು ಭಯೋತ್ಪಾದನೆ ಮುಕ್ತ ಮತ್ತು ಸದೃಢ ಭಾರತವನ್ನು ಕಟ್ಟಲು ಸಾಧ್ಯವಾಗುತ್ತದೆ.

# ಸಂಪಾದಕೀಯ

## ತಾಪಮಾನ ಏರಿಕೆಯ ಸವಾಲು

ವಿಶ್ವದ 100 ಅತ್ಯಧಿಕ ಉಷ್ಣತೆಯ ನಗರಗಳಲ್ಲಿ 95 ನಗರಗಳು ಭಾರತದಲ್ಲೇ ಇವೆಯಂತೆ. ಹಾಗೆಂದು ಅಧ್ಯಯನ ವರದಿಯೊಂದು ಹೇಳಿದೆ. ಖಂಡಿತಕ್ಕೂ ಇದು ಹೆಮ್ಮೆ ಪಡುವ ಸಂಗತಿಯಲ್ಲ, ಬದಲಾಗಿ ಇದು ಆತಂಕಪಡುವ ವಿಚಾರ. ಈಗಾಗಲೇ ದೇಶವು ಅಧಿಕ ಉಷ್ಣತೆಯನ್ನು ಅನುಭವಿಸುವ ಮೂಲಕ ಪರಿಸ್ಥಿತಿಯ 'ಖಾರ'ವನ್ನು ಎದುರಿಸುತ್ತಿದೆ. ಈ ಬಾರಿ ಬೇಸಿಗೆಯು ಬಲುಬೇಗನೆ ದೇಶವನ್ನು ಆವರಿಸಿಬಿಟ್ಟಿರುವುದಂತೂ ಜನಜೀವನವನ್ನೆ ಅಸಹನೀಯಗೊಳಿಸಿದೆ. ಉತ್ತರ ಭಾರತವಷ್ಟೇ ಅಲ್ಲದೆ ದಕ್ಷಿಣ ಭಾರತ ಕೂಡಾ ಬೇಸಿಗೆಯ ಉರಿಯನ್ನು ಅನುಭವಿಸುತ್ತಿದೆ. ಏಪ್ರಿಲ್ ತಿಂಗಳಲ್ಲೇ ದೇಶವು ಅಧಿಕ



ತಾಪಮಾನವನ್ನು ಎದುರಿಸುತ್ತಿದ್ದು, ಏಪ್ರಿಲ್ 24, ಕಳೆದ ನಾಲ್ಕು ವರ್ಷಗಳಲ್ಲೇ ಅತ್ಯಂತ ಉಷ್ಣತೆಯ ದಿನವಾಗಿ ದಾಖಲಾಗಿದೆ. ಬಿರುಬೇಸಿಗೆಯ ಅವಧಿ ಇನ್ನಷ್ಟೆ ಬರಬೇಕಿದ್ದು, ಆಗಿನ ಪರಿಸ್ಥಿತಿ ಹೇಗಿರಬಹುದೆಂಬ ಆತಂಕವು ಎಲ್ಲರನ್ನು ಕಾಡುತ್ತಿರುವುದು ಸುಳ್ಳಲ್ಲ, ಈ ಬಾರಿ ಎಲ್‌ನಿನೋ ಪರಿಣಾಮ ಇರುವುದರಿಂದ ಸಾಮಾನ್ಯಕ್ಕಿಂತ ಹೆಚ್ಚೇ ಉಷ್ಣತೆ ಇರಬಹುದೆಂದು ಹವಾಮಾನ ತಜ್ಞರು ಎಚ್ಚರಿಸಿದ್ದು ಅದರ ಸಂಕೇತಗಳು ಈಗಾಗಲೇ ತೋರಿಬರುತ್ತಿರುವಂತಿವೆ. ಎಲ್‌ನಿನೋ ಪರಿಣಾಮದಿಂದಾಗಿ ಈ ಬಾರಿ ಮುಂಗಾರು ಮಳೆ ಕೂಡಾ ಕಡಿಮೆಯಾಗಬಹುದೆಂದು ಹೇಳಲಾಗುತ್ತಿದ್ದು, ಅದು ಇನ್ನೂ ಕಳವಳಕಾರಿ ವಿಚಾರವಾಗಿದೆ.

ಕಳೆದ ಕೆಲವು ವರ್ಷಗಳಿಂದ ಅಧಿಕ ಉಷ್ಣಹವೆ ವ್ಯಾಪಿಸುತ್ತಿರುವ ವಿದ್ಯಮಾನ ಹೆಚ್ಚುತ್ತಿದೆ. ಜಾಗತಿಕ ಪರಿಸರ ನಾಶ, ತಾಪಮಾನ ಏರಿಕೆ, ಹವಾಮಾನ ಬದಲಾವಣೆ ಇದಕ್ಕೆಲ್ಲ ಕಾರಣವಾಗಿರುವುದು ಎಲ್ಲರಿಗೂ ತಿಳಿದಿರುವುದೆ. ಈ ಬಾರಿ ಉಷ್ಣತೆಯು ಇನ್ನೂ ಅಧಿಕವಿರುವುದರಿಂದ ಹಾಗೂ ಮಳೆ ಕಡಿಮೆಯಾಗುವ ಸಾಧ್ಯತೆಗಳಿರುವುದರಿಂದ ಭಾರತವು ಸಂಭವನೀಯ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಲು ಸಜ್ಜಾಗಬೇಕಾಗಿರುವುದು ಅಗತ್ಯವಾಗಿದೆ. ಹಲವಾರು ರಾಜ್ಯಗಳು ಬಯಲಿನಲ್ಲಿ ಕೂಲಿನಾಲಿ ಮಾಡುವಂತಹ ಅವಧಿಯನ್ನು ಕಡಿಮೆ ಮಾಡುವಂತಹ, ಶಾಲಾ ಅವಧಿಯನ್ನು ಬದಲಿಸುವಂತಹ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ ನಡೆ. ಜನರಿಗೆ ನೀರಿನ ಕೊರತೆ ಬಾಧಿಸದಂತೆ ಸೂಕ್ತ ಕ್ರಮ ತೆಗೆದುಕೊಳ್ಳುವುದೂ ಅಗತ್ಯವಾಗಿದೆ. ನಿರೀಕ್ಷಿಸಿದಂತೆ ಎಲ್‌ನಿನೋ ಮುಂಗಾರಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದರೆ ಅದು ದೇಶದ ಜನಜೀವನದ ಮೇಲೆ, ಆರ್ಥಿಕತೆಯ ಮೇಲೆ ದೊಡ್ಡ ದುಷ್ಪರಿಣಾಮ ಬೀರಬಲ್ಲುದು. ದೇಶವ್ಯಾಪಿಯಾಗಿ ನೀರಿನ ಸಮರ್ಥ ನಿರ್ವಹಣೆ, ಪರಿಸರಸಂವೇದಿ ಕೃಷಿಗೆ ಆದ್ಯತೆ ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುವ ಆವಶ್ಯಕತೆ ಮೂಡಿಬಂದಿದೆ.

# ನೀರಿಳಿಯದ ಗಂಟಲೊಳಗೆ ಕಡುಬು ತುರುಕಿದಂತೆ





ದಿಢೀರನೆ ಹೊಸ ಚರ್ಚೆಯೊಂದು ಹುಟ್ಟಿಕೊಂಡಿದೆ. ಅದು ದೊಡ್ಡ ಹೋರಾಟವಾಗಿ ರೂಪುಗೊಂಡರೂ ಆಶ್ಚರ್ಯವಿಲ್ಲ. ಶಿವಮೊಗ್ಗ ಸಂಸದರಾದ ಬಿ.ವೈ. ರಾಘವೇಂದ್ರ ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಅಣುವಿದ್ಯುತ್ ಸ್ಥಾವರದ ಬಗ್ಗೆ ಜನರು ಆತಂಕಪಡುವ ಅಗತ್ಯವಿಲ್ಲ, ಪರಿಸರಕ್ಕೆ ಹಾನಿಯಾಗುವ ಯಾವುದೇ ಯೋಜನೆಗೆ ನಮ್ಮ ವಿರೋಧವಿದೆ. ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದಾರೆ. ಸಾಧಕ-ಬಾಧಕ ಚರ್ಚಿಸದೆ ಯೋಜನೆ ಜಾರಿ ಮಾಡಲಾಗುವುದಿಲ್ಲ ಎಂದಿದ್ದಾರೆ.

ಈ ಹೇಳಿಕೆಯ ನಂತರ ಏಪ್ರಿಲ್ 27ರಂದು ಸಾಗರದಲ್ಲಿ ಈ ಯೋಜನೆ ವಿರೋಧಿಸುವ ಕುರಿತು ಒಂದು ಸಭೆ ಕೂಡ ನಡೆದಿದೆ. ದಿಢೀರನೆ ಇದೆಲ್ಲಿಂದ ಅಣುವಿದ್ಯುತ್ ಸ್ಥಾವರ ಯೋಜನೆ ಬಂತು ಎಂಬುದು ಸದ್ಯಕ್ಕೆ ಅಚ್ಚರಿಯ ಸಂಗತಿಯಾಗಿದೆ. ಆದರೆ ಈ ಸುದ್ದಿ ಸಂಪೂರ್ಣ ಸುಳ್ಳೂ ಅಲ್ಲ, ದೇಶಾದ್ಯಂತ ಅಣುವಿದ್ಯುತ್ ಉತ್ಪಾದಿಸುವ ಆಟೊಮಿಕ್ ಎನರ್ಜಿ ಡಿಪಾರ್ಟ್‌ಮೆಂಟ್‌ನವರು ರಾಜ್ಯದ ಕಂದಾಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದು, ಸಾಗರದ ಬೇಸೂರು ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಸಾಧ್ಯಾಸಾಧ್ಯತೆ ಕುರಿತು ಮಾಹಿತಿ ಕೇಳಿದ್ದಾರೆ. ಕಂದಾಯ ಕಾರ್ಯದರ್ಶಿಯವರು ಶಿವಮೊಗ್ಗ ಜಿಲ್ಲಾಧಿಕಾರಿಗೆ ಈ ಬಗ್ಗೆ ಮಾಹಿತಿ ಕೇಳಿದ್ದರು.

ಜಿಲ್ಲಾಧಿಕಾರಿಯವರ ಸೂಚನೆಯಂತೆ ಅಧಿಕಾರಿಗಳು ಬೇಸೂರು ಗ್ರಾಮಕ್ಕೆ ತೆರಳಿ ಸಣ್ಣ ಮಟ್ಟದ ಸಮೀಕ್ಷೆ ನಡೆಸಿ ಬಂದಿದ್ದಾರೆ. ಇದರಿಂದಾಗಿ ಗ್ರಾಮಸ್ಥರಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ಆತಂಕ ಶುರುವಾಗಿದೆ. ಒಂದು ಅಣುವಿದ್ಯುತ್ ಸ್ಥಾವರ ಸ್ಥಾಪಿಸಬೇಕೆಂದರೆ 1000 ಎಕರೆ ಜಮೀನು ಬೇಕು. ಅಷ್ಟು ಜಾಗದ ಲಭ್ಯತೆ ಕುರಿತು ಆಟೊಮಿಕ್ ಎನರ್ಜಿ ಇಲಾಖೆ ವಿಚಾರಿಸಿರುವುದು ಕೂಡ ನಿಜ. ಅಲ್ಲಿಗೆ ಇದು ಗಾಳಿ ಸುದ್ದಿಯಂತೂ ಅಲ್ಲ ಎಂಬುದು ಸ್ಪಷ್ಟ.

ಸಾಗರದ ತಾಲೂಕಿನಿಂದ ಸಿಗಂದೂರಿಗೆ ಹೋಗುವ ಮಾರ್ಗದಲ್ಲಿ ಹುಲಿದೇವರ ಬನ ಎಂಬ ಪ್ರದೇಶದ ಸಮೀಪವೇ ಬೇಸೂರು ಗ್ರಾಮವಿದೆ. ಈ ಪ್ರದೇಶವೆಲ್ಲ ಹೆಚ್ಚುಕಮ್ಮಿ ಅರಣ್ಯ. ಅಲ್ಲೇ ಅರಣ್ಯಗಳ ನಡುವೆ ಸಣ್ಣ ಸಣ್ಣ ಊರುಗಳಿವೆ. ಇದು ಲಿಂಗನಮಕ್ಕಿ ಅಣೆಕಟ್ಟಿನ ಹಿನ್ನೀರ ಪ್ರದೇಶಗಳೂ ಹೌದು. ಅಣುವಿದ್ಯುತ್ ಸ್ಥಾವರದಲ್ಲಿ ಬಿಸಿ ನಿರ್ವಹಿಸಲು ಅಪಾರ ಪ್ರಮಾಣದ ನೀರಿನ ಅಗತ್ಯವೂ ಇರುತ್ತದೆ.

ಇದೇ ಲಿಂಗನಮಕ್ಕಿ ಅಣೆಕಟ್ಟಿನ ನೀರನ್ನು ಮರುಬಳಕೆ ಮಾಡುವ ನಿಟ್ಟಿನಲ್ಲಿ ತಲಕಳಲೆ ಅಣೆಕಟ್ಟು ಮತ್ತು ಗೇರುಸೊಪ್ಪ ಅಣೆಕಟ್ಟಿನ ನಡುವೆ ಪಂಪ್ಡ್ ಸ್ಟೋರೇಜ್ ವಿದ್ಯುತ್ ಉತ್ಪಾದನೆ ಯೋಜನೆ ಕೂಡ ಪ್ರಸ್ತಾವನೆಯಲ್ಲಿದೆ. ಗೇರುಸೊಪ್ಪ ಡ್ಯಾಂನಿಂದ 0.35 ಟಿಎಂಸಿ ನೀರನ್ನು ಮೇಲ್ಭಾಗದಲ್ಲಿರುವ ತಲಕಳಲೆ ಅಣೆಕಟ್ಟಿಗೆ ಮರುಪೂರಣ ಮಾಡಿ, ಆ ನೀರನ್ನು ಮತ್ತೆ ಗೇರುಸೊಪ್ಪ ಅಣೆಕಟ್ಟಿಗೆ ಹರಿಸುವ ಮಾರ್ಗದಲ್ಲಿ 2000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಜಾರಿಯಾಗುವ ಹಂತದಲ್ಲಿದೆ.

ಈ ಯೋಜನೆಗಾಗಿ ಒಟ್ಟು 54.155 ಹೆಕ್ಟೇರ ಅರಣ್ಯ ನಾಶವಾಗುತ್ತದೆ. ಇದಕ್ಕಾಗಿ ಸಮೀಕ್ಷೆ, ಯೋಜನೆಯ ವಿಸ್ತೃತ ವರದಿ ಎಲ್ಲವೂ ಸಿದ್ಧವಾಗಿದೆ.

ಈ ಯೋಜನೆಗಾಗಿ ಯಾವುದೇ ಹೊಸ ಅಣೆಕಟ್ಟು ನಿರ್ಮಾಣ ಮಾಡಲಾಗುತ್ತಿಲ್ಲ, ಈಗಾಗಲೇ ಅಸ್ತಿತ್ವದಲ್ಲಿರುವ ಅಣೆಕಟ್ಟುಗಳನ್ನು ಬಳಸಿಕೊಂಡೇ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ತುಂಬಾ ಹೆಚ್ಚುವರಿ ನೀರಿನ ಅಗತ್ಯವೂ ಇಲ್ಲ. ಸಾಕಷ್ಟು ಜನ ಶರಾವತಿ ನೀರಿನ ಹರಿವೇ ನಿಂತು ಹೋಗುತ್ತದೆ, ನಮ್ಮ ಶರಾವತಿಯನ್ನು ಕಾಪಾಡೋಣ ಎಂದೆಲ್ಲ



ಭಾವನಾತ್ಮಕವಾಗಿ ಮಾತನಾಡಿದ್ದನ್ನು ಕೂಡ ನಾವು ನೋಡಿದ್ದೇವೆ. ಆದರೆ ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಗೆ ಕೇವಲ 0.35 ಟಿಎಂಸಿ ನೀರನ್ನು ಮಾತ್ರ ಅದೂ ಒಮ್ಮೆಗೆ ಮಾತ್ರ ಮೇಲೆತ್ತಲಾಗುತ್ತದೆ. ನಂತರ ಅದೇ ನೀರು ತಲಕಳಲೆ ಅಣೆಕಟ್ಟಿನಿಂದ ಗೇರುಸೊಪ್ಪ ಅಣೆಕಟ್ಟಿಗೆ ಬರುತ್ತದೆ. ಮತ್ತೆ ಅದೇ ನೀರನ್ನು ತಲಕಳಲೆ ಅಣೆಕಟ್ಟಿಗೆ ಮೇಲೆತ್ತಲಾಗುತ್ತದೆ.

ಪಂಪ್ಡ್ ಸ್ಟೋರೇಜ್ ಯೋಜನೆಗೆ ಯಾಕಿಷ್ಟು ಕಡಿಮೆ ಪ್ರಮಾಣದ ಅರಣ್ಯ ನಾಶವಾಗುತ್ತದೆಯೆಂದರೆ ಈ ಯೋಜನೆ ಸಂಪೂರ್ಣ ಭೂಗತವಾಗಿರಲಿದೆ. ಈ ಯೋಜನೆಗೆ ಭೂಮಿಯ ಒಳಗೇ ಪೈಪ್‌ಗಳನ್ನು ಅಳವಡಿಸಲಾಗುತ್ತದೆ. ವಿದ್ಯುತ್ ಉತ್ಪಾದನೆಯಾಗುವುದು ಕೂಡ ಭೂಮಿಯ ಒಳಗೇ. ಸಂಪೂರ್ಣ ಯೋಜನೆಗೆ ಹಾಗೂ ವಿದ್ಯುತ್ ಉತ್ಪಾದನೆ ಸ್ಥಳಕ್ಕೆ ಸಿಬ್ಬಂದಿ ತೆರಳಲು ಸೇರಿದಂತೆ ಒಟ್ಟು ನಾಲ್ಕು ಕಡೆ ಸುರಂಗಗಳ ಆರಂಭಕ್ಕೆ ಮಾತ್ರ ಭೂಮಿಯ ಮೇಲ್ಭಾಗದ ಜಾಗ ಬಳಕೆಯಾಗುತ್ತದೆ. ಇಷ್ಟೆಲ್ಲ ದೊಡ್ಡಮಟ್ಟದ ಕೆಲಸ ನಡೆಯುವಾಗ ಪರಿಸರ ಹಾನಿಯಾಗುವುದೇ ಇಲ್ಲ ಎಂದು ಹೇಳಲಾಗುವುದಿಲ್ಲ, ಅಷ್ಟು ಪ್ರಮಾಣದ ಸುರಂಗಗಳನ್ನು ತೋಡಿದಾಗ, ಅಷ್ಟು ಪ್ರಮಾಣದ ಮಣ್ಣನ್ನು ಸಾಗಿಸಬೇಕು, ಯಂತ್ರೋಪಕರಣಗಳನ್ನು ತರಬೇಕು. ಇದನ್ನೆಲ್ಲ ಮಾಡುವಾಗ ಪರಿಸರಕ್ಕೆ ಖಂಡಿತ ಧಕ್ಕೆಯಾಗುತ್ತದೆ. ಆದರೆ ಕೆಲಸ ಮುಗಿದ ನಂತರ ಐದಾರು ವರ್ಷಗಳಲ್ಲಿ ಪರಿಸರ ಮತ್ತೆ ಮೊದಲಿನಂತೆ ಆಗಲು ಅವಕಾಶವಿದೆ. ಯಾಕೆಂದರೆ ಒಮ್ಮೆ ಸುರಂಗ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಅಲ್ಲಿ ಯಾವ ಚಟುವಟಿಕೆಯೂ ಇರುವುದಿಲ್ಲ, ಎಲ್ಲವೂ ಭೂಮಿಯ ಒಳಗೆ ನಡೆಯುತ್ತಿರುತ್ತದೆ.

ಹೀಗಿದ್ದರೂ ಈ ಯೋಜನೆಗೆ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ. ಪಶ್ಚಿಮ ಘಟ್ಟದಂತಹ ಸೂಕ್ಷ್ಮ ಪರಿಸರದ ಪ್ರದೇಶದಲ್ಲಿ ಈ ಯೋಜನೆ ಬೇಡ ಎಂಬ ವಾದವಿದೆ. ಈಗಾಗಲೇ ನಡೆದ ಎರಡು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳು ವಿಫಲವಾಗಿವೆ.

ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ 133 ಎಕರೆ ಅರಣ್ಯ ಪ್ರದೇಶ ಬೇಕಿದ್ದರೆ, ಅಣುವಿದ್ಯುತ್ ಸ್ಥಾವರ ಸ್ಥಾಪನೆಗೆ 1000 ಎಕರೆ ಪ್ರದೇಶ ಬೇಕು. 133 ಎಕರೆಗೇ ತಕರಾರು ತೆಗೆದವರು, 1000 ಎಕರೆ ಅರಣ್ಯ ಪ್ರದೇಶ ಸುಮ್ಮನೆ ಕೊಡಲು ಸಾಧ್ಯವೆ?

ಇನ್ನು ಅಣುವಿದ್ಯುತ್ ಸ್ಥಾವರ ಅಪಾಯಕಾರಿಯೇ ಎಂದು ಪ್ರಶ್ನಿಸಿದರೆ ಹೌದು ಮತ್ತು ಇಲ್ಲ ಎಂಬ ಎರಡೂ ಉತ್ತರ ನೀಡಬೇಕಾಗುತ್ತದೆ. ಯಾಕೆಂದರೆ ಉತ್ತರ ಕನ್ನಡ ಜಿಲ್ಲೆಯ ಕೈಗಾ ಸೇರಿದಂತೆ ದೇಶದಲ್ಲಿ ಒಟ್ಟು 9 ರಾಜ್ಯಗಳಲ್ಲಿ ಅಣುವಿದ್ಯುತ್ ಸ್ಥಾವರಗಳಿವೆ. ಒಟ್ಟು 25 ರಿಯಾಕ್ಟರ್‌ಗಳು ಕೆಲಸ ಮಾಡುತ್ತಿವೆ. ದೇಶದಲ್ಲಿ 8,880 ಮೆಗಾ ವ್ಯಾಟ್ ವಿದ್ಯುತ್ತನ್ನು ಅಣು ಸ್ಥಾವರಗಳಿಂದಲೇ ಉತ್ಪಾದನೆ ಮಾಡಲಾಗುತ್ತಿದೆ. ಕೈಗಾ ಸೇರಿದಂತೆ ಎಲ್ಲೂ ಅಣುವಿದ್ಯುತ್ ಸ್ಥಾವರಗಳಿಂದ ಅಪಾಯವಾದ, ಸಮಸ್ಯೆ ಸೃಷ್ಟಿಯಾದ ವರದಿಗಳಿಲ್ಲ, ಅಣುವಿದ್ಯುತ್ ಸ್ಥಾವರದ ಒಳಗೆ ಕೆಲಸ ಮಾಡುವ ಸಿಬ್ಬಂದಿಗೆ, ವಿಜ್ಞಾನಿಗಳಿಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ಉದಾಹರಣೆಗಳಿವೆ. ಆದರೆ ಅದರ ಸಮೀಪದ ಊರುಗಳಲ್ಲಿ ವಾಸವಾಗಿರುವವರಿಗೆ ತೊಂದರೆಯಾದ ಉದಾಹರಣೆಗಳು ಕಡಿಮೆ. ಈ ದೃಷ್ಟಿಯಿಂದ ನೋಡಿದರೆ ಇವುಗಳಿಂದ ಅಪಾಯವಿಲ್ಲ.

ಆದರೆ ಯಾವುದಾದರೂ ಕಾರಣಕ್ಕೆ ಅಣುವಿದ್ಯುತ್ ಸ್ಥಾವರಕ್ಕೆ ಹಾನಿಯಾದರೆ, ಆಗ ಮಾತ್ರ ಇದರ ಅಪಾಯ ಆಸುಪಾಸಿನ ಊರುಗಳನ್ನು ಮಾತ್ರವಲ್ಲ, ಅದರಿಂದ ದೂರವಿರುವ ಜನರ ಮೇಲೂ ದೀರ್ಘಕಾಲದ ಪರಿಣಾಮಗಳನ್ನು ಬೀರುತ್ತದೆ. ಜಪಾನ್‌ನಲ್ಲಿ ನಡೆದ ದುರಂತದ ನೈಜ ಘಟನೆಗಳನ್ನು ಆಧರಿಸಿದ ವೆಬ್ ಸಿರೀಸ್ ಒಂದಿದೆ. ಅದನ್ನು ನೋಡಿದರೆ ನಮ್ಮ ಊರಿನ ಹತ್ತಿರದಲ್ಲೆಲ್ಲೂ ಅಣುವಿದ್ಯುತ್ ಸ್ಥಾವರ ಸ್ಥಾಪಿಸಲು ಜನರು ಯಾವ ಕಾರಣಕ್ಕೂ ಅವಕಾಶ ನೀಡಲು ಸಾಧ್ಯವೇ ಇಲ್ಲ ಅನ್ನುವ ಹಾಗಿದೆ. ಅದರಲ್ಲೂ ಲಿಂಗನಮಕ್ಕಿಯಂತಹ ದೊಡ್ಡ ಅಣೆಕಟ್ಟಿನ ಹಿನ್ನೀರಿನಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆಯಾದರೆ, ದುರದೃಷ್ಟವಶಾತ್ ಅಣೆಕಟ್ಟಿನ ನೀರು ಅಣು ವಿಕಿರಣಕ್ಕೆ ಒಳಗಾದರೆ, ಅದರ ಪರಿಣಾಮಗಳನ್ನು ಬಹುಶಃ ನಾವ್ಯಾರೂ ಊಹಿಸಿಕೊಳ್ಳಲೂ ಸಾಧ್ಯವಿಲ್ಲವೇನೊ.

ಪಶ್ಚಿಮ ಘಟ್ಟದ ನಿವಾಸಿಗಳಾದ ನಮಗೆ ಪಂಪ್ಡ್ ಸ್ಟೋರೇಜ್‌ನ ನೀರೇ ಗಂಟಲಲ್ಲಿ ಇಳಿಯುತ್ತಿರಲಿಲ್ಲ, ಹೀಗಿರುವಾಗ ಈಗ ಅಣು ವಿದ್ಯುತ್ ಸ್ಥಾವರವೆಂಬ ಕಡುಬು ತುರುಕುವ ಯತ್ನ ನಡೆದಂತೆ ಭಾಸವಾಗುತ್ತಿದೆ. ನೀರಿಳಿಯದ ಗಂಟಲಲ್ಲಿ ಕಡುಬು ಇಳಿದೀತೆ?

# ಬಿಜೆಪಿ ಮತ್ತು ಇತರ ಪಕ್ಷಗಳ ನಡುವಿನ ವ್ಯತ್ಯಾಸ!

▸ ಅರುಣ್ ಆನಂದ್

ಆಮ್ ಆದ್ಮಿ ಪಕ್ಷದ ಏಳು ಮಂದಿ ರಾಜ್ಯಸಭಾ ಸದಸ್ಯರು ಇತ್ತೀಚೆಗೆ ತಮ್ಮ ಪಕ್ಷ ತೊರೆದು ಬಿಜೆಪಿ ಸೇರಿದರು. ಇದೇನೂ ಮೊದಲಲ್ಲ, 2014ರಿಂದ ಆರಂಭಿಸಿ ವಿವಿಧ ಪಕ್ಷಗಳ ಹಲವಾರು ಮುಖಂಡರು ತಮ್ಮ ಪಕ್ಷ ತೊರೆದು ಬಿಜೆಪಿಯನ್ನು ಸೇರಿದ್ದಿದೆ.

ಇದು ಮಹತ್ವದ ಪ್ರಶ್ನೆಯೊಂದನ್ನು ಎತ್ತುತ್ತದೆ ಹಾಗೂ ಅದು ವಿರೋಧ ಪಕ್ಷಗಳ ಪಾಲಿಗೂ ಅತ್ಯಂತ ಮುಖ್ಯ ಪಾಠವನ್ನು ತಿಳಿಹೇಳುತ್ತದೆ. ಈ ವಿರೋಧ ಪಕ್ಷಗಳು ತಮ್ಮ ಮುಖಂಡರನ್ನು ಹಿಡಿದಿಟ್ಟುಕೊಳ್ಳಲೇ ವಿಫಲವಾಗುತ್ತಿರುವುದೇಕೆ? ಇದೇವೇಳೆ, ಬಿಜೆಪಿಯು ವಿಭಜನೆಗೊಳ್ಳದೇ ಉಳಿದಿರುವುದೇ ಹೇಗೆ? ಸ್ವಾತಂತ್ರ್ಯದ ಬಳಿಕ ಹಲವಾರು ದಶಕಗಳ ಕಾಲ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲೇ ಇದ್ದರೂ ಮುಖಂಡರು ದೊಡ್ಡ ಪ್ರಮಾಣದಲ್ಲಿ ಪಕ್ಷದಿಂದ ಹೊರಹೋದ ನಿದರ್ಶನಗಳಿಲ್ಲ, ಕಾಂಗ್ರೆಸ್ ಸರಕಾರಗಳು ಮತ್ತು ಅದರ ನೇತೃತ್ವದ ಸಮ್ಮಿಶ್ರ ಸರಕಾರಗಳು ಬಿಜೆಪಿ ಮತ್ತು ಅದಕ್ಕಿಂತ ಮುನ್ನ ಭಾರತೀಯ ಜನಸಂಘದ ಮುಖಂಡರನ್ನು ಸೆಳೆಯಲು ಪ್ರಯತ್ನ ನಡೆಸಿಲ್ಲವೆಂದಲ್ಲ, ಆದರೆ ಆ ಪ್ರಯತ್ನ ಸಫಲವಾಗಿರಲೇ ಇಲ್ಲ.

1975ರಿಂದ 1977ರ ಅವಧಿಯಲ್ಲಂತೂ ಕಾಂಗ್ರೆಸ್ ಸರಕಾರವು ತುರ್ತುಪರಿಸ್ಥಿತಿಯನ್ನು ಹೇರಿ ಪ್ರಮುಖ ಬಿಜೆಪಿ ನಾಯಕರನ್ನು ಹಾಗೂ ಪಕ್ಷದ ಸಾವಿರಾರು ಕಾರ್ಯಕರ್ತರನ್ನು ಜೈಲಿಗಟ್ಟಿತ್ತು. ಆದರೂ ಬಿಜೆಪಿ ನಾಯಕರು ಕಾಂಗ್ರೆಸನ್ನು ಒಲಿಸಲು ಮುಂದಾಗಲಿಲ್ಲ.

**ಸೈದ್ಧಾಂತಿಕ ಬಂಧ**

ಬೇರೆ ಪಕ್ಷಗಳಿಗೆ ಮುಖಂಡರ ವಲಸೆ ತಡೆಯುವಲ್ಲಿ ಬಿಜೆಪಿಗೆ ವರದಾನವಾಗಿರುವುದು ಪಕ್ಷದ ಸಿದ್ಧಾಂತ. ಅದುವೇ ಬಿಜೆಪಿ ಮತ್ತು ಇತರ ಪಕ್ಷಗಳ ನಡುವಿರುವ ವ್ಯತ್ಯಾಸ ಕೂಡಾ. ಬಿಜೆಪಿಯಂತೆ ಇತರ ಮುಖ್ಯವಾಹಿನಿಯ ಪಕ್ಷಗಳು ಬಲವಾದ ಸೈದ್ಧಾಂತಿಕ ತಳಹದಿ ಹೊಂದಿಲ್ಲ, ಕಮ್ಯುನಿಸ್ಟ್ ಪಕ್ಷ ಬಲಿಷ್ಠ ಸೈದ್ಧಾಂತಿಕ ತಳಹದಿ ಹೊಂದಿದೆಯಾದರೂ 1960ರಿಂದ 1970ರ ಅವಧಿಯಲ್ಲಿ ಅದು ಅಧಿಕಾರವನ್ನು ಸಾಂಸ್ಥಿಕವಾಗಿ ದುರ್ಬಳಕೆ ಮಾಡಿಕೊಂಡುದು ಅದರ ಮೇಲಿನ ವಿಶ್ವಾಸ ಜನರಿಗೆ ಕುಸಿಯಲು ಕಾರಣವಾಯಿತು. ಬಳಿಕ ಕಮ್ಯುನಿಸ್ಟ್ ಸಿದ್ಧಾಂತ ಕೂಡಾ ಪೇಲವವಾಗತೊಡಗಿತು. ಅದರಿಂದಾಗಿ ಅದು ಕಾಂಗ್ರೆಸ್‌ನ 'ಬಿ' ತಂಡದಂತೆ ವರ್ತಿಸಲಾರಂಭಿಸಿತು. ಈಗಂತೂ ಕಮ್ಯುನಿಸ್ಟ್ ಪಕ್ಷವು ಅಪ್ರಸ್ತುತವಾಗಿಬಿಟ್ಟಿದೆ.

ಜನಸಂಘ ಮತ್ತು ಬಿಜೆಪಿಗಳಿಗೆ ಆರಂಭ ಕಾಲ ಅತ್ಯಂತ ಕಠಿಣವೇ ಆಗಿತ್ತು. ಕಾಂಗ್ರೆಸ್, ಎಡಪಕ್ಷಗಳು ಮತ್ತು ಕೆಲವು ಪ್ರಾದೇಶಿಕ ಪಕ್ಷಗಳು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು ಹಾಗೂ ಹಲವು ರಾಜ್ಯಗಳಲ್ಲಿ ಅಧಿಕಾರವನ್ನೂ ಹಂಚಿಕೊಂಡಿದ್ದವು. 1980ರ ದಶಕದಲ್ಲಂತೂ ಬಿಜೆಪಿಗೆ ಅತ್ಯಂತ ಸವಾಲಿನ ಸ್ಥಿತಿ ಎದುರಾಗಿತ್ತು. ಆದರೆ ಪಕ್ಷದ ಸಿದ್ಧಾಂತವೇ ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಒಂದಾಗಿ ಬೆಸೆದು ಬಿಗಿಯಾಗಿ ಹಿಡಿದಿಟ್ಟಿತು. ಚುನಾವಣೆಯಲ್ಲಿ ಗೆಲ್ಲುವುದು ಅಥವಾ ಸೋಲುವುದು ಪಕ್ಷದ ಪಾಲಿಗೆ ಪ್ರಮುಖವಾಗಲಿಲ್ಲ, ಪಕ್ಷದ ಆರಂಭಿಕ ದಶಕಗಳಲ್ಲಿ ಕಾರ್ಯಕರ್ತರಾಗಿ ದುಡಿದವರು ಆರೆಸ್ಸೆಸ್‌ನಲ್ಲಿ ಸ್ವಯಂಸೇವಕರಾಗಿದ್ದವರೆ. ಸಂಘದ ಧ್ಯೇಯ ಮತ್ತು ಸಿದ್ಧಾಂತಗಳಲ್ಲಿ ಅಚಲ ನಿಷ್ಠೆಯಿದ್ದವರೇ ಬಿಜೆಪಿಯ ಏಳಿಗೆಗಾಗಿ ಶ್ರಮಿಸಿದರು.

ಬಿಜೆಪಿ ಮತ್ತು ಇತರ ಎಡಪಂಥಿಯೇತರ ಪಕ್ಷಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ ಬಿಜೆಪಿಯು 'ಏಕಾತ್ಮ ಮಾನವತಾವಾದ' ಎಂಬ



ಬಲವಾದ ಮತ್ತು ವ್ಯವಸ್ಥಿತವಾದ ಸೈದ್ಧಾಂತಿಕ ನೆಲೆಗಟ್ಟು ಹೊಂದಿರುವುದು. ಈ ಸಿದ್ಧಾಂತವನ್ನು ರೂಪಿಸಿದವರು ಪಕ್ಷದ ಮಾಜಿ ಅಧ್ಯಕ್ಷ ಹಾಗೂ ಸಿದ್ಧಾಂತವಾದಿ ದೀನ್‌ದಯಾಳ್ ಉಪಾಧ್ಯಾಯ ಅವರು. ಇತರ ಪಕ್ಷಗಳು ಅವಲಂಬಿಸಿರುವುದು ಕಾಲಕಾಲಕ್ಕೆ ಬದಲಾಗುವ 'ಚುನಾವಣಾ ಪ್ರಣಾಳಿಕೆ'ಯನ್ನು. ಈ ಪ್ರಣಾಳಿಕೆಗಳಾದರೋ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ರೂಪಿಸಿದ ವಿಷಯಗಳು. ಆದರೆ ಬಿಜೆಪಿಯ ಚುನಾವಣಾ ಪ್ರಣಾಳಿಕೆಗಳು ಅದರ ವಿಸ್ತೃತ ಸೈದ್ಧಾಂತಿಕ ನೆಲೆಯನ್ನು ಆಧರಿಸಿದಂತಹವು ಹಾಗೂ ಸೈದ್ಧಾಂತಿಕ ಚೌಕಟ್ಟಿನೊಳಗೇ ಇರುವಂತಹವು. ಹಾಗಾಗಿ ಬಿಜೆಪಿಯ ಸಿದ್ಧಾಂತ ಅಥವಾ ಪ್ರಣಾಳಿಕೆಗಳಲ್ಲಿ ನಿರಂತರತೆ ಇದೆ. ಪಕ್ಷವನ್ನು ಸೇರುವ ಯಾವನೇ ಕಾರ್ಯಕರ್ತನಿಗೆ ಮೊದಲ ದಿನದಿಂದಲೇ ಯಾವುದೇ ಗೊಂದಲ ಕಾಡುವುದಿಲ್ಲ.

ಇತರ ಪಕ್ಷಗಳಲ್ಲಿ ಮುಖಂಡರಿಗೆ ಪಕ್ಷದ ಹಿತಾಸಕ್ತಿಗಿಂತಲೂ ತಮ್ಮ ವೈಯಕ್ತಿಕ ಹಿತಾಸಕ್ತಿ ಮುಖ್ಯವಾಗಿರುತ್ತದೆ. ಹಾಗಾಗಿ ಮುಖಂಡರಿಗೆ ಆಗಾಗ ಅಸಮಾಧಾನ, ಅತೃಪ್ತಿ ಕಾಡುವುದು ಸಹಜ. ಪಕ್ಷವು ತಮಗೆ ಅಧಿಕಾರ ಹಂಚದಿದ್ದಾಗ ಅವರು ಅಸಮಾಧಾನಗೊಂಡು ಪಕ್ಷ ತ್ಯಜಿಸುತ್ತಾರೆ. ಆದರೆ, ಬಿಜೆಪಿಯಲ್ಲಿ ವೈಯಕ್ತಿಕ ಹಿತಾಸಕ್ತಿ ಗಣನೆಗೆ ಬರುವುದಿಲ್ಲ, ಸಿದ್ಧಾಂತವೇ ಮುಖ್ಯವಾಗುತ್ತದೆ. ಸಿದ್ಧಾಂತವನ್ನು ಅಪ್ಪಿಕೊಂಡವರು ವೈಯಕ್ತಿಕ ಹಿತಾಸಕ್ತಿ ಕಡೆಗಣಿಸಿ ಪಕ್ಷದ ಹಿತಕ್ಕಾಗಿ ದುಡಿಯುತ್ತಾರೆ.

ಬಿಜೆಪಿಯಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತಲೂ ಪಕ್ಷದ ಸಿದ್ಧಾಂತವೇ ಮುಖ್ಯವಾಗುವುದು ಹೇಗೆ ಎಂಬುದು ಹಲವಾರು ನಿದರ್ಶನಗಳಿಂದ ಬಾರಿ ಬಾರಿ ಸಾಬೀತಾಗಿದೆ. ಭಾರತೀಯ ಜನಸಂಘದ ಅಧ್ಯಕ್ಷ ಮತ್ತು ಹಿರಿಯ ಮುಖಂಡ ಪ್ರೊ. ಬಲರಾಜ್ ಮಧೋಕ್ ಅವರು ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿದಾಗ ಅವರು ಪಕ್ಷವನ್ನು ಬಿಡಬೇಕಾಯಿತು. ಹಿರಿಯ ಬಿಜೆಪಿ ಮುಖಂಡ ಜಸ್ವಂತ್ ಸಿಂಗ್ ಅವರು ಮೊಹಮ್ಮದ್ ಅಲಿ ಜಿನ್ನಾನನ್ನು ಹೊಗಳಿ, ವಲ್ಲಭಭಾಯಿ ಪಟೇಲ್ ಅವರನ್ನು ಟೀಕಿಸುವ ರೀತಿಯಲ್ಲಿ ಪುಸ್ತಕ ಬರೆದಾಗ ಅವರನ್ನು 2009ರಲ್ಲಿ ಪಕ್ಷದಿಂದ ಉಚ್ಚಾಟಿಸಲಾಯಿತು. 2005ರಲ್ಲಿ ಎಲ್.ಕೆ. ಅಡ್ವಾಣಿಯವರು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾಗ ಜಿನ್ನಾನನ್ನು 'ಜಾತ್ಯತೀತವಾದಿ' ಎಂದು ಹೊಗಳಿದ ಬಳಿಕ, ಪಕ್ಷದ ಅಧ್ಯಕ್ಷತೆ ತ್ಯಜಿಸಬೇಕಾಯಿತು.

**ಕಾರ್ಯಕರ್ತರು V/S ಸದಸ್ಯರು**

ಬಿಜೆಪಿ ಧ್ಯೇಯನಿಷ್ಠ ಕಾರ್ಯಕರ್ತರ ಪಕ್ಷ ಎಂದು ಹೇಳುವುದನ್ನು ನಾವು ಆಗಾಗ ಕೇಳುತ್ತೇವೆ. ಅದು ಸತ್ಯ ಕೂಡಾ. ಉಳಿದೆಲ್ಲ ಪಕ್ಷಗಳು 'ಸದಸ್ಯರನ್ನು' ಹೊಂದಿರುವ ಪಕ್ಷಗಳು. ಅದೇಕೆ ಹಾಗೆ? ಕಾರಣ ಸ್ಪಷ್ಟ, ಬಿಜೆಪಿಯು ಸಿದ್ಧಾಂತವನ್ನು ಆಧರಿಸಿದೆ. ಇತರ ಪಕ್ಷಗಳಿಗೆ ನಿಶ್ಚಿತ ಸಿದ್ಧಾಂತವಿಲ್ಲ.

ಬಿಜೆಪಿಯಲ್ಲಿ ಪಕ್ಷದ ಸದಸ್ಯರನ್ನು ವಿವಿಧ ತರಬೇತಿ ಕಾರ್ಯಕ್ರಮಗಳ

ಬಿಜೆಪಿ ಪಾಲಿಗೆ ಸಿದ್ಧಾಂತವೇ ಕಾರ್ಯಕರ್ತರನ್ನು ಒಂದಾಗಿಡುವ 'ಬಂಧ'ವಾಗಿದ್ದರೆ, ಇತರ ಪಕ್ಷಗಳಿಗೆ ಅಧಿಕಾರವೇ ಇಂತಹ ಬಂಧ.

ಮೂಲಕ ಕಾರ್ಯಕರ್ತರನ್ನಾಗಿ ರೂಪಿಸಲಾಗುತ್ತದೆ. ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಿದ್ಧಾಂತಗಳ ಆಧಾರದಲ್ಲಿ ನಡೆಸಬೇಕಾಗುತ್ತದೆ. ಸದಸ್ಯರು ಕಾರ್ಯಕರ್ತರಾಗಿ ರೂಪುಗೊಂಡ ಬಳಿಕ ಅವರು ನಿರಂತರವಾಗಿ ಪಕ್ಷದ ಏಳಿಗೆಗಾಗಿ ಶ್ರಮಿಸುವ ಮನೋಭಾವ, ಬದ್ಧತೆ ಬೆಳೆಸಿಕೊಳ್ಳುತ್ತಾರೆ. ಪಕ್ಷವು ಅಧಿಕಾರದಲ್ಲಿದೆಯೋ ಇಲ್ಲವೋ ಎಂಬುದು ಅವರಿಗೆ ಗೌಣ. ಅಧಿಕಾರದಲ್ಲಿ ಇಲ್ಲದಾಗಲೂ ಅವರು ಪಕ್ಷಕ್ಕಾಗಿ ದುಡಿಯುತ್ತಾರೆ.

ಬಿಜೆಪಿಯೇತರ ಪಕ್ಷಗಳಲ್ಲಿ ಸದಸ್ಯರಾಗಿರುವವರು ಅಧಿಕಾರಕ್ಕಾಗಿ ಹಪಹಪಿಸುವ ಮಂದಿಗಳು. ಅವರನ್ನು ಬಂಧಿಸುವ ನಿಶ್ಚಿತ ಸಿದ್ಧಾಂತವಿಲ್ಲ, ಸಿದ್ಧಾಂತ ಇಲ್ಲದಿರುವುದರಿಂದ ತರಬೇತಿ ಕಾರ್ಯಕ್ರಮಗಳಿರುವುದಿಲ್ಲ, ಹಾಗಾಗಿ ಧ್ಯೇಯನಿಷ್ಠ ಕಾರ್ಯಕರ್ತರೂ ಇರುವುದಿಲ್ಲ, ಇಂತಹ ಪಕ್ಷವು ಅಧಿಕಾರ ಕಳೆಕೊಂಡಾಗ ಅದರ ಮುಖಂಡರು ಮತ್ತು ಸದಸ್ಯರು ಪಕ್ಷ ಬಿಡುವ ಸಾಧ್ಯತೆಗಳು ಹೆಚ್ಚಿರುತ್ತವೆ. ಅವರನ್ನು ಪಕ್ಷಕ್ಕೆ ಕಟ್ಟಿಹಾಕುವಂತಹ ಬಂಧವು ಯಾವುದೂ ಇಲ್ಲದಿರುವುದೇ ಅದಕ್ಕೆ ಕಾರಣ.

ಬಿಜೆಪಿ ಪಾಲಿಗೆ ಸಿದ್ಧಾಂತವೇ ಕಾರ್ಯಕರ್ತರನ್ನು ಒಂದಾಗಿಡುವ 'ಬಂಧ'ವಾಗಿದ್ದರೆ, ಇತರ ಪಕ್ಷಗಳಿಗೆ ಅಧಿಕಾರವೇ ಇಂತಹ ಬಂಧ.

**ಬಿಜೆಪಿಗಿರುವ ಸವಾಲುಗಳು**

ಇಂತಿರುವಾಗಿ ಮತ್ತೊಂದು ಆಯಾಮದತ್ತಲೂ ಚಿಂತಿಸಬೇಕಾಗಿರುವುದು ಅಗತ್ಯವಾಗಿದೆ. ಇತರ ಪಕ್ಷಗಳಿಂದ ಬರುವ ಕಾರ್ಯಕರ್ತರು ಮತ್ತು ಮುಖಂಡರನ್ನು ಬಿಜೆಪಿ ತನ್ನ ಸೈದ್ಧಾಂತಿಕ ಚೌಕಟ್ಟಿನೊಳಗೆ ಸೇರಿಸಿಕೊಳ್ಳುವುದು ಹೇಗೆ? ಅದರ ಜತೆಗೇ ಪಕ್ಷದ ಉನ್ನತಿಗಾಗಿ ಹಲವಾರು ವರ್ಷಗಳಿಂದ ದುಡಿದವರು ಮತ್ತು ಹೊಸದಾಗಿ ಪಕ್ಷಕ್ಕೆ ಬಂದವರ ಮಧ್ಯೆ ತಿಕ್ಕಾಟ ಉಂಟಾಗುವ ಸಾಧ್ಯತೆಗಳೂ ಇವೆ. ಕೆಲವೊಮ್ಮೆ ಹೊಸದಾಗಿ ಬಂದವರು ಹಳಬರನ್ನು ಹಿಂದೆ ಸರಿಸಿ ತಾವೇ ಮುಂಚೂಣಿಗೆ ಬರುವುದೂ ಇದೆ. ಬಿಜೆಪಿ ಇದನ್ನು ಸಮತೋಲನದಿಂದ ನಿಭಾಯಿಸುವಲ್ಲಿ ಈವರೆಗೆ ಸಫಲತೆ ಸಾಧಿಸಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾರಂತವರು ಇದಕ್ಕೆ ಉತ್ತಮ ಉದಾಹರಣೆ. ಅವರು ಬಿಜೆಪಿಯ ಸಿದ್ಧಾಂತವನ್ನು ತಮ್ಮೊಳಗೆ ಅಳವಡಿಸಿಕೊಂಡಿರುವುದನ್ನು ಅವರ ಮಾತಿನಲ್ಲಷ್ಟೇ ಅಲ್ಲದೆ, ಅವರ ಕೃತಿಯಲ್ಲೂ ಕಾಣಬಹುದಾಗಿದೆ.

ಇತರ ಪಕ್ಷಗಳಿಂದ ಬಿಜೆಪಿಗೆ ಬಂದ ಹಲವಾರು ಮುಖಂಡರು ಪಕ್ಷದೊಂದಿಗೆ ಹೊಂದಿಕೊಂಡಿದ್ದಾರೆ. ತಾವು ಪಕ್ಷಕ್ಕೆ ಸೇರಿದಾಗಿನಿಂದಲೂ ಅನುಸರಿಸಬೇಕಾದ ಸೈದ್ಧಾಂತಿಕ ಚೌಕಟ್ಟಿನ ಅರಿವು ಅವರಿಗಿದ್ದುದರಿಂದ ಅದು ಅವರಿಗೆ ಕಷ್ಟವಾಗಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಬಿಜೆಪಿ ಸಾಮಾನ್ಯ ಕಾರ್ಯಕರ್ತರಿಗೆ ತಮ್ಮದು ತಮ್ಮದು ಕಾಂಗ್ರೆಸಿನಂತೆ ಅಥವಾ ಇನ್ನಿತರ ಕೆಲವು ಪಕ್ಷಗಳಂತೆ ವಂಶವಾದಿ ಪಕ್ಷವಲ್ಲ ಎಂಬ ವಿಶ್ವಾಸವಿದೆ.

ಸಿದ್ಧಾಂತವೆಂಬುದು ಬಿಜೆಪಿಯ ಮಾರ್ಗದರ್ಶಿ ಅಂಶವಾಗಿದೆ. ಹಾಗಾಗಿ ಬಿಜೆಪಿಯು ಕಾರ್ಯಕರ್ತರಿಗಾಗಿ ಕಾರ್ಯಕರ್ತರಿಂದ ನಡೆಸಲ್ಪಡುವ ಕಾರ್ಯಕರ್ತರ ಪಕ್ಷವಾಗಿದೆ. ಈ ಕಾರ್ಯಕರ್ತರೆಲ್ಲ ಸಮಾಜದ ಸಾಮಾನ್ಯ ವರ್ಗದಲ್ಲೇ ಕಂಡುಬರುವವರಾಗಿದ್ದಾರೆ. ಹಾಗಾಗಿಯೇ ಬಿಜೆಪಿಯೆಡೆಗೆ ಬೇರೆ ಪಕ್ಷಗಳಿಂದ ವಲಸೆ ಬರುತ್ತಾರೆಯೇ ಹೊರತು ಬಿಜೆಪಿಯಿಂದ ಈ ರೀತಿಯ ದೊಡ್ಡ ವಲಸೆ ನಡೆಯುವುದಿಲ್ಲ.

## ಸಹೃದಯರ ಲಕ್ಷಣಗಳು





**ಸ್ವಚ್ಛತಾ ತ್ಯಾಗಿತಾ ಶೌರ್ಯಂ ಸಮಾನಸುಖದುಃಖತಾ ।**
**ಅನುರಾಗಶ್ಚ ದಾಕ್ಷಿಣ್ಯಂ ಸತ್ಯಂ ಶೌಚಂ ಸುಹೃದ್ಗುಣಾಃ ॥ -ಕರ್ನಾಟಕ ಪಂಚತಂತ್ರ**

ಸ್ವಚ್ಛತೆ, ತ್ಯಾಗ, ಶೌರ್ಯ, ಸಮಾನವಾದ ಸುಖದುಃಖ, ಸ್ನೇಹ, ದಾಕ್ಷಿಣ್ಯ, ಸತ್ಯ, ಶೌಚ ಇವು ಮಿತ್ರಗುಣಗಳು -ಎಂಬುದು ಶ್ಲೋಕಾರ್ಥ.

ಉತ್ತಮ ಗೆಳೆಯರ ಲಕ್ಷಣಗಳ ಕುರಿತು ಸಾಕಷ್ಟು ಜನರು ಹೇಳಿದ್ದಾರೆ. ನೂರಾರು ಸುಭಾಷಿತಗಳು ಸನ್ಮಿತ್ರರ ಕುರಿತಾಗಿ ಹೇಳಿವೆ. ಬದುಕಿನಲ್ಲಿ ಭರವಸೆ ತುಂಬುವಲ್ಲಿ ಮಿತ್ರರ ಪಾತ್ರ ಬಹುದೊಡ್ಡದು. ಅಷ್ಟೇ ಅಲ್ಲ, ಅನಿವಾರ್ಯ ಕೂಡ. ಇದರ ಮಹತ್ವವನ್ನು ಮಿತ್ರರಿಲ್ಲದವರ ಪಾಡನ್ನು ನೋಡಿ ತಿಳಿಯಬಹುದು. ಜೀವನದಲ್ಲಿ ನೆಮ್ಮದಿಯ ಕ್ಷಣಗಳನ್ನು ಅನುಭವಿಸುವುದಕ್ಕೆ ಆತ್ಮೀಯ ಸ್ನೇಹಿತರು ಇರಬೇಕು. ಎಲ್ಲ ಸ್ನೇಹಿತರೂ ಆತ್ಮೀಯರಲ್ಲ, ಬೇರೆ ಬೇರೆ ಕಾರಣಗಳಿಂದಾಗಿ ಸ್ನೇಹವಾಗುತ್ತದೆ. ತಮ್ಮ ತಮ್ಮ ಲಾಭಕ್ಕಾಗಿ ಸ್ನೇಹ ಮಾಡುವವರಿದ್ದಾರೆ. ಅವರು ತಮಗೆ ಸಿಗಬೇಕಾದುದು ಸಿಕ್ಕಮೇಲೆ ಮಾಯವಾಗಿಬಿಡುತ್ತಾರೆ. ಇಂಥವರನ್ನು ನಂಬಿದರೆ ನಷ್ಟವೇ ಗತಿ. ಗೆಳೆತನ ಬೆಳೆಸುವಾಗ ಗುಣ, ನಡತೆ, ಸ್ವಭಾವಗಳನ್ನು ಪರೀಕ್ಷಿಸಿ ಮುಂದುವರಿಯಬೇಕು.

ಗೆಳೆತನವನ್ನು ಮುಂದುವರಿಸಬೇಕೆ, ಬೇಡವೇ, ಮುಂದುವರಿಸುವುದಾದರೆ ಯಾವೆಲ್ಲ ಗುಣಗಳನ್ನು ಗುರುತಿಸಿಕೊಳ್ಳಬೇಕು ಎಂಬುದನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ಅವುಗಳನ್ನು ಸ್ವಚ್ಛತೆ, ತ್ಯಾಗ, ಶೌರ್ಯ, ಸಮಾನ ಸುಖ-ದುಃಖಗಳು, ಸ್ನೇಹ, ದಾಕ್ಷಿಣ್ಯ, ಸತ್ಯ ಮತ್ತು ಶುದ್ಧತೆ ಎಂದು ಉಲ್ಲೇಖಿಸಲಾಗಿದೆ.

ಉತ್ತಮ ಸ್ನೇಹಿತನೆನಿಸಬೇಕಾದರೆ ಅವನ ಮನಸ್ಸು, ವಾಕ್, ಶರೀರ ಶುದ್ಧವಾಗಿರಬೇಕು. ವಿಶ್ವಾಸಾರ್ಹತೆಗೆ ಇವೇ ಕಾರಣ. ಇವುಗಳನ್ನು ಗುರುತಿಸಲು ಸಾಧ್ಯವಾದರೆ ಮೈತ್ರಿಗೆ ಮನಸ್ಸು ಮಾಡಬಹುದು. ತ್ಯಾಗ ಮನೋಭಾವ ಸನ್ಮಿತ್ರರ ಮತ್ತೊಂದು ಲಕ್ಷಣ. ಮಿತ್ರನ ನೋವು ನಲಿವುಗಳಲ್ಲಿ ತ್ಯಾಗಭಾವನೆಯನ್ನು ತೋರಿಸುವವನನ್ನು ಸನ್ಮಿತ್ರನೆಂದು ಒಪ್ಪಿಕೊಳ್ಳಬಹುದು. ಗೆಳೆಯನು ಆಪತ್ತಿಗೆ ಒಳಗಾದಾಗ ಧೈರ್ಯ ತೋರಿ, ಶೌರ್ಯ ಪ್ರದರ್ಶಿಸಿ, ಆಪತ್ತಿನಿಂದ ಪಾರು ಮಾಡುವವನು ಗೆಳೆತನಕ್ಕೆ ಯೋಗ್ಯನಾದವನು. ಸನ್ಮಿತ್ರನೆನಿಸಿಕೊಂಡವನು ಹೀಗಿರಬೇಕು. ಆಪತ್ತು ಬಂದಾಗ ಬೆನ್ನು ಹಾಕಿ ಸಾಗುವವನು ಸನ್ಮಿತ್ರನಾಗಲು ಸಾಧ್ಯವಿಲ್ಲ.

ಆತ್ಮೀಯನ ಸುಖ ದುಃಖಗಳಲ್ಲಿ ಮನಃಪೂರ್ವಕವಾಗಿ ಸಮರ್ಪಿಸಿಕೊಳ್ಳುವವನು ನಿಜಕ್ಕೂ ಸ್ನೇಹಕ್ಕೆ ಅರ್ಹನಾದವನು. ಸುಖದಲ್ಲಿ ಜತೆಗಿದ್ದು, ದುಃಖದಲ್ಲಿ ದೂರ ಸಾಗುತ್ತಾನೆ ಎಂದಾದರೆ ಅವರಿಂದ ದೂರ ಇರುವುದೇ ಒಳ್ಳೆಯದು. ಯಾವುದೇ ಲಾಭ ನಷ್ಟಗಳ ಲೆಕ್ಕಾಚಾರವಿಲ್ಲದೆ ಪ್ರೀತಿಯನ್ನು ತೋರಿಸುವವನು ಆತ್ಮೀಯನು ಮಾತ್ರ. ಮಿತ್ರನ ನೋವು ನಲಿವುಗಳಲ್ಲಿ, ಸುಖ ದುಃಖಗಳಲ್ಲಿ ಸ್ಪಂದನೆ ಅತ್ಯವಶ್ಯ. ನಿಷ್ಕಲ್ಮಶ ಪ್ರೀತಿಯನ್ನು ನೀಡಬೇಕಾದುದು ಆತ್ಮೀಯನೆನಿಸಿಕೊಳ್ಳುವವನ ಆದ್ಯ ಕರ್ತವ್ಯ.

ದಾಕ್ಷಿಣ್ಯ ಸ್ವಭಾವವಿರಬೇಕು. ಸ್ನೇಹವನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳದೆ ನಯ, ನಾಜೂಕು, ದಾಕ್ಷಿಣ್ಯವನ್ನು ರೂಢಿಸಿಕೊಂಡು ಗೆಳೆತನವನ್ನು ಎಚ್ಚರಿಕೆಯಿಂದ ಮುಂದುವರಿಸುವವನೇ ನಿಜವಾದ ಸನ್ಮಿತ್ರ. ಮಿತ್ರನನ್ನು ನಂಬಿಸುವುದಕ್ಕಾಗಿ, ಮೋಸಗೊಳಿಸುವುದಕ್ಕಾಗಿ ಸುಳ್ಳನ್ನು ಹೇಳುವುದು ಸನ್ಮಿತ್ರರಿಗೆ ಭೂಷಣವಲ್ಲ. ಒಂದೊಮ್ಮೆ ಹಾಗೆ ಮಾಡಿದಲ್ಲಿ ಮಿತ್ರತ್ವಕ್ಕೆ ಮಾರಕ.

ಹೀಗೆ ನಾವು ಯಾರನ್ನಾದರೂ ಆತ್ಮೀಯನನ್ನಾಗಿ ಮಾಡಿಕೊಳ್ಳುವಲ್ಲಿ ಈ ಎಲ್ಲ ಗುಣಗಳನ್ನು ಗುರುತಿಸಿ ಸ್ವೀಕರಿಸಬೇಕು.

# ಸಾರ್ವಜನಿಕ ಆಸ್ತಿಗಳಿಗೆ ಹೆಸರು ನೀಡುವಲ್ಲಿ ಪಾರದರ್ಶಕತೆ ಮತ್ತು ನ್ಯಾಯ ಒದಗಿಸುವ ಅಗತ್ಯ

ನಮ್ಮ ದೇಶದಲ್ಲಿ, ವಿಶೇಷವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ, ರಸ್ತೆ, ವೃತ್ತ, ಬಡಾವಣೆ, ವಿದ್ಯಾಲಯ, ಸರ್ಕಾರಿ ಕಟ್ಟಡಗಳು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಗಣ್ಯ ವ್ಯಕ್ತಿಗಳ ಹೆಸರನ್ನು ಇಡುವ ಪದ್ಧತಿ ಬಹುಕಾಲದಿಂದ ನಡೆದುಬರುತ್ತಿದೆ. ಇದು ಒಂದು ಮಟ್ಟಿಗೆ ಸಮಾಜಕ್ಕೆ ಕೊಡುಗೆ ನೀಡಿದವರನ್ನು ಸ್ಮರಿಸುವ ಒಳ್ಳೆಯ ಪರಂಪರೆ ಆಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿಯ ಬಳಕೆ ಬಗ್ಗೆ ಹಲವಾರು ಪ್ರಶ್ನೆಗಳು ಉದ್ಭವಿಸುತ್ತಿವೆ. ಈ ವಿಷಯದಲ್ಲಿ ಸರಕಾರವು ಸಮಗ್ರ ಚಿಂತನೆ ನಡೆಸಿ, ಸ್ಪಷ್ಟ ನೀತಿಯನ್ನು ರೂಪಿಸುವ ಅಗತ್ಯ ಕಂಡುಬರುತ್ತಿದೆ.

ಒಂದು ಪ್ರದೇಶದಲ್ಲಿ ಅಥವಾ ನಗರದಲ್ಲಿ ಒಂದೇ ವ್ಯಕ್ತಿಯ ಹೆಸರನ್ನು ಹಲವು ಸ್ಥಳಗಳಿಗೆ ಮತ್ತೆ ಮತ್ತೆ ಬಳಸುವ ಉದಾಹರಣೆಗಳು ಹೆಚ್ಚುತ್ತಿವೆ. ಉದಾಹರಣೆಗೆ, ಒಂದೇ ವ್ಯಕ್ತಿಯ ಹೆಸರಿನಲ್ಲಿ ರಸ್ತೆ, ವೃತ್ತ, ಉದ್ಯಾನವನ, ಶಾಲೆ, ಹಾಗೂ ಇನ್ನಿತರ ಸಾರ್ವಜನಿಕ ಸೌಲಭ್ಯಗಳು ಇರುವುದು ಸಾಮಾನ್ಯವಾಗಿದೆ. ಇದರಿಂದ ಇತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಹಲವಾರು ಗಣನೀಯ ವ್ಯಕ್ತಿಗಳನ್ನು ಕಡೆಗಣಿಸಿದಂತಾಗುತ್ತದೆ. ಸಮಾಜದಲ್ಲಿ ಹಲವು ಕ್ಷೇತ್ರಗಳಲ್ಲಿ ಶ್ರಮಿಸಿದವರು ಇದ್ದಾರೆ. ಆದರೆ, ಹೆಸರು ನೀಡುವ ಸಂದರ್ಭದಲ್ಲಿ ಈ ವೈವಿಧ್ಯತೆಯನ್ನು ಪರಿಗಣಿಸದೇ ಕೆಲವು ಹೆಸರುಗಳನ್ನು ಮಾತ್ರ ಪುನರಾವರ್ತಿಸುವುದು ನ್ಯಾಯಸಮ್ಮತವಲ್ಲ.

ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ, ಸರಕಾರಿ ಅನುದಾನದಿಂದ ನಿರ್ಮಿಸಲಾದ ಕಟ್ಟಡಗಳು ಮತ್ತು ಸೌಲಭ್ಯಗಳಿಗೆ ಪ್ರಸ್ತುತ ರಾಜಕೀಯ ನಾಯಕರು ಅಥವಾ ಅವರ ಕುಟುಂಬ ಸದಸ್ಯರ ಹೆಸರನ್ನು ನೀಡುವುದು. ಬಸ್ ತಂಗುದಾಣಗಳು, ಕ್ರೀಡಾಂಗಣಗಳು, ಸಮುದಾಯ ಭವನಗಳು ಇತ್ಯಾದಿಗಳಿಗೆ ಶಾಸಕರು, ಸಂಸದರು ಅಥವಾ ಅವರ ಹತ್ತಿರದ ಹೆಸರನ್ನು ಇಡುವ ಪದ್ಧತಿ ಹಲವೆಡೆ ಕಂಡುಬರುತ್ತಿದೆ. ಇದು ಜನರಲ್ಲಿ ತಪ್ಪು ಸಂದೇಶವನ್ನು ಮೂಡಿಸುತ್ತದೆ. ಸರಕಾರಿ ಹಣದಿಂದ ನಿರ್ಮಿಸಲಾದ ಈ ಸೌಲಭ್ಯಗಳು ಸಾರ್ವಜನಿಕರ ಸ್ವತ್ತು ಆಗಿದ್ದು, ಅವುಗಳನ್ನು ಯಾವುದೇ ವ್ಯಕ್ತಿಯ ಖಾಸಗಿ ಸಾಧನೆ ಎಂದು ಭಾವಿಸುವ ಪರಿಸ್ಥಿತಿ ಉಂಟಾಗಬಾರದು.

ಈ ರೀತಿಯ ಹೆಸರಿಡುವ ಕ್ರಮವು ಜನರಲ್ಲಿ 'ಇದು ಆ ವ್ಯಕ್ತಿಯದ್ದೇ' ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಇದರಿಂದ ಸಾರ್ವಜನಿಕ ಆಸ್ತಿಗಳ ಮೇಲಿನ ಜನರ ಹಕ್ಕು ಮತ್ತು ಹೊಣೆಗಾರಿಕೆಯ ಭಾವನೆ ಕುಗ್ಗುತ್ತದೆ. ಸರ್ಕಾರದ ಯೋಜನೆಗಳು ಜನರಿಗಾಗಿ, ಜನರ ಹಣದಿಂದ ನಿರ್ಮಾಣವಾಗಿರುವುದರಿಂದ, ಅವುಗಳ ಹೆಸರಿಡುವಲ್ಲಿ ರಾಜಕೀಯ ಪ್ರಭಾವ ಇರಬಾರದು ಎಂಬುದು ಮೂಲಭೂತ ತತ್ವವಾಗಿರಬೇಕು.

ಕೆಲವೆಡೆ ರಾಜಕಾರಣಿಗಳ ಹೆತ್ತವರ ಹೆಸರನ್ನು ರಸ್ತೆ ಅಥವಾ ವೃತ್ತಗಳಿಗೆ ಇಡುವುದು ಸಹ ಗಮನಕ್ಕೆ ಬರುತ್ತದೆ. ಅವರ ಕುಟುಂಬದವರು ಸಮಾಜಕ್ಕೆ ಕೊಡುಗೆ ನೀಡಿದ್ದರೆ ಅದನ್ನು ಗೌರವಿಸುವುದು ತಪ್ಪಲ್ಲ, ಆದರೆ, ಈ ಕೊಡುಗೆಗಳನ್ನು ಸ್ಪಷ್ಟವಾಗಿ ಮೌಲ್ಯಮಾಪನ ಮಾಡದೆ, ಕೇವಲ ರಾಜಕೀಯ ಪ್ರಭಾವದ



ಆಧಾರದ ಮೇಲೆ ಹೆಸರಿಡುವುದು ಸರಿಯಲ್ಲ, ಇದು ಇತರ ಅರ್ಹ ವ್ಯಕ್ತಿಗಳಿಗೆ ಮಾಡಿದ ಅನ್ಯಾಯವಾಗುತ್ತದೆ.

ಈ ಎಲ್ಲಾ ಸಮಸ್ಯೆಗಳ ಹಿನ್ನೆಲೆಯಲ್ಲಿ ಈ ಕೆಳಗಿನ ಕ್ರಮಗಳನ್ನು ಸರ್ಕಾರ ಪರಿಗಣಿಸಬೇಕಾಗಿದೆ:

ಒಂದು ನಗರ ಅಥವಾ ಗ್ರಾಮದಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಒಂದೇ ಸಲ ಮಾತ್ರ ಬಳಸುವ ನಿಯಮವನ್ನು ಜಾರಿಗೊಳಿಸಬೇಕು. ಇದರಿಂದ ಹೆಸರುಗಳ ವೈವಿಧ್ಯತೆ ಹೆಚ್ಚುತ್ತದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಗೌರವ ನೀಡಲು ಅವಕಾಶ ಸಿಗುತ್ತದೆ.

ಹೆಸರು ನೀಡುವ ಪ್ರಕ್ರಿಯೆಯನ್ನು ಪಾರದರ್ಶಕ ಮತ್ತು ವ್ಯವಸ್ಥಿತಗೊಳಿಸಬೇಕು. ಒಂದು ಸ್ವತಂತ್ರ ಸಮಿತಿ ರಚಿಸಿ, ಅದರಲ್ಲಿ ಇತಿಹಾಸಕಾರರು, ಸಮಾಜ ಶಾಸ್ತ್ರಜ್ಞರು, ಸ್ಥಳೀಯ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸೇರಿಕೊಂಡಂತೆ ಮಾಡಬೇಕು. ಈ ಸಮಿತಿಯು ವ್ಯಕ್ತಿಗಳ ಕೊಡುಗೆ, ಪ್ರಾಮುಖ್ಯತೆ ಮತ್ತು ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ಆಧರಿಸಿ ಹೆಸರುಗಳನ್ನು ಆಯ್ಕೆ ಮಾಡಬೇಕು.

ಯೋಜನೆಗಳ ಸ್ವರೂಪಕ್ಕೆ ಅನುಗುಣವಾಗಿ ಹೆಸರುಗಳನ್ನು ಆಯ್ಕೆ ಮಾಡುವ ನೀತಿ ರೂಪಿಸಬೇಕು. ಉದಾಹರಣೆಗೆ, ಕ್ರೀಡಾಂಗಣಗಳಿಗೆ ಕ್ರೀಡಾಪಟುಗಳ ಹೆಸರು, ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಹೆಸರು, ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಕೊಡುಗೆ ನೀಡಿದವರ ಹೆಸರು ನೀಡಬೇಕು. ಇದರಿಂದ ಆ ಕ್ಷೇತ್ರದ ಮಹತ್ವ ಮತ್ತು ಪ್ರೇರಣೆ ಎರಡೂ ಹೆಚ್ಚುತ್ತದೆ.

ಪ್ರಸ್ತುತ ಅಧಿಕಾರದಲ್ಲಿರುವ ರಾಜಕೀಯ ವ್ಯಕ್ತಿಗಳ ಹೆಸರನ್ನು ಸರಕಾರಿ ಯೋಜನೆಗಳಿಗೆ ಇಡುವುದನ್ನು ತಡೆಯಬೇಕು. ಅದನ್ನು ರಾಜಕೀಯ ಲಾಭಕ್ಕಾಗಿ ಬಳಸುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ, ಕನಿಷ್ಠ ಒಂದು ನಿರ್ದಿಷ್ಟ ಅವಧಿ (ಉದಾಹರಣೆಗೆ 10 ಅಥವಾ 20 ವರ್ಷ) ನಂತರ ಮಾತ್ರ ಹೆಸರು ಪರಿಗಣಿಸುವ ನಿಯಮ ಇರಬೇಕು.

ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸುವ ವ್ಯವಸ್ಥೆಯನ್ನು ರೂಪಿಸಬೇಕು. ಜನರು ತಮ್ಮ ಪ್ರದೇಶದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸು ಮಾಡಲು ಅವಕಾಶ ನೀಡಿದರೆ, ಇದು ಹೆಚ್ಚು ನ್ಯಾಯಯುತ ಮತ್ತು ಸಮಗ್ರ ಪ್ರಕ್ರಿಯೆಯಾಗುತ್ತದೆ.

ಈ ಕ್ರಮಗಳನ್ನು ಅನುಸರಿಸಿದರೆ, ಸಾರ್ವಜನಿಕ ಆಸ್ತಿಗಳಿಗೆ ಹೆಸರು ನೀಡುವ ಪ್ರಕ್ರಿಯೆ ಹೆಚ್ಚು ನ್ಯಾಯಯುತ, ಪಾರದರ್ಶಕ ಮತ್ತು ಸಮಾನತೆಯ ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಇದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶ್ರಮಿಸಿದವರನ್ನು ಗುರುತಿಸುವುದಕ್ಕೂ, ಮುಂದಿನ ತಲೆಮಾರಿಗೆ ಪ್ರೇರಣೆಯಾಗುವುದಕ್ಕೂ ಸಹಾಯಕವಾಗುತ್ತದೆ.

ಸಾರಾಂಶವಾಗಿ, ಹೆಸರಿಡುವಿಕೆ ಒಂದು ಸಾಮಾನ್ಯ ಆಡಳಿತಾತ್ಮಕ ಕ್ರಮವಲ್ಲ; ಅದು ನಮ್ಮ ಸಂಸ್ಕೃತಿ, ಮೌಲ್ಯಗಳು ಮತ್ತು ಇತಿಹಾಸವನ್ನು ಪ್ರತಿಬಿಂಬಿಸುವ ಮಹತ್ವದ ಪ್ರಕ್ರಿಯೆಯಾಗಿದೆ. ಆದ್ದರಿಂದ, ಇದರಲ್ಲಿ ತಾರತಮ್ಯ, ರಾಜಕೀಯ ಪ್ರಭಾವ ಅಥವಾ ಅನ್ಯಾಯಕ್ಕೆ ಅವಕಾಶ ನೀಡದೇ, ಸಮಗ್ರ ಹಾಗೂ ಚಿಂತಿತ ನೀತಿಯನ್ನು ರೂಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದ ಗಂಭೀರತೆಯನ್ನು ಮನಗಂಡು, ಸಂಬಂಧಿತ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ವಿನಂತಿ.

-**ಜಿ. ನಾಗೇಂದ್ರ ಕಾವೂರು**, ಸಂಡೂರು

# ಒಳಮೀಸಲಾತಿಗೆ ಸರ್ಕಾರ ಆದೇಶ

• **ಬೆಂಗಳೂರು:** ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ರಿಂದ ಶೇ.15ಕ್ಕೆ ಸೀಮಿತಗೊಳಿಸಿ ಒಳಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಈ ಮೀಸಲಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಡುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ.

ಪರಿಶಿಷ್ಟ ಜಾತಿಗೆ ಲಭ್ಯ ಶೇ. 15 ಮೀಸಲಾತಿಯಲ್ಲಿ ಪ್ರವರ್ಗ ಎ (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ ಬಿ (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ ಸಿಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ, ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ. 5.25, 5.25, 4.50 ಪ್ರಮಾಣದಲ್ಲಿ ಒಳಮೀಸಲಾತಿ ಜಾರಿಗೊಳಿಸಿ ಆದೇಶಿಸಲಾಗಿದೆ. ಜೊತೆಗೆ, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆಯನ್ನೂ ಕೊಟ್ಟಿದೆ.

ಪ್ರವರ್ಗ-ಸಿಗೆ ಲಭ್ಯವಾಗುವ ಹುದ್ದೆಗಳಲ್ಲಿ ಅಥವಾ ಪ್ರವೇಶಾತಿ ಸೀಟುಗಳಲ್ಲಿ ಶೇ.20 ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಬೇಕು. ಒಂದು ವೇಳೆ, ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಇಲ್ಲದಿದ್ದರೆ ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ ಸಿಯ ಇತರೆ ಜಾತಿಗಳಿಗೆ ನೀಡಬೇಕೆಂದು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವುದೇ ವೃಂದದಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದಲ್ಲಿ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಸಾಮಾನ್ಯ ಎಂದು ಪರಿಗಣಿಸಿ, ನೇಮಕಾತಿ ಮಾಡಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ. ನ್ಯಾಯಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಾಜ್ಯ ಸರ್ಕಾರವು ಹೆಚ್ಚಿಸಿರುವ ಶೇ.24ರಷ್ಟು ಮೀಸಲಾತಿ ಪ್ರಮಾಣವನ್ನು ಒಪ್ಪಿದರೆ, ಹೆಚ್ಚುವರಿ ಶೇ.6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡಬೇಕು ಎಂದೂ ಆದೇಶದಲ್ಲಿದೆ.

ಸರ್ಕಾರ 2025ರ ಸೆ. 3ರಂದು ಹೊರಡಿಸಿದ್ದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯ ಹಂತದಲ್ಲಿರುವ ಅಥವಾ 2026ರ ಫೆ. 27ರಂದು ಹೊರಡಿಸಿದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿಗೆ ಕ್ರಮವಾಗಿ ಶೇ. 5.25, 5.25, 4.50 ಒಳ ಮೀಸಲಾತಿ ಅಳವಡಿಸಿ ತಕ್ಷಣ ಪರಿಷ್ಕೃತ ನೇಮಕಾತಿ ಅಧಿಸೂಚನೆ ಹೊರಡಿಸಿ, ನೇಮಕಾತಿಗಳನ್ನು ಮಾಡಬೇಕು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ.

## ದಕ್ಷಿಣ ಒಳನಾಡಲ್ಲಿ ಮಳೆ

• **ಬೆಂಗಳೂರು:** ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆ ಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ರಾಜ್ಯದ ಒಳನಾಡು ಜಿಲ್ಲೆಗಳಲ್ಲಿ ಏ. 29, 30 ಮತ್ತು ಮೇ 1ರಂದು ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಈ ವೇಳೆ ಗಾಳಿಯ ವೇಗವು ಗಂಟೆಗೆ 40-50 ಕಿ.ಮೀ. ತಲುಪುವ ಸಾಧ್ಯತೆಯಿದ್ದು, ಆಲಿಕಲ್ಲು ಮಳೆಯಾಗುವ ತೀವ್ರ ಸಂಭವವಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ; ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆಯ ಕೆಲವು ಸ್ಥಳಗಳಲ್ಲಿ ಆಲಿಕಲ್ಲು ಮಳೆ ಯಾದರೆ, ಬಳ್ಳಾರಿ, ವಿಜಯನಗರ, ಹಾಸನ, ಕೊಡಗು, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಒಂದೆರಡು ಸ್ಥಳಗಳಲ್ಲಿ ಮಳೆ ಸುರಿಯಲಿದೆ. ಉತ್ತರ ಒಳನಾಡಿನ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆ ಸಾಧ್ಯತೆಯಿದೆ. ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಒಂದೆರಡು ಸ್ಥಳಗಳಲ್ಲಿ ವರ್ಷಧಾರೆಯಾಗಲಿದೆ.

**ಶಂಕುಸ್ಥಾಪನೆ**




ಬೆಂಗಳೂರಿನ ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ (ಐ.ಐ.ಎ.)ಯಲ್ಲಿ 75 ಕೋಟಿ ರೂ. ವೆಚ್ಚದ ಅತ್ಯಾಧುನಿಕ ಹೊಸ ಹೆಚ್ಚುವರಿ ಕಟ್ಟಡಕ್ಕೆ ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಶಂಕುಸ್ಥಾಪನೆ ನೆರವೇರಿಸಿದರು. ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಅಧ್ಯಕ್ಷ ಎಸ್.ಸೋಮನಾಥ್ ಉಪಸ್ಥಿತರಿದ್ದರು. ಈ ಕಟ್ಟಡವು ಏಳು ಅಂತಸ್ತಿನದ್ದಾಗಿದ್ದು, 1 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಲಿದೆ.

## ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾವು ಮಹಿಳಾ ಮೀಸಲಾತಿ ಪರವೇ ಇದ್ದೇವೆ, ನಮ್ಮ ಪಕ್ಷ ಎಂದಿಗೂ ಮಹಿಳಾ ವಿರೋಧಿ ಅಲ್ಲ - **ಮಲ್ಲಿಕಾರ್ಜುನ ಖರ್ಗೆ**

**- ನಿಮ್ಮದು ನಮಗೆ ಅರ್ಥವಾಗದು. ಹಿಂದೂ ವಿರೋಧಿ ಅಲ್ಲ ಎನ್ನುತ್ತೀರಿ, ರಾಮಮಂದಿರ ನಿರ್ಮಾಣವನ್ನು ಶಕ್ತಿ ಮೀರಿ ವಿರೋಧಿಸಿದಿರಿ. ನಾವು ದೇಶ ವಿರೋಧಿಗಳಲ್ಲ ಅಂತ ಎನ್ನುತ್ತೀರಿ, ದೇಶ ಭಕ್ತರನ್ನು ಅತಿಯಾಗಿ ವಿರೋಧಿಸಿದಿರಿ. ಇದೀಗ ನಾವು ಮಹಿಳಾ ವಿರೋಧಿ ಅಲ್ಲ ಅಂತ ಅನ್ನುತ್ತಿದ್ದೀರಿ, ಮಹಿಳಾ ಮೀಸಲಾತಿಯನ್ನು ಖಂಡತುಂಡವಾಗಿ ವಿರೋಧ ಮಾಡುತ್ತಿದ್ದೀರಿ!**

## ದಿನ ಭವಿಷ್ಯ

**ಮೇಷ**
ದಿನದಾರಂಭದಲ್ಲಿ ಪ್ರತಿಕೂಲ ಪರಿಸ್ಥಿತಿ ಇದ್ದರೂ ಬಳಿಕ ಎಲ್ಲ ಪೂರಕವಾಗಲಿದೆ. ಆರ್ಥಿಕ ಬಿಕ್ಕಟ್ಟು ನಿವಾರಣೆ. ಮನೆಯಲ್ಲಿ ಶಾಂತ ಸ್ಥಿತಿ.

**ವೃಷಭ**
ವೃತ್ತಿಯಲ್ಲಿ ಒತ್ತಡ ಹೆಚ್ಚು, ಕಠಿಣ ಶ್ರಮ. ದಿನದಂತ್ಯಕ್ಕೆ ತೃಪ್ತಿಕರ ಫಲಿತಾಂಶ. ನಡೆನುಡಿಯಲ್ಲಿ ವಿನಯ ಇರಲಿ. ರೇಗಬೇಡಿ.

**ಮಿಥುನ**
ಜಾಗ ಅಥವಾ ವಾಹನ ಖರೀದಿಯ ಯೋಚನೆಯಿದ್ದರೆ ಕಾಲ ಸೂಕ್ತವಾಗಿದೆ. ಥಿಕ ಪ್ರಗತಿ. ಮಕ್ಕಳ ಕಡೆ ಹೆಚ್ಚು ಕಾಳಜಿ ತೋರಿಸಿರಿ.

**ಕಟಕ**
ಆಪ್ತರ ಜತೆಗೆ ಭಿನ್ನಮತ. ವಾಹನ ಚಾಲನೆಯಲ್ಲಿ ಎಚ್ಚರ ಇರಲಿ. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಉತ್ತಮ ಫಲ. ಆರ್ಥಿಕ ಕೊರತೆ ನಿವಾರಣೆ.

**ಸಿಂಹ**
ತೋಚಿದ್ದನ್ನು ಖರೀದಿಸುವ ಹವ್ಯಾಸ ಜೇಬಿ ಕತ್ತರಿ ಹಾಕೀತು. ಮಿತವ್ಯಯ ಸಾಧಿಸಿ. ಕೌಟುಂಬಿಕ ಸಹಕಾರ. ವಿದ್ಯಾರ್ಥಿಗಳಿಗೆ ಯಶ.

**ಕನ್ಯಾ**
ಕೆಲ ವಿಷಯಗಳಲ್ಲಿ ಅತಿರೇಕದ ವರ್ತನೆ ತೋರುವಿರಿ. ಇದು ಎಲ್ಲರಿಗೆ ಸಮ್ಮತವೆನಿಸದು. ಕುಟುಂಬ ಸದಸ್ಯರ ಜತೆ ವಾಗ್ವಾದ ನಡೆದೀತು.

**ತುಲಾ**
ಕುಟುಂಬಸ್ಥರ, ಹಿರಿಯರ ಕಿವಿಮಾತು ಕೇಳಿ. ಅಪಥ್ಯವೆಂದು ಪರಿಗಣಿಸಬೇಡಿ. ಅಜೀರ್ಣ ಸಮಸ್ಯೆ. ಮಿತಾಹಾರ ಒಳಿತು.

**ವೃಶ್ಚಿಕ**
ಕಠಿಣ ಕೆಲಸವನ್ನೂ ಸುಲಭದಲ್ಲಿ ಮುಗಿಸುವಿರಿ. ಆರೋಗ್ಯಕ್ಕೆ ಹೆಚ್ಚು ಗಮನ ಕೊಡಿ. ಅಪರಾಹ್ನ ಮನಸ್ಸು ಕೆಡಿಸುವ ಬೆಳವಣಿಗೆ. ದೃಢ ಚಿತ್ತರಾಗಿರಿ.

**ಧನು**
ಮನೆಯಲ್ಲಿ ನೆಮ್ಮದಿ, ಸಹಕಾರ. ವಿರಸ ಶಮನ. ಹೊರಗಿನ ಕೆಲಸದಲ್ಲಿ ಹೆಚ್ಚು ಶ್ರಮ ವಹಿಸುವಿರಿ. ಅಪೇಕ್ಷಿತ ಸಹಕಾರ ದೊರಕಲಾರದು.

**ಮಕರ**
ಆತ್ಮೀಯರ ಸಂಗಡ ಸಂಘರ್ಷ ನಡೆದೀತು. ಎದುರುತ್ತರ ಕೊಡದೆ ಮೌನದಿಂದಿರಿ. ವೃತ್ತಿಯ ಮೇಲೆ ಪರಿಣಾಮ ಬೀರದಂತೆ ಎಚ್ಚರವಹಿಸಿ..

**ಕುಂಭ**
ಸಹೋದ್ಯೋಗಿ ಜತೆ ವಾಗ್ಯುದ್ಧ. ಸಂಯಮ ಅವಶ್ಯ. ಎಲ್ಲರೂ ನಿಮ್ಮದೇ ತಪ್ಪು ಎನ್ನಬಹುದು. ಎಚ್ಚರಿಕೆಯ ನಡೆಯಿಡಿ. ಧನವ್ಯಯ ಹೆಚ್ಚು.

**ಮೀನ**
ದೈಹಿಕ ನೋವು ಕಾಡಬಹುದು. ವಿಶ್ರಾಂತಿಯು ಅಗತ್ಯ. ಕೆಲವರಿಗೆ ಪಿತ್ರಾರ್ಜಿತ ಆಸ್ತಿ ಲಭ್ಯತೆ. ವಿದ್ಯಾರ್ಥಿಗಳ ಪರಿಶ್ರಮ ಸಾರ್ಥಕ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 0,7,2,

## ವಿಕಸಿತ ಭಾರತ-2047ರ ದೃಷ್ಟಿಕೋನ | ಸೀತಾರಾಮನ್ ಉಪನ್ಯಾಸ

# ದೇಶದಲ್ಲಿ ಗಮನಾರ್ಹ ಪ್ರಗತಿ

• **ಮಂಗಳೂರು:** ಕಳೆದ ಒಂದು ದಶಕದಲ್ಲಿ ಭಾರತವು ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಮಂಗಳೂರಿನ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಸಭಾಂಗಣದಲ್ಲಿ ಮಂಗಳವಾರ ನಡೆದ ನಿಟ್ಟೆ ಡಾ.ಎನ್.ವಿನಯ ಹೆಗ್ಡೆ ಉಪನ್ಯಾಸ ಕಾರ್ಯಕ್ರಮ ದಲ್ಲಿ 'ವಿಕಸಿತ ಭಾರತ-2047ರ ದೃಷ್ಟಿಕೋನ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು. ವಿಕಸಿತ ಭಾರತ ಎಂಬುದು ಬಹು ದೂರದ ಗುರಿಯಲ್ಲ, ಇನ್ನು ಎರಡು ದಶಕಗಳಲ್ಲೇ ಸಾಧಿಸಬೇಕಾದ ಮಹತ್ವದ ಹಂತವಾಗಿದೆ. 2047ರೊಳಗೆ ಭಾರತವನ್ನು ಸಮೃದ್ಧ ಮತ್ತು ಶಕ್ತಿಶಾಲಿ ರಾಷ್ಟ್ರವನ್ನಾಗಿ ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿಯೂ ಆಗಿದೆ ಎಂದು ಅವರು ಹೇಳಿದರು.

**ವಿನಯ ಹೆಗ್ಡೆ ಕೊಡುಗೆ ಮಹತ್ತರ:** ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ತರವಾದುದು. ಕರಾವಳಿ ಕರ್ನಾಟಕದಲ್ಲಿ ಶಿಕ್ಷಣ ಅವಕಾಶಗಳನ್ನು ವಿಸ್ತರಿಸಿ, ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಶ್ರೇಷ್ಠತೆಯ ಪ್ರತೀಕವಾಗಿ ಗುರುತಿಸಿಕೊಂಡ ನಿಟ್ಟೆ ವಿನಯ ಹೆಗ್ಡೆಯವರ ಶೈಕ್ಷಣಿಕ ಮತ್ತು ಸಮಾಜ ಸೇವೆಯನ್ನು ಜನತೆ ಮರೆಯಲು ಸಾಧ್ಯವಿಲ್ಲ, ಅವರು ಶೈಕ್ಷಣಿಕ ರಂಗಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ. ಇಂತಹ ಅನೇಕ ಶಿಕ್ಷಣ ತಜ್ಞರು ಕರಾವಳಿಗೆ ಮಾತ್ರವಲ್ಲದೆ ರಾಜ್ಯ ಮತ್ತು ದೇಶದ ಅಭಿವೃದ್ಧಿಗೂ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ನಿರ್ಮಲಾ ಸೀತಾರಾಮನ್ ಶ್ಲಾಘಿಸಿದರು.

2014ರ ಹಣಕಾಸು ವರ್ಷದಲ್ಲಿ 1.9 ಲಕ್ಷ ಕೋ. ರೂ.ಮಟ್ಟದಲ್ಲಿದ್ದ ಆರ್ಥಿಕ ವಲಯವು 2026ರ ವೇಳೆಗೆ 21.2 ಲಕ್ಷ ಕೋ.ರೂ.ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕ ಸಾಮರ್ಥ್ಯದಲ್ಲಿ ಮಹತ್ತರ ಬದಲಾವಣೆಯನ್ನು ಸೂಚಿಸುತ್ತದೆ. ಅದೇ ರೀತಿ ಚಂದ್ರಯಾನ-3 ಯಂತಹ ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಗಳು ವಿಶ್ವದ ಗಮನ ಸೆಳೆದಿವೆ ಎಂದು ಅವರು ಹೇಳಿದರು.

ಭಾರತವು ಪ್ರಾಚೀನ ಕಾಲದಿಂದಲೂ ಶ್ರೀಮಂತ ಸಂಸ್ಕೃತಿ ಮತ್ತು ಆರ್ಥಿಕ ಶಕ್ತಿಯನ್ನು ಹೊಂದಿದ ದೇಶ. ವಿಶ್ವದೊಂದಿಗೆ ವ್ಯಾಪಾರ, ಸಾಂಸ್ಕೃತಿಕ ವಿನಿಮಯಗಳ ಮೂಲಕ ಭಾರತ ಪ್ರಮುಖ ಸ್ಥಾನವನ್ನು ಪಡೆದಿತ್ತು. ಪ್ರಸಕ್ತ ಭಾರತವು ತನ್ನ ಮೂಲ ಶಕ್ತಿಯನ್ನು ಮರುಪಡೆಯುವ ಮೂಲಕ ವಿಶ್ವದಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಅವರು ಹೇಳಿದರು.

ತಂತ್ರಜ್ಞಾನಗಳು ಅಭಿವೃದ್ಧಿಯಾಗಿರುವ ಪ್ರಸಕ್ತ ಕಾಲಘಟ್ಟದಲ್ಲಿ ಯುವಜನತೆ ಹೆಚ್ಚಿನ ಅವಕಾಶ ಗಳು, ನವೀನತೆ ಮತ್ತು ಜಾಗತಿಕ ಮಟ್ಟದ ಸ್ಪರ್ಧಾತ್ಮಕತೆ ಯನ್ನು ನಿರೀಕ್ಷಿಸುತ್ತಿದ್ದಾರೆ. ಹೀಗಾಗಿ, ಇಂದಿನ ಸಾಧನೆ ಗಳನ್ನು ದೀರ್ಘಕಾಲಿಕ ಮತ್ತು ಸಮಗ್ರ ಪರಿವರ್ತನೆಗೆ ರೂಪಾಂತರಿಸುವುದು ಮುಂದಿನ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟರು. ಆಮದುಗಳ ಮೇಲಿನ ಅವ ಲಂಬನೆಯಿಂದ ದೇಶದ ಅಭಿವೃದ್ಧಿ ನಿರೀಕ್ಷಿಸಲಾಗದು. ಬದಲಾಗಿ, ಉತ್ಪನ್ನಗಳನ್ನು ದೇಶದಲ್ಲೇ ನಿರ್ಮಿಸು ವುದರ ಮೂಲಕ ಭಾರತವನ್ನು ಬಲಿಷ್ಠ ಕೈಗಾರಿಕಾ ಕೇಂದ್ರವನ್ನಾಗಿ ರೂಪಿಸಬೇಕಿದೆ ಎಂದು ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಸುಪ್ರೀಂ ನಿವೃತ್ತ ನ್ಯಾಯಮೂರ್ತಿ, ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ದ.ಕ. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಕರ್ನಾಟಕ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಮತ್ತಿತರರು ಉಪಸ್ಥಿತರಿದ್ದರು. ನಿಟ್ಟೆ ವಿವಿಯ ಕುಲಾಧಿಪತಿ ಡಾ.ಎಂ.ಶಾಂತಾರಾಮ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಪತಿ ವಿಶಾಲ್ ಹೆಗ್ಡೆ ಸ್ವಾಗತಿಸಿದರು. ಉಪ ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ ವಂದಿಸಿದರು.




**ದೇಶದ ಅಭಿವೃದ್ಧಿ ಜನರೊಂದಿಗೆ ಬೆಸೆದುಕೊಂಡು ಸಾಗುತ್ತಿದೆ. ಉತ್ಪಾದನೆ, ಯುವಶಕ್ತಿ ಹಾಗೂ ಮಹಿಳಾ ಸಬಲೀಕರಣ ಭಾರತದ ಅಭಿವೃದ್ಧಿಗೆ ಹೊಸ ದಿಕ್ಕು ತೋರಲಿದೆ. ಈ ನೆಲೆಯಲ್ಲಿ ಸ್ವಾವಲಂಬನೆಗೆ ವಿಶೇಷ ಒತ್ತು ನೀಡಲಾಗಿದೆ.**
■ **ನಿರ್ಮಲಾ ಸೀತಾರಾಮನ್**, ಕೇಂದ್ರ ಹಣಕಾಸು ಸಚಿವೆ

## ಕೆಎಸ್ಡಿಎಲ್‌ಗೆ ₹507 ಕೋಟಿ ಲಾಭ

ಪುಟ ೧➡ ಆದರೆ, ಅಲ್ಲಿಂದ 2 ಸಾವಿರ ಕೋಟಿ ರೂ. ಮಟ್ಟವನ್ನು ಕೇವಲ 4 ವರ್ಷಗಳಲ್ಲಿ ತಲುಪಿದೆ. ಅದರಲ್ಲೂ, 2022-23 ರಲ್ಲಿ 1,375 ಕೋಟಿ ರೂ. ವಹಿವಾಟು ನಡೆಸಿದ್ದ ಸಂಸ್ಥೆಯು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕಳೆದ 3 ವರ್ಷಗಳಲ್ಲಿ 2,016 ಕೋಟಿ ರೂ. ತಲುಪಿದೆ. ಇಷ್ಟು ಅಲ್ಪಾವಧಿಯಲ್ಲಿ ಕೆಎಸ್‌ಡಿಎಲ್ ವಹಿವಾಟು 641 ಕೋಟಿ ರೂ.ಗಳನ್ನು ಹೆಚ್ಚಳ ಕಂಡಿದೆ ಎಂದರು.

ಮೊದಲು ಸಂಸ್ಥೆಯು ಕೇವಲ 34 ಉತ್ಪನ್ನಗಳನ್ನು ಹೊಂದಿತ್ತು. ಮೂರು ವರ್ಷಗಳಲ್ಲಿ ನಾವು 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ. ಈಗ ಒಟ್ಟು 94 ಉತ್ಪನ್ನಗಳಿವೆ. ಯಾವುದೇ ಹೊಸ ನೇಮಕಾತಿ ಇಲ್ಲದೆ, ಯಂತ್ರೋಪಕರಣಗಳ ಖರೀದಿ ಇಲ್ಲದೆ ಇದನ್ನೆಲ್ಲ ಸಾಧಿಸಲಾಗಿದೆ. ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ 26 ಸಾವಿರ ಮೆಟ್ರಿಕ್ ಟನ್ ಇದ್ದರೂ ಪರಿಣಾಮಕಾರಿ ಕಾರ್ಯವಿಧಾನದ ಮೂಲಕ 2025-26 ರಲ್ಲಿ 47 ಸಾವಿರ ಮೆಟ್ರಿಕ್ ಟನ್ ಉತ್ಪಾದಿಸ ಲಾಗಿದೆ. ಬಂದಿರುವ 507 ಕೋಟಿ ರೂ. ಲಾಭದಲ್ಲಿ ಸರಕಾರಕ್ಕೆ 157 ಕೋಟಿ ರೂ. ಲಾಭಾಂಶ (ಡಿವಿಡೆಂಡ್) ಮತ್ತು ಸಿಎಂ ಪರಿಹಾರ ನಿಧಿಗೆ 5 ಕೋಟಿ ರೂ ಹಸ್ತಾಂತರಿಸ ಲಾಗುವುದು. ಹೋದ ವರ್ಷ 135 ಕೋಟಿ ರೂ. ಕೊಡಲಾಗಿತ್ತು. ಇದರಲ್ಲಿ ಈಗ 22 ಕೋಟಿ ರೂ. ಹೆಚ್ಚಳವಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ್ ವಿವರಿಸಿದರು.

ಸಂಸ್ಥೆಯ ಅಧ್ಯಕ್ಷ ಅಪ್ಪಾಜಿ ಸಿ.ಎಸ್. ನಾಡಗೌಡ ಮಾತನಾಡಿ, ಕಾರ್ಖಾನೆಯ ಈ ಸಾಧನೆಗೆ ಸಹಕರಿಸಿದ ಸಚಿವ ಪಾಟೀಲ ಹಾಗೂ ಇಲಾಖೆಯ ಪ್ರಧಾನ ಕಾರ್ಯ ದರ್ಶಿ ಸೆಲ್ವಕುಮಾರ್ ಅವರಿಗೆ ಧನ್ಯವಾದ ಗಳನ್ನು ತಿಳಿಸುತ್ತೇನೆ. ಆಸ್ಟ್ರೇಲಿಯಾ ಸೇರಿ ದಂತೆ ದೇಶ ವಿದೇಶಗಳಿಗೆ ಹೋಗಿ ಸಾಬೂನು ಮಾರಾಟ ವಿಸ್ತರಣೆಗೆ ಪ್ರಯತ್ನ ಮಾಡಿದ್ದೇವೆ. ಆಧುನಿಕ ಮಾರಾಟ ವ್ಯವಸ್ಥೆ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದು ಇವ ತ್ತಿನ ಸಾಧನೆಗೆ ಕಾರಣವಾಯಿತು ಎಂದರು. ಮುಂದಿನ ದಿನಗಳಲ್ಲಿ ಯುನೈಟೆಡ್ ಎಮಿ ರೇಟ್ಸ್ ದೇಶಗಳಲ್ಲಿಯೂ ಮಾರುಕಟ್ಟೆ ವಿಸ್ತ ರಣೆ ಮಾಡಲು ಯೋಜನೆ ರೂಪಿಸುತ್ತಿ ದ್ದೇವೆ. ಸೋಪು ಮಾತ್ರವಲ್ಲದೆ, ಕಾಸ್ಮೆಟಿಕ್, ಸುಗಂಧ ದ್ರವ್ಯ ವಿಭಾಗದಲ್ಲೂ ಮಾರುಕಟ್ಟೆ ವಿಸ್ತರಣೆ ಮಾಡುತ್ತೇವೆ ಎಂದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಪಿಕೆಎಂ ಪ್ರಶಾಂತ್ ಮಾತನಾಡಿ, ಸಂಸ್ಥೆ ಯ ನೌಕರರಿಗೆ 4.83 ಕೋಟಿ ರೂ.ಗಳನ್ನು ವೇತನ ಒಪ್ಪಂದದ ಮೂಲಕ ನೀಡಲಾಗಿದೆ. 20 ಕೋಟಿ ರೂ. ಕ್ಯಾಂಪಸ್ ಸಂರಕ್ಷಣೆ ವಿನಿಯೋಗಿಸಲಾಗಿದೆ ಎಂದರು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಹಾಗೂ ಸಂಸ್ಥೆಯ ನೂರಾರು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

### ರೈತರಿಗೆ ಉತ್ತೇಜನ

ಪುಟ ೧➡ ಇದಕ್ಕಾಗಿ ರೈತರಿಗೆ ಪ್ರತಿ ಗಂಧದ ಗಿಡಕ್ಕೆ 3 ವರ್ಷಗಳಿಗೆ



500 ರೂ. ಪ್ರೋತ್ಸಾಹಧನ ನೀಡಲಾಗುವುದು. ಜತೆಗೆ ಬೆಂಗಳೂರಿನ ಜಿಕೆವಿಕೆ ಮತ್ತು ವಿಜಯಪುರದ ಕೃಷಿ ವಿದ್ಯಾಲಯಗಳ ಸಹಯೋಗದಲ್ಲಿ ಶ್ರೀಗಂಧದ ಅಧ್ಯಯನ ಪೀಠ ತೆರೆಯಲಾಗುವುದು ಎಂದು ಸಚಿವ ಪಾಟೀಲ ತಿಳಿಸಿದರು.

# ಸೇನೆಗೆ 4 ಸುದರ್ಶನ ಚಕ್ರ ಬಲ

ಪುಟ ೧➡ **ಈಗ ನಾಲ್ಕು, ನವೆಂಬರ್‌ನಲ್ಲಿ ಇನ್ನೊಂದು:** ಭಾರತ ಸರ್ಕಾರ ಈಗಾಗಲೇ ಖರೀದಿಗೆ ಅನುಮೋದನೆ ನೀಡಿರುವ ಪ್ರಕಾರ, ನಾಲ್ಕು ಸುದರ್ಶನ ಚಕ್ರಗಳಷ್ಟೇ ಅಲ್ಲ, ಒಪ್ಪಂದದ ಪ್ರಕಾರ, ಐದು ಎಸ್-400 ಕ್ಷಿಪಣಿ ವ್ಯವಸ್ಥೆಗಳನ್ನು ರಷ್ಯಾ ಪೂರೈಕೆ ಮಾಡಲಿದೆ. ಅವುಗಳಲ್ಲಿ ನಾಲ್ಕು ಮೇನಲ್ಲಿ ಭಾರತ ತಲುಪಲಿದ್ದು, ಇನ್ನೊಂದು ನವೆಂಬರ್‌ನಲ್ಲಿ ಬರಲಿದೆ.

**2.38 ಲಕ್ಷ ಕೋಟಿ ರೂ. ರಕ್ಷಣಾ ಖರೀದಿ!** ಇದೇ ವರ್ಷ ಮಾರ್ಚ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) 2.38 ಲಕ್ಷ ಕೋಟಿ ರೂ. ವೆಚ್ಚದಲ್ಲಿ ರಕ್ಷಣಾ ಖರೀದಿಗೆ ಅವಶ್ಯಕತೆಯ ಸ್ವೀಕೃತಿ (ಎಒಎನ್) ನೀಡಿದ್ದು, ಇದರಲ್ಲಿ ಹಲವು ಯುದ್ಧೋಪಕರಣಗಳ ಖರೀದಿ ಒಳಗೊಂಡಿವೆ.

### ರಕ್ಷಣಾ ಆಧುನೀಕರಣ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಭಾರತೀಯ ಸೇನೆಯ ಸಂಪೂರ್ಣ ರೂಪಾಂತರಗೊಳಿಸುತ್ತಿದೆ. ರಕ್ಷಣಾ ಸ್ವಾವಲಂಬನೆ ಮತ್ತು ಎಐ ಯುಗದಲ್ಲಿ ರಕ್ಷಣಾ ಕ್ಷೇತ್ರವನ್ನು ಸಂಪೂರ್ಣ ಆಧುನೀಕರಣಗೊಳಿಸುವುದೇ ಸರ್ಕಾರದ ಧ್ಯೇಯವಾಗಿದೆ. ಸಿಂದೂರ ಸೇರಿ ಇತ್ತೀಚೆಗಿನ ಸಂಘರ್ಷಗಳಲ್ಲಿ ಸೇನೆ 11 ಎಸ್-400 ವ್ಯವಸ್ಥೆಗಳಿಂದ ಕ್ಷಿಪಣಿ ದಾಳಿ ನಡೆಸಿದೆ.

**ಎಸ್-400ನಲ್ಲಿನ ಕ್ಷಿಪಣಿ ವ್ಯಾಪ್ತಿ?**

| | |
|---|---|
| 40ಎನ್6 | 400 ಕಿ.ಮೀ. |
| 48ಎನ್6 | 250 ಕಿ.ಮೀ. |
| 9ಎಂ96ಇ2 | 120 ಕಿ.ಮೀ. |
| 9ಎಂ96ಇ | 40 ಕಿ.ಮೀ. |

## ಆ್ಯಕ್ಟ್ ಈಸ್ಟ್, ಆ್ಯಕ್ಟ್ ಫಾಸ್ಟ್

ಪುಟ ೧➡ ಸಂಚಿಕೆ ಮತ್ತು ರಾಜಕೀಯ ನೆಲೆಯಲ್ಲಿ ದೇಶವನ್ನು ವಿಭಜಿಸಲು ನಡೆಯುತ್ತಿರುವ ಪ್ರಯತ್ನಗಳ ನಡುವೆ ಸಿಕ್ಕಿಮ್ 'ಏಕ ಭಾರತ್, ಶ್ರೇಷ್ಠ ಭಾರತ್'ನ ಪ್ರತೀಕವಾಗಿದೆ ಎಂದರು.

**ಯುವ ಪ್ರತಿಭೆಗಳ ಜತೆ ಮೋದಿ ಫುಟ್ಬಾಲ್:** ಇದಕ್ಕೂ ಮುನ್ನ ಬೆಳಗ್ಗೆ ಯುವ ಪ್ರತಿಭೆಗಳ ಜತೆ ಫುಟ್ಬಾಲ್ ಆಡಿದ ಪ್ರಧಾನಿ ಮೋದಿಯವರು, ಸಿಕ್ಕಿಮ್‌ನಲ್ಲಿ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆದಿದೆ. ವಿಶೇಷವಾಗಿ ಈಶಾನ್ಯ ರಾಜ್ಯಗಳಲ್ಲಿ ಫುಟ್ಬಾಲ್‌ಗೆ ವಿಶೇಷ ಉತ್ತೇಜನ ನೀಡಲಾಗುವುದು ಎಂದರು. ಸಿಕ್ಕಿಂ ಎಂದರೆ ಪ್ರಕೃತಿ ಮತ್ತು ಸಂಸ್ಕೃತಿಯ ಜೀವಂತ ಪ್ರತೀಕ. ರಾಜ್ಯದ ರಸ್ತೆಗಳ ಸ್ವಚ್ಛತೆ, ಗಾಳಿಯ ಶುದ್ಧತೆಯನ್ನು ಕಾಯ್ದುಕೊಂಡ ಸಿಕ್ಕಿಂ ಜನರನ್ನು ಶ್ಲಾಘಿಸಿದ ಮೋದಿಯವರು, ಪ್ರಕೃತಿ ಸಂರಕ್ಷಣೆಯ ನೈಜ ರಾಯಭಾರಿಗಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಕ್ಕಿಂ ಭವಿಷ್ಯದ ಬೆಳವಣಿಗೆಯ ಹಬ್ ಆಗಿ ಮೂಡಿಬರಲು ಸಜ್ಜಾಗಿದ್ದು, ನೈಸರ್ಗಿಕ ಕೃಷಿ ಸೇರಿದಂತೆ ಸುಸ್ಥಿರ ಅಭಿವೃದ್ಧಿಯ ಮೂಲಕ ಸಿಕ್ಕಿಂ ಅಭಿವೃದ್ಧಿಯತ್ತ ಸಾಗುತ್ತಿದ್ದು, ಸಿಕ್ಕಿಂ ಪರಿಸರ-ಆರೋಗ್ಯ ಪ್ರವಾಸೋದ್ಯಮದ ವಿಪುಲ ಅವಕಾಶಗಳನ್ನು ಹೊಂದಿದೆ. ಸರಕಾರ ಇದನ್ನು ಉತ್ತೇಜಿಸುತ್ತದೆ. ರಾಜ್ಯದಲ್ಲಿ 1000 ಹೋಮ್ ಸ್ಟೇಗಳನ್ನು ಈ ನಿಟ್ಟಿನಲ್ಲಿ ನಿರ್ಮಿಸುವ ಜತೆಗೆ ಬಿಲ್ಲುಗಾರಿಕೆಯಂತಹ ಎಲ್ಲ ಸಾಹಸ ಪ್ರವಾಸೋದ್ಯಮಕ್ಕೂ ಬೆಂಬಲ ನೀಡಲಾಗುವುದು ಎಂದರು. ಇಂತಹ ವಿಪುಲ ಅವಕಾಶಗಳಿದ್ದರೂ ಹಿಂದಿನ ಕಾಂಗ್ರೆಸ್ ಸರಕಾರ ಈಶಾನ್ಯ ರಾಜ್ಯಗಳನ್ನು ನಿರ್ಲಕ್ಷಿಸಿರುವುದಕ್ಕೆ ಅವರು ಖೇದ ವ್ಯಕ್ತಪಡಿಸಿದರು.

### ಸಿಕ್ಕಿಂಗೆ ₹4000 ಕೋಟಿ ಯೋಜನೆ

ಪುಟ ೧➡ ರಾಜ್ಯದ ಸ್ವರ್ಣ ಸಂಭ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಓಂ ಪ್ರಕಾಶ್ ಮಾಥುರ್, ಸಂಸದರಾದ ಡಿ.ಟಿ.ಲೆಪ್ಚಾ, ಇಂದ್ರ ಹಂಗ್ ಸುಬ್ಬ ಮುಂತಾದವರ ಉಪಸ್ಥಿತಿ ಹೆಮ್ಮೆಯ ಕ್ಷಣ ಎಂದು ಪ್ರತಿಕ್ರಿಯಿಸಿದರು. ಸಿಕ್ಕಿಂನಲ್ಲಿ ಹೆಲೆನ್ ಲೆಪ್ಚಾ ಮೆಡಿಕಲ್ ಕಾಲೇಜು, 100 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ, ಮಿನಿ ಸೆಕ್ರೇಟರಿಯೇಟ್, ಇಕೋ -ಟೂರಿಸಂ ಪಿಲಿಗ್ರಿಮೇಜ್ ಕಾಂಪ್ಲೆಕ್ಸ್, ಆಡಳಿತ ಕಚೇರಿ, ನೇತಾಜಿ ಸುಭಾಸ್‌ಚಂದ್ರ ಬೋಸ್ ಸೆಂಟರ್ ಆಫ್ ಎಕ್ಸಲೆನ್ಸ್‌ನಂತಹ ಯೋಜನೆಗಳನ್ನು ಈ ಸಂದರ್ಭ ಪ್ರಧಾನಿಯವರು ಉದ್ಘಾಟಿಸಿದರು. ಪ್ರಧಾನಿ ಮೋದಿಯವರು ಈಶಾನ್ಯ ರಾಜ್ಯಗಳ ಅದರಲ್ಲೂ ಸಿಕ್ಕಿಂ ಬಗ್ಗೆ ಹೊಂದಿರುವ ಪ್ರಾಮಾಣಿಕ ಪ್ರೀತ್ಯಾದರಗಳನ್ನು ವ್ಯಕ್ತಪಡಿಸಿರುವುದಕ್ಕೆ ಅವರು ಧನ್ಯವಾದ ಹೇಳಿದರು.

## ಆಯೋಗದ ಆಡಳಿತ ವ್ಯವಸ್ಥೆ ಕುಸಿತ: ಆತಂಕ

• **ಬೆಂಗಳೂರು:** ಕರ್ನಾಟಕ ಮಾಹಿತಿ ಆಯೋಗವು ದ್ವಿತೀಯ ಮೇಲ್ಮನವಿಗಳ ವಿಲೇವಾರಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮುಂಚೂಣಿಯಲ್ಲಿದ್ದರೂ, ಆಯೋಗದ ಆಡಳಿತ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿತಗೊಂಡಿದೆ ಎಂದು ರಾಜ್ಯ ಮಾಹಿತಿ ಆಯುಕ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ನಡೆದ ಆಯೋಗದ ಸಭೆಯಲ್ಲಿ, ಪ್ರಭಾರ ಕಾರ್ಯದರ್ಶಿಗಳ ನಡೆ ಮತ್ತು ಕಚೇರಿಯ ಆಡಳಿತಾತ್ಮಕ ವೈಫಲ್ಯಗಳ ವಿರುದ್ಧ ಒಮ್ಮತದ ಖಂಡನಾ ನಿರ್ಣಯ ಕೈಗೊಳ್ಳಲಾಗಿದೆ. 2025-26ನೇ ಸಾಲಿನಲ್ಲಿ ಆಯೋಗವು ಒಟ್ಟು 70,000 ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಅದರಲ್ಲಿ 46,000 ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಶೇ.60ಕ್ಕಿಂತ ಹೆಚ್ಚು ಸಾಧನೆ ಮಾಡಿದೆ.

**ಕಾರ್ಯದರ್ಶಿಗಳ ಗೈರು:** ಆಯೋಗದ ಪ್ರಭಾರ ಕಾರ್ಯದರ್ಶಿಗಳಾದ ಸತೀಶ ಬಿ.ಸಿ. ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಕಚೇರಿಗೆ ಸರಿಯಾಗಿ ಹಾಜರಾಗುತ್ತಿಲ್ಲ ಮತ್ತು ಆಡಳಿತಾತ್ಮಕ ಕೆಲಸಗಳತ್ತ ಗಮನ ಹರಿಸುತ್ತಿಲ್ಲ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

## ಕಾಂಗ್ರೆಸ್ ವರಿಷ್ಠರ ಜತೆ ಸಚಿವರ ಚರ್ಚೆ

ಪುಟ ೧➡ 3 ದಿನಗಳ ಹಿಂದೆ ದಿಲ್ಲಿಗೆ ಭೇಟಿ ನೀಡಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ತಮ್ಮ ಮನವಿಯನ್ನು ಮಂಡಿಸಿದ್ದರು. ಅದಾದ ನಂತರ ಕಳೆದೆರಡು ದಿನಗಳಿಂದ ದಿಲ್ಲಿಯಲ್ಲಿರುವ ಮಹದೇವಪ್ಪ, ಸತೀಶ್ ಜಾರಕಿಹೊಳಿ ಅವರು ಕೂಡಾ ಸುದೀರ್ಘ ಚರ್ಚೆ ನಡೆಸಿದ್ದಾರೆ.

### ಮುಂದುವರಿಕೆ, ಪದತ್ಯಾಗಕ್ಕೂ ಸಿಎಂ ಸಿದ್ಧ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಮುಂದುವರಿಸಲು ಮತ್ತು ಪದತ್ಯಾಗ ಎರಡಕ್ಕೂ ಸಿದ್ಧರಾಗಿದ್ದಾರೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ ಬೆಂಗಳೂರಲ್ಲಿ ಮಾತನಾಡಿದ ಅವರು, ಹೈಕಮಾಂಡ್ ಗೊಂದಲ ಬಗೆಹರಿಸಬೇಕು. ಗೊಂದಲ ಬಗೆಹರಿಸಿದಷ್ಟು ರಾಜ್ಯಕ್ಕೆ ಒಳ್ಳೆಯದು. ಗೊಂದಲ ಮುಂದುವರಿಯಲು ಹೈಕಮಾಂಡ್ ಅವಕಾಶ ನೀಡಬಾರದು. ಹೈಕಮಾಂಡ್ ಏನು ಹೇಳುತ್ತದೆಯೋ ಅದಕ್ಕೆ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಲ್ಲ ಎಂದು ತಿಳಿಸಿದ್ದಾರೆ. ಸಿಎಂ ಜತೆ ಸಭೆ ಮಾಡಿದಾಗಲೂ ಅವರು ಓಪನ್ ಮೈಂಡ್‌ನಲ್ಲಿ ಇದ್ದಾರೆ. ರಾಹುಲ್ ಗಾಂಧಿ ಸೂಚನೆ ಪಾಲನೆ ಮಾಡುತ್ತೇನೆ. ಆಗ ನಿಮ್ಮೆಲ್ಲರ ಸಹಕಾರ ಇರಬೇಕು ಎಂದು ಸಿಎಂ ಅಭಿಮತ ವ್ಯಕ್ತಪಡಿಸಿದ್ದಾರೆ.

## ವಿರೋಧದ ನಡುವೆಯೂ ಬಿಐಸಿಯಲ್ಲಿ ಸಂವಾದ

# ಖಾಲಿದ್ ವಿರುದ್ಧ ಪ್ರತಿಭಟನೆ

• **ಬೆಂಗಳೂರು:** ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಪ್ರತಿಭಟನೆಗೆ ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದೊಮ್ಮಲೂರು ಸಮೀಪದ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 2020ರ ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಲ್ಲಿ ಜೈಲು ಪಾಲಾಗಿರುವ ವ್ಯಕ್ತಿಯ ಕುರಿತಾದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಬಿಜೆಪಿ ಆಗ್ರಹಿಸಿತ್ತು.

**ಕಾರ್ಯಕರ್ತರ ವಶ:** ಬಿಜೆಪಿ ಪ್ರತಿಭಟನೆಯ ಎಚ್ಚರಿಕೆಯ ಹಿನ್ನೆಲೆಯಲ್ಲಿ ಬಿಐಸಿ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಕಾರ್ಯಕ್ರಮ ಆರಂಭವಾಗುವ ಒಂದು ಗಂಟೆ ಮುನ್ನವೇ ಸ್ಥಳಕ್ಕೆ ಆಗಮಿಸಿ ಪ್ರತಿಭಟನೆ ನಡೆಸಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದು ವಶಕ್ಕೆ ಪಡೆದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದವೂ ನಡೆಯಿತು.

### ಬಿಗಿ ಬಂದೋಬಸ್ತ್

ಬಿಜೆಪಿಯ ತೀವ್ರ ವಿರೋಧದ ನಡುವೆಯೂ ಕಾರ್ಯಕ್ರಮ ನಿಗದಿಯಂತೆ ನಡೆಯಿತು. ಈ ಸಂವಾದದಲ್ಲಿ ನಟ ಪ್ರಕಾಶ್ ರಾಜ್, ಇತಿಹಾಸಕಾರ ರಾಮಚಂದ್ರ ಗುಹ, ಜಾನಕಿ ನಾಯರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತಲ್ಲದೆ, ಕೇವಲ ಪೂರ್ವ ನೋಂದಣಿ ಮಾಡಿಕೊಂಡವರಿಗೆ ಮಾತ್ರ ಕಾರ್ಯಕ್ರಮಕ್ಕೆ ಪ್ರವೇಶ ನೀಡಲಾಗಿತ್ತು.

## ನಾಳೆ ಸುಜಯ್ ವಿಚಾರಣೆ

• **ಬೆಂಗಳೂರು:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ದತ್ತುಪುತ್ರ ಎಂದು ಹೇಳಿಕೊಂಡು ಅವರ ಹೆಸರಿನ ನಕಲಿ ಲೆಟರ್ ಹೆಡ್ ಹಾಗೂ ಕರ್ನಾಟಕ ರಾಜ್ಯ ಪಾಲರ ಕಚೇರಿಯ ಮುದ್ರೆಗಳನ್ನು ದುರ್ಬಳಕೆ ಮಾಡಿಕೊಂಡ ಆರೋಪ ಎದುರಿಸುತ್ತಿರುವ ಸುಜಯೇಂದ್ರ ಅಲಿಯಾಸ್ ಸುಜಯ್ ವಿರುದ್ಧದ ಪ್ರಕರಣ ಏ.30ರಂದು ವಿಚಾರಣೆಗೆ ಬರಲಿದೆ. ಪೊಲೀಸರು ಈಗಾಗಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಇದರಲ್ಲಿ ಆರೋಪಿಯ ಸ್ಫೋಟಕ ಮಾಹಿತಿ ಹೊರಬಂದಿವೆ ಹೊರಬಂದಿವೆ.



**ಏನಿದು ಪ್ರಕರಣ?** ಆರೋಪಿ ಸುಜಯೇಂದ್ರ, ತಾನು ಅಮಿತ್ ಶಾ ಅವರ ದತ್ತುಪುತ್ರ ಎಂದು ಹತ್ತಿರದ ವಲಯಗಳಲ್ಲಿ ನಂಬಿಸಿದ್ದ ಎನ್ನಲಾಗಿದೆ. ಈ ಪ್ರಭಾವವನ್ನು ಬಳಸಿಕೊಂಡು ವಿವಿಧ ನೇಮಕಾತಿಗಳು, ವರ್ಗಾವಣೆಗಳು ಮತ್ತು ಸರ್ಕಾರದ ಉನ್ನತ ಮಟ್ಟದ ಶಿಫಾರಸುಗಳಿಗಾಗಿ ಅಮಿತ್ ಶಾ ಅವರ ಹೆಸರಿರುವ ನಕಲಿ ಲೆಟರ್‌ಹೆಡ್‌ಗಳನ್ನು ಸೃಷ್ಟಿಸಿದ್ದ. ಅಷ್ಟೇ ಅಲ್ಲದೆ, ಕರ್ನಾಟಕ ರಾಜ್ಯಪಾಲರ ಹೆಸರಿನ ಲೆಟರ್‌ಹೆಡ್ ಮತ್ತು ನಕಲಿ ಸರ್ಕಾರಿ ಮುದ್ರೆಗಳನ್ನು ಬಳಸಿ ಹಲವು ಅಕ್ರಮ ಶಿಫಾರಸು ಪತ್ರಗಳನ್ನು ಸಿದ್ಧಪಡಿಸಿದ್ದ ಎಂಬ ಗಂಭೀರ ಆರೋಪ ಈತನ ಮೇಲಿದೆ. ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿ ಸುಜಯ್, ತಾನು ಪ್ರಭಾವಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಪತ್ರಗಳನ್ನು ಸಿದ್ಧಪಡಿಸಿ ವಿವಿಧ ಇಲಾಖೆಗಳಲ್ಲಿನ ನೇಮಕಾತಿ ಮತ್ತು ಶಿಫಾರಸುಗಳಿಗಾಗಿ ಬಳಸಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ತಿಳಿದುಬಂದಿದೆ.

# ಮುಂಬೈನಲ್ಲಿ ಉಗ್ರ ದಾಳಿ

ಪುಟ ೧➡ **ಗಂಭೀರ ಗಾಯ:** ಈ ದಾಳಿಯಲ್ಲಿ ಇಬ್ಬರೂ ಭದ್ರತಾ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬರ ಸ್ಥಿತಿ ಅತ್ಯಂತ ಗಂಭೀರ ವಾಗಿದೆ ಎಂದು ತಿಳಿದುಬಂದಿದೆ. ಆರಂಭದಲ್ಲಿ ಇದನ್ನು ಸಾಮಾನ್ಯ ಹಲ್ಲೆ ಪ್ರಕರಣವೆಂದು ದಾಖಲಿಸಲಾಗಿದ್ದರೂ, ತನಿಖೆ ಮುಂದುವರಿದಂತೆ ದಾಳಿಯ ಹಿನ್ನೆಲೆ ಮತ್ತು ವಿಧಾನ ಭದ್ರತಾ ಸಂಸ್ಥೆಗಳ ಗಮನ ಸೆಳೆದಿದೆ.

ಮುಂಬೈ ಪೊಲೀಸರ ಪ್ರಕಾರ, ಆರೋಪಿ ಪೂರ್ವನಿಯೋಜಿತವಾಗಿ ಪೀಡಿತರನ್ನು ಆಯ್ಕೆ ಮಾಡಿಕೊಂಡಿದ್ದಾನೆ ಎಂಬುದು ಸ್ಪಷ್ಟವಾಗುತ್ತಿದೆ. ಧಾರ್ಮಿಕ ಗುರುತಿನ ಆಧಾರದ ಮೇಲೆ ದಾಳಿ ನಡೆಸಲಾಗಿದೆ ಎಂಬ ಶಂಕೆ ಬಲಗೊಂಡಿದ್ದು, ಇದು ಇತ್ತೀಚಿನ ಕೆಲವು ಉಗ್ರ ದಾಳಿಗಳ ಮಾದರಿಯನ್ನು ಹೋಲುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ವಿಶೇಷವಾಗಿ ಪಹಲ್ಗಾಮ್‌ನಲ್ಲಿ ನಡೆದ ಘಟನೆಯಲ್ಲಿ ಪೀಡಿತರ ಗುರುತು ಪರಿಶೀಲಿಸಿ ದಾಳಿ ನಡೆಸಿದ ಘಟನೆಗೆ ಇದು ಹೋಲಿಕೆಯಾಗುತ್ತದೆ ಎಂಬುದನ್ನು ಭದ್ರತಾ ವಲಯಗಳು ಸೂಚಿಸುತ್ತಿವೆ.

ಪ್ರಕರಣವನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಯಂತ್ರಣದಳಕ್ಕೆ ಹಸ್ತಾಂತರಿಸಿದ ನಂತರ, ತನಿಖೆ ಬಹು ಮುಖವಾಗಿ ಮುಂದುವರಿದಿದೆ. ಪ್ರಾಥಮಿಕ ತನಿಖೆಯಲ್ಲಿ ಆರೋಪಿ ಆನ್‌ಲೈನ್ ಮೂಲಕ ಮೂಲಭೂತವಾದಿ ಸಿದ್ಧಾಂತಗಳಿಗೆ ಒಳಗಾಗಿದ್ದಾನೆ ಎಂಬ ಸುಳಿವುಗಳು ದೊರೆತಿವೆ. ವಿಶೇಷವಾಗಿ ಟೆಲಿಗ್ರಾಂ ವಾಹಿನಿಗಳ ಮೂಲಕ ಜಿಹಾದ್ ಹೆಸರಿನಲ್ಲಿ ಹಿಂಸೆಯನ್ನು ಪ್ರೇರೇಪಿಸುವ ವಿಷಯಗಳನ್ನು ಅವನು ವೀಕ್ಷಿಸಿದ್ದಾನೆ ಎನ್ನಲಾಗಿದೆ.

ಗಾಜಾ ಸೇರಿದಂತೆ ಜಾಗತಿಕ ಸಂಘರ್ಷಗಳ ಕುರಿತ ಉಲ್ಲೇಖಗಳು, ಜಿಹಾದ್ ಕುರಿತ ಟಿಪ್ಪಣಿಗಳು ಅವನ ಡಿಜಿಟಲ್ ಸಾಧನಗಳಲ್ಲಿ ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

**ತನಿಖೆ ತೀವ್ರ:** ಆರೋಪಿಯ ಮೀರಾ ರಸ್ತೆಯ ನಿವಾಸದಲ್ಲಿ ಶೋಧ ಕಾರ್ಯ ನಡೆಸಲಾಗಿದ್ದು, ಅವನ ಡಿಜಿಟಲ್ ಚಟುವಟಿಕೆಗಳು, ಸಂಪರ್ಕಗಳು ಹಾಗೂ ಇನ್ನಿತರ ಪ್ರಭಾವಿತರ ಸಾಧ್ಯತೆಗಳ ಬಗ್ಗೆ ಎಟಿಎಸ್ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ. ಪ್ರಕರಣದ ಮೂಲ ಉದ್ದೇಶ ಮತ್ತು ವ್ಯಾಪ್ತಿಯನ್ನು ಪತ್ತೆ ಹಚ್ಚುವುದು ಈಗ ಪ್ರಮುಖ ಗುರಿಯಾಗಿದೆ.

## ಕಿರುಸುದ್ದಿ

### ತಾವರೆಕೆರೆ ಸರ್ಕಾರಿ ಪೌಢಶಾಲೆಗೆ ನೂರು ಫಲಿತಾಂಶ





• **ತಾವರೆಕೆರೆ:** ನಂದಗುಡಿ ಹೋಬಳಿಯ ತಾವರೆಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ 2026ನೇ ಮಾರ್ಚ್‌ನಲ್ಲಿ ನಡೆದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಒಟ್ಟು 45 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿ ಶೇಕಡಾ 100ರಷ್ಟು ಫಲಿತಾಂಶ ಬಂದಿದೆಂದು ಮುಖ್ಯ ಶಿಕ್ಷಕಿ ಗುಲ್ಬಂದನ್ ತಾರಾ ತಿಳಿಸಿದ್ದಾರೆ.

ನಾಲ್ಕು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ 22 ವಿದ್ಯಾರ್ಥಿಗಳು, ಮೊದಲ ದರ್ಜೆ 19 ವಿದ್ಯಾರ್ಥಿಗಳು ದ್ವಿತಿಯ ದರ್ಜೆಹಾಗೂ ನಿಖಿತ್ ಫಾತಿಮಾ ಶೇ.90, ಸುಚಿತ್ರಾ ಶೇ.88, ಶಿವರಂಜಿನಿ ಶೇ.88, ರುಕ್ಮಿಣಿ ಶೇ.87, ಮಹಾಲಿಂಗಪ್ಪ ಶೇ.86 ಉತ್ತೀರ್ಣರಾಗಿ ಸರ್ಕಾರಿ ಶಾಲೆಗೆ ಕೀರ್ತಿತಂದಿದ್ದಾರೆ.

### ನಂದಗುಡಿ ರಾಮೇಗೌಡರಿಗೆ ಪ್ರಶಸ್ತಿ ಪ್ರದಾನ



• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ಎಂ.ರಾಮೇಗೌಡ ಅವರು ಕಳೆದ 18 ವರ್ಷದಿಂದ ಪತ್ರಿಕೋದ್ಯಮದಲ್ಲಿ ಮತ್ತು ಸತತವಾಗಿ ಮೂರು ಭಾರಿ ಗ್ರಾಪಂ ಸದಸ್ಯರಾಗಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಮೈಸೂರಿನ ಟ್ರೆಲ್ ಮ್ಯಾಗಜಿನ್ ಸಂಸ್ಥೆ ಹೈದರಾಬಾದಿನ ಖಾಸಗಿ ಸಂಭಾಗಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿದರು.

### ನಗರ ಪ್ರವಾಹ ತಡೆಗೆ ತಂಡ ರಚನೆ



• **ಬೆಂಗಳೂರು:** ಮುಂಗಾರು ಪೂರ್ವ ಸಿದ್ಧತೆಗಾಗಿ ಉಪವಿಭಾಗ ಮಟ್ಟದ ನಗರ ಪ್ರವಾಹ ನಿರ್ವಹಣಾ ತಂಡಗಳ ರಚನೆ ರಚನೆ ಮಾಡಲಾಗಿದೆ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಹೇಳಿದರು. ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಗಾಲದಲ್ಲಿ ಸಂಭವಿಸಬಹುದಾದ ಪ್ರವಾಹ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ತಡೆಯುವ ಹಾಗೂ ಪ್ರವಾಹ ಪರಿಸ್ಥಿತಿಗಳಿಗೆ ತುರ್ತಾಗಿ ಪ್ರತಿಕ್ರಿಯಿಸುವ ಉದ್ದೇಶದಿಂದ ಎಲ್ಲಾ ಉಪವಿಭಾಗಗಳಲ್ಲಿ ತಕ್ಷಣದಿಂದಲೇ ಉಪವಿಭಾಗ ಮಟ್ಟದ ನಗರ ಪ್ರವಾಹ ನಿರ್ವಹಣಾ ತಂಡ ರಚಿಸಲಾಗಿದೆ. ಪ್ರತಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ನೇತೃತ್ವದಲ್ಲಿ ಈ ತಂಡಗಳು ಕಾರ್ಯನಿರ್ವಹಿಸಲಿದ್ದು, ಪೂರ್ವಸಿದ್ಧತೆ, ಪ್ರವಾಹ ತಡೆ, ತುರ್ತು ಪರಿಸ್ಥಿತಿ ನಿರ್ವಹಣೆ ಹಾಗೂ ಮೂಲಸೌಕರ್ಯ ಪುನಃಸ್ಥಾಪನೆಗೆ ಪ್ರಮುಖ ಕ್ಷೇತ್ರ ಮಟ್ಟದ ಘಟಕಗಳಾಗಿ ಕಾರ್ಯನಿರ್ವಹಿಸಲಿವೆ ಎಂದು ಆಯುಕ್ತರು ತಿಳಿಸಿದ್ದಾರೆ. ಸಂಬಂಧಿತ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಒಟ್ಟಾರೆ ನೋಡಲ್ ಅಧಿಕಾರಿಯಾಗಿದ್ದು, ಉಪವಿಭಾಗದ ಕಿರಿಯ, ಸಹಾಯಕ ಎಂಜಿನಿಯರ್, ಬಿಡಬ್ಲ್ಯೂಎಸ್ಎಸ್‌ಬಿಯ ಉಪವಿಭಾಗ ಮಟ್ಟದ ಪ್ರತಿನಿಧಿ, ಬೆಸ್ಕಾಂನ ಉಪವಿಭಾಗ ಮಟ್ಟದ ಪ್ರತಿನಿಧಿ, ಉಪವಿಭಾಗ ವ್ಯಾಪ್ತಿಯ ಸಂಚಾರ ಪೊಲೀಸರು, ಅರಣ್ಯ ಅಧಿಕಾರಿ, ಆರೋಗ್ಯ ನಿರೀಕ್ಷಕರು, ಕಂದಾಯ ನಿರೀಕ್ಷಕರು, ವಿಪತ್ತು ನಿರ್ವಹಣೆ, ತುರ್ತು ಪ್ರತಿಕ್ರಿಯೆ ನೋಡಲ್ ಅಧಿಕಾರಿ ಸೇರಿದಂತೆ ಬಹು ಇಲಾಖೆಗಳನ್ನೊಳಗೊಂಡ ಸಮನ್ವಯ ತಂಡ ರಚಿಸಿ ಜವಾಬ್ದಾರಿಗಳನ್ನು ವಹಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆ.ಆರ್.ಮಾರುಕಟ್ಟೆ ನಿಲ್ದಾಣಕ್ಕೆ ಹೈಟೆಕ್ ಸ್ಪರ್ಶ | ಸಾರ್ವಜನಿಕರ ಸೇವೆಗೆ ಶೀಘ್ರ ಅವಕಾಶ

# ಅತ್ಯಾಧುನಿಕ ತಂತ್ರಜ್ಞಾನದ ಪಾರ್ಕಿಂಗ್ ವ್ಯವಸ್ಥೆ




- ಪಾರ್ಕಿಂಗ್ ಶುಲ್ಕವನ್ನು ಗಂಟೆ ಲೆಕ್ಕದಲ್ಲಿ ಪಾವತಿಸಬೇಕು.
- ದ್ವಿಚಕ್ರವಾಹನಕ್ಕೆ ಗಂಟೆ ಲೆಕ್ಕದಲ್ಲಿ 15 ರೂ.ನಿಂದ 175 ರೂ.ವರೆಗೆ ನಿಗದಿಪಡಿಸಲಾಗಿದೆ.
- ನಾಲ್ಕು ಚಕ್ರದ ವಾಹನಗಳಿಗೆ ಗಂಟೆ ಲೆಕ್ಕದಲ್ಲಿ 25 ರೂ.ನಿಂದ 275 ರೂ.ವರೆಗೆ ನಿಗದಿಪಡಿಸಲಾಗಿದೆ.
- ಮಾಸಿಕ ಪಾಸ್ ಸಹ ಲಭ್ಯವಿದೆ., ಕಾರ್‌ಗೆ 5000, ದ್ವಿಚಕ್ರ ವಾಹನಕ್ಕೆ 1,500 ನಿಗದಿಪಡಿಸಲಾಗಿದೆ.

• **ಬೆಂಗಳೂರು:** ಇತ್ತೀಚಿಗಿನ ದಿನದ ವರೆಗೂ ಗಬ್ಬು ನಾರುತ್ತಿದ್ದ ಬೆಂಗಳೂರು ನಗರದ ಹೃದಯಭಾಗವಾದ ಕೃಷ್ಣ ರಾಜೇಂದ್ರ (ಕೆ.ಆರ್. ಮಾರುಕಟ್ಟೆ) ಮಾರುಕಟ್ಟೆಯ ಪಾರ್ಕಿಂಗ್ ಸ್ಥಳ ಈಗ ಅತ್ಯಾಧುನಿಕ ತಂತ್ರಜ್ಞಾದ ಪಾರ್ಕಿಂಗ್ ಸ್ಥಳವಾಗಿ ಮಾರ್ಪಟ್ಟಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಕೆ.ಆರ್.ಮಾರುಕಟ್ಟೆ ಪಾರ್ಕಿಂಗ್ ಸಮಸ್ಯೆಗೆ ಈಗ ಹೈಟೆಕ್ ಸ್ಪರ್ಶ ಸಿಕ್ಕಿದ್ದು, ಸುಮಾರು 6 ಕೋಟಿ ರೂ.ವೆಚ್ಚದಲ್ಲಿ ನವೀಕರಣಗೊಂಡಿರುವ ಪಾರ್ಕಿಂಗ್ ತಾಣವು ದುಬೈ ಮಾದರಿಯ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಉದ್ಘಾಟನೆ ಸಜ್ಜಾಗಿದ್ದು, ಶೀಘ್ರದಲ್ಲಿ ಸಾರ್ವಜನಿಕರ ಸೇವೆಗೆ ಮುಕ್ತವಾಗಲಿದೆ.

ಪಾರ್ಕಿಂಗ್ ಸಂಕೀರ್ಣದ ಹೊಣೆಯನ್ನು ರೈಟ್ ಪಾರ್ಕಿಂಗ್ ಸಂಸ್ಥೆಗೆ 10 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಇಲ್ಲಿ ಕೇವಲ ವಾಹನ ನಿಲುಗಡೆ ಮಾತ್ರವಲ್ಲದೆ, ವಾಹನ ಸವಾರರಿಗೆ ಹಲವು ಸುಧಾರಿತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.ಭದ್ರತೆಗಾಗಿ 62ಕ್ಕೂ ಹೆಚ್ಚು ಕೃತಕ ಬುದ್ಧಿಮತ್ತೆ ಆಧಾರಿತ ಕ್ಯಾಮೆರಾಗಳ ಅಳವಡಿಸಲಾಗಿದೆ.ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ 12 ಪ್ಯಾನಿಕ್ ಬಟನ್‌ಗಳ ವ್ಯವಸ್ಥೆ ಮಾಡಲಾಗಿದೆ. ಶುದ್ಧ ಕುಡಿಯುವ ನೀರು, ಸುಸಜ್ಜಿತ ಶೌಚಾಲಯ, ಮತ್ತು ವಿಶ್ರಾಂತಿ ಪಡೆಯಲು 100ಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಸಹ ಇದೆ. ಅಲ್ಲದೆ ಇ.ವಿ ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಲಾಗಿದ್ದು,ಒಂದು ಬಾರಿಗೆ ಏಳು ಕಾರ್‌ಗಳನ್ನು ಚಾರ್ಜ್ ಮಾಡಬಹುದಾಗಿದೆ. ಕಾರು ಹಾಗೂ ಜೀಪು 200 ಕಾರು ಹಾಗೂ ಜೀಪು ಹಾಗೂ 400 ದ್ವಿಚಕ್ರ ವಾಹನಗಳನ್ನು ಏಕಕಾಲದಲ್ಲಿ ನಿಲ್ಲಿಸಬಹುದಾಗಿದೆ.

• **ಟಿಕೆಟ್ ಲೆಸ್ ವ್ಯವಸ್ಥೆ:** ಪಾರ್ಕಿಂಗ್ ಶುಲ್ಕವನ್ನು ಫಾಸ್ಟ್ ಟ್ಯಾಗ್ ಅಥವಾ ಯುಪಿಐ ಮೂಲಕ ಪಾವತಿಸಬಹುದಾಗಿದೆ. ವಾಹನಗಳ ನಂಬರ್ ಪ್ಲೇಟ್‌ನ್ನು ಕ್ಯಾಮೆರಾ ಮೂಲಕ ಗುರುತಿಸಿ ಸ್ವಯಂಚಾಲಿತವಾಗಿ ಗೇಟ್ ತೆರೆಯುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಹಿಳೆಯರಿಗೆ ಪ್ರತ್ಯೇಕ ಸ್ಥಳ: ಪಾರ್ಕಿಂಗ್ ಸ್ಥಳದಲ್ಲಿ ಮಹಿಳೆಯರಿಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿದ್ದು,ಮಹಿಳೆಯರಿಗೆ ಮತ್ತು ಅಂಗವಿಕಲರ ವಾಹನಗಳನ್ನು ನಿಲುಗಡೆ ಮಾಡಲು ಪ್ರತ್ಯೇಕ ಸ್ಥಳಗಳನ್ನು ಮೀಸಲಿಡಲಾಗಿದೆ.



### ಇತಿಹಾಸ ಪ್ರತಿಬಿಂಬಿಸುವ ಛಾಯಾಚಿತ್ರಗಳು

ಕೆ.ಆರ್.ಮಾರುಕಟ್ಟೆ ಪಾರ್ಕಿಂಗ್ ತಾಣ ಕೇವಲ ಸಿಮೆಂಟ್ ಕಟ್ಟಡವಾಗಿ ಉಳಿದಿಲ್ಲ. ಗೋಡೆಗಳ ಮೇಲೆ ಮಾರುಕಟ್ಟೆಯ ಇತಿಹಾಸವನ್ನು ಸಾರುವ ಚಿತ್ರಗಳನ್ನು ರಚಿಸಲಾಗಿದೆ. ಪ್ರವೇಶ ದ್ವಾರದಲ್ಲಿ ಕೆಂಪೇಗೌಡ ಮತ್ತು ಕೃಷ್ಣರಾಜೇಂದ್ರರ ಪ್ರತಿಮೆ ಇಡಲಾಗಿದೆ. ಗೋಡೆಗಳ ಮೇಲೆ ಮೈಸೂರು ಅರಮನೆ ಹಾಗೂ ಹಂಪಿಯ ಕಲ್ಲಿನ ರಥದ ಚಿತ್ರಗಳನ್ನು ಬಿಡಿಸಲಾಗಿದೆ. ಅಲ್ಲದೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಭಾವಚಿತ್ರಗಳನ್ನು ಬಿಡಿಸಲಾಗಿದ್ದು, ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸಿವೆ.

> ನಿಮ್ಮ ವಾಹನ ಹಾಗೂ ನಿಮ್ಮ ಸುರಕ್ಷತೆ ನಮ್ಮ ಮೊದಲ ಆದ್ಯತೆಯಾಗಿದೆ. ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಎಐ ಕ್ಯಾಮೆರಾಗಳ ಕಣ್ಗಾವಲು ಇರಲಿದೆ. ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿದ್ದೇವೆ. ಹಿಂದೆ ಮಳೆ ಬಂದಾಗ ಪಾರ್ಕಿಂಗ್ ಪ್ರದೇಶ ಕೆರೆಯಂತಾಗುತ್ತಿತ್ತು. ಇದನ್ನು ತಡೆಯಲು ಬೃಹತ್ ಸಂಪ್‌ಗಳನ್ನು ನಿರ್ಮಿಸಲಾಗಿದೆ. ನೀರನ್ನು ತಕ್ಷಣವೇ ಹೊರಹಾಕಲು ಹೈ-ಪವರ್ ಮೋಟಾರ್ ಅಳವಡಿಸಲಾಗಿದೆ.
>
> ■ **ಕುಮಾರ್,**
> ರೈಟ್ ಪಾರ್ಕಿಂಗ್ ಸಂಸ್ಥೆ ನಿರ್ದೇಶಕ



ದೊಡ್ಡಬಳ್ಳಾಪುರ ವಕೀಲರ ವಾರ್ಷಿಕ ಕ್ರೀಡಾಕೂಟ ಪ್ರಶಸ್ತಿ ವಿತರಣೆ

## ಬಸವಣ್ಣರ ಕಾಯಕ ಸೇವೆಯೇ ಮಾದರಿ



• **ದೊಡ್ಡಬಳ್ಳಾಪುರ:** ಬಸವಣ್ಣನವರು ಕಾಯಕವೇ ಕೈಲಾಸ ಎನ್ನುತ್ತಾ ಜಾತಿ ಮತಗಳ ಭೇದವನ್ನು ತೊಡೆದು ಹಾಕಲು ಅವರ ಕಾಲಘಟ್ಟದಲ್ಲಿ ಪ್ರಾರಂಭಿಸಿದರೆಂದು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್. ರೇಖಾ ತಿಳಿಸಿದರು.

ತಾಲೂಕು ವಕೀಲರ ಸಂಘ ಹಾಗೂ ನ್ಯಾಯಾಂಗ ಇಲಾಖೆಯಿಂದ ವಾರ್ಷಿಕ ಕ್ರೀಡಾಕೂಟ 2026-27ರ ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್ ರಾಮ್, ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಬಸವ ಜಯಂತಿ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿ, ಬಿ.ಆರ್. ಅಂಬೇಡ್ಕರ್ ಅವರು ದೀನ ದಲಿತರ ಪರ, ಎಲ್ಲಾ ವರ್ಗದವರ ಪರ, ನೊಂದವರ ಪರ ಧ್ವನಿಯಾಗಿ ಸದೃಢ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿಯನ್ನ ಹಾಕಿಕೊಟ್ಟವರು ಎಂದು ಸ್ಮರಿಸಿದರು.

ಡಾಕ್ಟರ್ ಬಾಬು ಜಗಜೀವನ ರಾಮ್ ಅವರು ರೈತಪರ ಅವರ ಕಾಳಜಿಯನ್ನ ಸ್ಮರಿಸಿದ ಅವರು. ಶಿವಕುಮಾರ ಸ್ವಾಮೀಜಿಯನ್ನು ನಡೆದಾಡುವ ದೇವರು ಎಂದು ಕರೆಯುತ್ತಿದ್ದರು. ಅನ್ನದಾಸೋಹ ಹಾಗೂ ವಿದ್ಯಾದಾನ ಎಲ್ಲ ವರ್ಗದವರಿಗೂ ತಲುಪುವಂತೆ ನೋಡಿಕೊಂಡವರು.

ಇದೇ ವೇಳೆ ದೊಡ್ಡಬಳ್ಳಾಪುರ ವಕೀಲರ ಸಂಘದ ಹಾಗೂ ನ್ಯಾಯಾಲಯದ ಮೂಲ ಭೂತಸೌಕರ್ಯಗಳಕೊರತೆಯನ್ನು ಬಗೆಹರಿಸಿ ಕೊಡುವ ನಿಟ್ಟಿನಲ್ಲಿ ಭರವಸೆ ನೀಡಿದರು.

ಬಳಿಕ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿಯನ್ನು ವಿತರಿಸಿದರು. ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನಿರ್ಮಲಾ ಕೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಚ್.ಎ.ಶಿಲ್ಪಾ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ ಜೆ.ಎಸ್, ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ದಾಸರಿ ಕ್ರಾಂತಿ ಕಿರಣ್, ಒಂದನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶರಾದ ಪ್ರೀತಿ ಕೆ, ಸಂಘದ ಅಧ್ಯಕ್ಷ ರೇಣುಕಾ ಮೂರ್ತಿ, ಪ್ರಧಾನ ಕಾರ್ಯದರ್ಶಿ, ಬಿ.ಕೆ. ಕನಕ ರಾಜ್, ಉಪಾಧ್ಯಕ್ಷ ಜಗನ್ನಾಥ್ ಕೆ., ಖಜಾಂಚಿ ಗೀತಾ ಆರ್, ಜಂಟಿ ಕಾರ್ಯದರ್ಶಿ ನರಸಿಂಹ ಮೂರ್ತಿ ಸೇರಿದಂತೆ ಸಂಘದ ಪದಾಧಿಕಾರಿಗಳು,ಹಿರಿಯವಕೀಲರು,ನ್ಯಾಯಾಂಗದ ಸಿಬ್ಬಂದಿ ಹಾಜರಿದ್ದರು.

ಪರಿಸರ ಪ್ರೇಮಿಗಳು, ಸ್ಥಳೀಯ ನಿವಾಸಿಗಳ ಆಕ್ರೋಶ

## ಹಲಸೂರು ಕೆರೆಯಲ್ಲಿ ಅವೈಜ್ಞಾನಿಕ ಕಾಮಗಾರಿ



• **ಬೆಂಗಳೂರು** : ನಗರದ ಐತಿಹಾಸಿಕ ಕೆರೆಗಳಲ್ಲಿ ಒಂದಾದ ಹಲಸೂರು ಕೆರೆಯ ಪುನರುಜ್ಜೀವನದ ಹೆಸರಿನಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿಗಳು ಪರಿಸರ ಪ್ರೇಮಿಗಳು ಹಾಗೂ ಸ್ಥಳೀಯ ನಿವಾಸಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ನೈಸರ್ಗಿಕ ಜಲಮೂಲವಾಗಿದ್ದ ಕೆರೆಯು ಈಗ ಕೇವಲ ಕಾಂಕ್ರೀಟ್ ಮಯವಾಗಿ ಮಾರ್ಪಾಡಾಗುತ್ತಿದ್ದು, ಕೆರೆ ಈಗ ತನ್ನ ನೈಜ ಸೌಂದರ್ಯವನ್ನು ಕಳೆದುಕೊಳ್ಳುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಅತಿಯಾದ ಕಾಂಕ್ರೀಟ್ ಮತ್ತು ಸ್ಟೀಲ್ ಬಳಕೆ ಮಾಡಲಾಗುತ್ತಿದೆ. ಕೆರೆಯ ನೈಸರ್ಗಿಕ ತಳ ಮತ್ತು ಏರಿಗಳನ್ನು ಧ್ವಂಸಗೊಳಿಸಿ ಸತತವಾಗಿ ಕಾಂಕ್ರೀಟ್ ಗೋಡೆಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದಾಗಿ ಜಲಚರಗಳ ಆವಾಸಸ್ಥಾನ ಮತ್ತು ಕೆರೆಯ ಜೈವಿಕ ವೈವಿಧ್ಯತೆ ಸಂಪೂರ್ಣವಾಗಿ ನಾಶವಾಗುತ್ತಿದೆ. ಮಣ್ಣಿನ ನೈಸರ್ಗಿಕ ಹೀರಿಕೊಳ್ಳುವ ಶಕ್ತಿ ಕುಂಠಿತಗೊಂಡು, ಅಂತರ್ಜಲ ವೃದ್ಧಿಗೆ ಅಡ್ಡಿಯಾಗುವ ಸಾಧ್ಯತೆ ದಟ್ಟವಾಗಿದೆ ಎಂದು ಕೆರೆ ಪ್ರೇಮಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

**ಅಪಾಯದ ಅಂಚಿನಲ್ಲಿ ಮರಗಳು:** ಕಾಮಗಾರಿಯ ಭರಾಟೆಯಲ್ಲಿ ಕೆರೆಯ ಸುತ್ತಲಿರುವ ಬೃಹತ್ ಮರಗಳ ಬೇರುಗಳನ್ನು ಯಾವುದೇ ಮುನ್ನೆಚ್ಚರಿಕೆ ಇಲ್ಲದೆ ಅಗೆಯಲಾಗಿದೆ. ಮಣ್ಣು ಸಡಿಲಗೊಂಡು ಬೇರುಗಳು ಹೊರಗೆ ಬಂದಿದ್ದು, ಮುಂದಿನ ಮುಂಗಾರು ಮಳೆಯ ಗಾಳಿಗೆ ಈ ಮರಗಳು ಧರೆಗುರುಳುವ ಆತಂಕ ಎದುರಾಗಿದೆಂದು ಸಾರ್ವಜನಿಕರು ಹೇಳುತ್ತಿದ್ದಾರೆ.

ನಾವು ದಶಕಗಳಿಂದ ಈ ಕೆರೆಯನ್ನು ನೋಡುತ್ತಿದ್ದೇವೆ. ಆದರೆ ಈಗ ನಡೆಯುತ್ತಿರುವ ಕಾಮಗಾರಿ ಕೆರೆಯನ್ನು ಉಳಿಸುವ ಬದಲು ಕೊಂದಂತೆ ಭಾಸವಾಗುತ್ತಿದೆ. ಅಧಿಕಾರಿಗಳಿಗೆ ಪರಿಸರ ಕಾಳಜಿಗಿಂತ ಕಾಂಕ್ರೀಟ್ ಸುರಿಯುವುದರಲ್ಲೇ ಹೆಚ್ಚಿನ ಆಸಕ್ತಿ ಇದ್ದಂತಿದೆ, ಎಂದು ಸ್ಥಳೀಯ ವಾಯುವಿಹಾರಿಗಳು ಹತಾಶೆ ವ್ಯಕ್ತಪಡಿಸಿದ್ದಾರೆ.

**ಕಾಂಕ್ರೀಟ್ ಮಾದರಿಯಾಗದಿರಲಿ:** ನಗರದ ಇತರ ಕೆರೆಗಳ ಪುನರುಜ್ಜೀವನಕ್ಕೂ ಕಾಂಕ್ರೀಟ್ ಮಾದರಿಯನ್ನು ಅನುಸರಿಸುವ ಅಪಾಯವಿದೆ. ಹಲಸೂರು ಕೆರೆಯ ಇಂದಿನ ಸ್ಥಿತಿ ಇತರ ಕೆರೆಗಳಿಗೆ ಮಾದರಿಯಾಗಬಾರದು. ಕೂಡಲೇ ಸರ್ಕಾರ ಮತ್ತು ಜಿಬಿಎ ಈ ಬಗ್ಗೆ ಗಮನಹರಿಸಿ, ಪರಿಸರ ಪೂರಕವಾದ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕಿದೆ.ಬೆಂಗಳೂರಿನ ಹೆಮ್ಮೆಯ ಗುರುತಾದ ಕೆರೆಗಳನ್ನು ಕಾಂಕ್ರೀಟ್ ಕಾಡಾಗಿಸದೆ, ನೈಸರ್ಗಿಕವಾಗಿಯೇ ಉಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ.

ಕಳೆದ 15 ತಿಂಗಳಲ್ಲಿ 421 ಶಿಶು, 12 ತಾಯಂದಿರು ಸಾವು

## ಚೆಲುವಾಂಬಾ ಆಸ್ಪತ್ರೆಯಲ್ಲಿ ಮರಣಮೃದಂಗ

• **ಮೈಸೂರು:** ಪ್ರಸೂತಿ, ಸ್ತ್ರೀರೋಗ ಮತ್ತು ಮಕ್ಕಳಿಗೆ ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ಹೆಸರುವಾಸಿಯಾಗಿರುವ ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಕಳೆದ 15 ತಿಂಗಳ ಅವಧಿಯಲ್ಲಿ 421 ಶಿಶುಗಳು, 12 ತಾಯಂದಿರು ಮೃತಪಟ್ಟಿರುವುದು ಕಂಡು ಬಂದಿದೆ.

ತಾಯಿ ಮತ್ತು ಮಗುವಿಗೆ ಗುಣಮಟ್ಟದ ಚಿಕಿತ್ಸೆ ನೀಡುವುದು, ಹೆರಿಗೆ ಸಂದರ್ಭ ತಾಯಿ ಮತ್ತು ಶಿಶು ಮರಣಪ್ರಮಾಣವನ್ನು ತಗ್ಗಿಸುವಸಲುವಾಗಿ 1880ರಲ್ಲಿ ಮೈಸೂರು ಅರಸರು ನಿರ್ಮಾಣ ಮಾಡಿದ ಚೆಲುವಾಂಬ ಆಸ್ಪತ್ರೆ, ಮೈಸೂರು ಹಾಗೂ ಅದರ ಸುತ್ತಮುತ್ತಲಿನ ಜಿಲ್ಲೆಗಳಾದ ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸುತ್ತಲಿನ ಐದಾರು ಜಿಲ್ಲೆಗಳ ಜನರಿಗೆ ಆರೋಗ್ಯ ಸೇವೆ ನೀಡುತ್ತಾ ಬಂದಿದೆ.

ಈ ನಡುವೆ ವೈದ್ಯಕೀಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕೊರತೆ, ಹೊರ ಜಿಲ್ಲೆ ರೋಗಿಗಳ ಒತ್ತಡ ಸೇರಿದಂತೆ ಹತ್ತಾರು ಕಾರಣಗಳಿಂದ 2025ರ ಜನವರಿಯಿಂದ ಈವರೆಗೆ ಆಸ್ಪತ್ರೆಯಲ್ಲಿ 421 ನವಜಾತ ಶಿಶುಗಳು ಅಸುನೀಗಿವೆ. 12 ತಾಯಂದಿರು ಮೃತಪಟ್ಟಿರುವ ಪ್ರಕರಣ ನಡೆದಿದೆ. ಇದು ಇಡೀ ಜಿಲ್ಲೆಯನ್ನೇ ಬೆಚ್ಚಿಬೀಳಿಸಿದೆ.

ಇಡೀ ರಾಜ್ಯಕ್ಕೆ ಹೋಲಿಕೆ ಮಾಡಿದರೆ ಮೈಸೂರು ಜಿಲ್ಲೆ ಶಿಶು ಮರಣ ಪ್ರಮಾಣದಲ್ಲಿ ಕಡಿಮೆ ಇದೆ. ಆದರೆ ಆಸ್ಪತ್ರೆಯ ಎಸ್‌ಎನ್‌ಸಿಯು (ಸಿಕ್ ನ್ಯೂಬಾರ್ನ್ ಕೇರ್ ಯುನಿಟ್)ಗೆ ದಾಖಲಾದ 3,486 ಶಿಶುಗಳ ಪೈಕಿ 421 ಶಿಶುಗಳು ಮರಣಹೊಂದಿವೆ.

ಈ ಪ್ರಮಾಣದಲ್ಲಿ ಶಿಶುಗಳ ಮರಣ ನಿರಂತರವಾಗಿ ಸಂಭವಿಸುತ್ತಿದ್ದರೂ, ಅದನ್ನು ತಡೆಯುವಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಜಿಲ್ಲಾಡಳಿತ ವಿಫಲವಾಗಿರುವುದು ಜನತೆಯ ಆಕ್ರೋಶಕ್ಕೆ ಕಾರಣವಾಗಿದೆ.

ಪಿ.ರಂಗನಾಥಪುರದಲ್ಲಿ ಅಂಬೇಡ್ಕರ್, ಜಗಜೀವನರಾಂ ಜಯಂತಿ

## ಸಂವಿಧಾನ ಓದು ಎಲ್ಲರ ಹೊಣೆ



• **ದೇವನಹಳ್ಳಿ:** ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅಧ್ಯಯನ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಸಮಾಜದ ಬೆಳವಣಿಗೆಗೆ ಅಂಬೇಡ್ಕರ್ ಅವರು, ಜ್ಞಾನಾರ್ಜನೆಗೆ ತೋರಿದ ಆಸಕ್ತಿ, ಸಂಪನ್ಮೂಲಗಳನ್ನು ಬಳಸಿಕೊಂಡ ಬಗೆ, ಅನುಕರಣೀಯ ಮತ್ತು ಆದರ್ಶವಾಗಿದೆ ಎಂದು ಕರ್ನಾಟಕ ದಲಿತ ಜನಸೇನೆ ರಾಜ್ಯಾಧ್ಯಕ್ಷ ಟಿ.ಭರತ್ ಹೇಳಿದರು.

ತಾಲೂಕಿನ ಪಿ.ರಂಗನಾಥಪುರ ಗ್ರಾಮದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಡಾ.ಬಾಬು ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಶಿಕ್ಷಣವನ್ನು ಅವರು ಉಪಯೋಗಿಸಿಕೊಂಡ ರೀತಿ, ದೇಶಕ್ಕೆ ತೋರಿದ ಗೌರವ, ಮತ್ತು ದೇಶಪ್ರೇಮ ಹಾಗೂ ಇಡೀ ಭಾರತವನ್ನು ಸಮಗ್ರವಾಗಿ ನೋಡಿದ ಪರಿ, ಶ್ಲಾಘನೀಯವಾಗಿದೆಂದರು.

ಈ ದೇಶದಲ್ಲಿ ಎಲ್ಲವೂ ಚುನಾವಣೆ ಆಧಾರಿತವಾಗಿ, ಚುನಾವಣೆ ಗೆಲ್ಲುವುದೇ ಎಲ್ಲಾ ಚಟುವಟಿಕೆಗಳ ಅಭಿಪ್ರಾಯವಾಗಿರುವ ಸಂದರ್ಭವಾಗಿದೆ. ವಿದ್ಯಾವಂತರು, ವೈಚಾರಿಕ ನಿಲುವಿನಿಂದ ಯೋಚಿಸದೇ ಜಾತಿ, ಧರ್ಮ, ಮತ, ಪಕ್ಷ, ಪ್ರಾಂತ, ಲಿಂಗ ಎಂಬ ಸ್ವಯಂ ಸ್ತರಗಳ ಮಧ್ಯ ಸಿಲುಕಿಕೊಂಡು, ಪ್ರಜಾಪ್ರಭುತ್ವವನ್ನು ಚುನಾವಣೆಗಳಲ್ಲಿ ಮಾತ್ರ ಕಾಣ ಬಯಸುತ್ತಿರುವ ನಾಗರಿಕ ಸಮಾಜದ ಪರಿಸ್ಥಿತಿಯಲ್ಲಿ, ಡಾ. ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದ ಅರಿವಿನೊಂದಿಗೆ ದೇಶದ ಸಮಸ್ಯೆಗಳಿಗೆ ಸೂಕ್ತ ಉತ್ತರ ಕಂಡುಕೊಳ್ಳುವ ಪ್ರಯತ್ನವಾಗಬೇಕು ಎಂದರು.

ಗೊಡ್ಡುಮುದ್ದೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಜಗದೀಶ್ ಮಾತನಾಡಿ, ನಾವೆಲ್ಲರೂ ಸಹೋದರತೆಯಿಂದ, ಸಮಾನತೆಯಿಂದ ಸಹಬಾಳ್ವೆ ನಡೆಸಬೇಕು, ಸಮಾಜದಲ್ಲಿ ಮುಖ್ಯವಾಹಿನಿಗೆ ಬರಬೇಕು ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಅದನ್ನು ನಾವೆಲ್ಲರೂ ಸಾಕಾರಗೊಳಿಸಬೇಕು. ಮಕ್ಕಳಿಗೆ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಬೋಧನೆ ಮಾಡಬೇಕು ಎಂದರು.

ದಲಿತ ಸಂಘರ್ಷ ಸಮಿತಿಯ ಚಿಕ್ಕಬಳ್ಳಾಪುರ ಜಿಲ್ಲಾ ಸಂಚಾಲಕ ಎನ್.ಎ.ವೆಂಕಟೇಶ್ ಮಾತನಾಡಿ, ಸಮಾಜದಲ್ಲಿ ಸಮಾನತೆ, ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಜೀವನಪೂರ್ತಿ ಹೋರಾಡಿದ ಮಹಾನ್ ನಾಯಕ ಡಾ. ಬಾಬು ಜಗಜೀವನರಾಮ್ ಅವರು. ಅವರೂ ಕೂಡಾ ಅಂಬೇಡ್ಕರರಂತೆ ಅಸ್ಪೃಶ್ಯತೆಯ ನೋವನ್ನು ಕಂಡವರೆಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಕೇವಲ ಒಂದು ವ್ಯಕ್ತಿಯಲ್ಲ, ಅವರೊಂದು ಶಕ್ತಿಯಾಗಿದ್ದಾರೆ. ಅಸ್ಪೃಶ್ಯತೆಯ ನಿವಾರಣೆಗಾಗಿ ಅವರು ಪಟ್ಟಂತಹ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ, ಪ್ರತಿಯೊಂದು ಸಮುದಾಯಗಳೂ ಅಂಬೇಡ್ಕರ್ ಅವರ ಬಗ್ಗೆ ಅಧ್ಯಯನ ಮಾಡಬೇಕು. ಎಲ್ಲಾ ಸಮುದಾಯಗಳೊಟ್ಟಿಗೆ ಸಮನ್ವಯತೆಯಿಂದ ಬದುಕು ಕಟ್ಟಿಕೊಳ್ಳುವಂತಹ ಕೆಲಸವನ್ನು ನಾವೆಲ್ಲರೂ ಮಾಡಬೇಕು ಎಂದರು. ಅಂಬೇಡ್ಕರ್ ಲೋಗೋ ಬಿಡುಗಡೆ ಮಾಡಿದರು. ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು.

ಮುಖಂಡರಾದ ನಾಗನರಸಿಂಹ, ಕಾಂಗ್ರೆಸ್ ಮುಖಂಡ ನಟರಾಜ್, ಮನೋಹರ್, ನರಸಾಪುರ ಲೋಕೇಶ್, ರಾಜ್ ಕುಮಾರ್, ಬಳುವನಹಳ್ಳಿ ರವಿಕುಮಾರ್, ಮೂರ್ತಿ, ನಾರಾಯಣಸ್ವಾಮಿ, ಎನ್.ಗಜೇಂದ್ರ, ದೇವರಾಜ್ ಮುಂತಾದವರಿದ್ದರು.

## ವೇಶ್ಯಾವಾಟಿಕೆ: ಆರು ಮಂದಿ ವಿದೇಶಿ ಮಹಿಳೆಯರ ಬಂಧನ

• **ಬೆಂಗಳೂರು:** ಕೋರಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕವಾಗಿ ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿದ್ದ ಆರು ಮಂದಿ ವಿದೇಶಿ ಮಹಿಳೆಯರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಏ.24ರಂದು ಲಭ್ಯವಾದ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಈ ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ. ಕೋರಮಂಗಲದ ಮಡಿವಾಳ ಚೆಕ್‌ಪೋಸ್ಟ್ ಸಮೀಪವಿರುವ ಬಸ್ ನಿಲ್ದಾಣದ ಫುಟ್‌ಪಾತ್ ಮೇಲೆ ನಿಂತಿದ್ದ ಈ ವಿದೇಶಿ ಮಹಿಳೆಯರು, ರಸ್ತೆಯಲ್ಲಿ ಓಡಾಡುವ ಪುರುಷರನ್ನು ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಾ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದರು. ಈ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿ, ಕೂಡಲೇ ಕಾರ್ಯಪ್ರವೃತ್ತರಾಗಿ ಆರು ಮಹಿಳೆಯರನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತ ಮಹಿಳೆಯರನ್ನು ಪಾಸ್‌ಪೋರ್ಟ್ ಮತ್ತು ವೀಸಾಗಳ ಬಗ್ಗೆ ವಿಚಾರಿಸಿದಾಗ, ಅವರು ಯಾವುದೇ ದಾಖಲೆಗಳನ್ನು ಒದಗಿಸಲು ವಿಫಲರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಕಾನೂನು ಕ್ರಮಕ್ಕಾಗಿ ಆರೋಪಿಗಳನ್ನು ಸಿಸಿಬಿ ಪೊಲೀಸರು ಕೋರಮಂಗಲ ಪೊಲೀಸ್ ಠಾಣೆಗೆ ಹಾಜರುಪಡಿಸಿದ್ದಾರೆ. ಪ್ರಸ್ತುತ ಕೋರಮಂಗಲ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಯನ್ನು ಮುಂದುವರೆಸಿದ್ದಾರೆ.

ವಿವಿಧ ಕನ್ನಡಪರ ಸಂಘಟನೆಗಳಿಂದ ಆಕ್ರೋಶ

## ನಟ ಚೇತನ್ ಅಹಿಂಸಾ ವಿರುದ್ಧ ದೂರು



• **ದೊಡ್ಡಬಳ್ಳಾಪುರ:** ವರನಟ ಡಾ.ರಾಜ್ ಕುಮಾರ್ ಸಮಾಧಿಗೆ ಜಾಗ ನೀಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ನಟ ಚೇತನ್ ಅಹಿಂಸಾ ವಿರುದ್ಧ ಕನ್ನಡಪರ ಸಂಘಟನೆಗಳು ಪೊಲೀಸರಿಗೆ ದೂರು ದಾಖಲಿಸಿವೆ.

ಡಾ.ರಾಜ್ ಕುಮಾರ್ ಸಮಾಧಿಗೆ ಸರ್ಕಾರ 2.5 ಎಕರೆ ಜಾಗ ನೀಡಿರುವುದಕ್ಕೆ ನಟ ಚೇತನ್‌ಅಹಿಂಸಾ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿದ್ದರು. ಸರ್ಕಾರ ಸಾರ್ವಜನಿಕರ ಉಪಯೋಗಕ್ಕೆ ಭೂಮಿ ಹಂಚಬೇಕು. ಮತಗಳ ಉದ್ದೇಶದಿಂದ ಹಂಚಬಾರದು ಎಂದು ಪೋಸ್ಟ್ ಹಾಕಿದ್ದರು. ನಟ ಚೇತನ್ ಅಹಿಂಸಾ ವಿರುದ್ಧ ಡಾ.ರಾಜ್ ಕುಮಾರ್ ಅಭಿಮಾನಿಗಳು, ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ. 'ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಅಮರೇಶ್ ಗೌಡ ಅವರಿಗೆ ಚೇತನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಾಗೂ ಗಡಿಪಾರು ಮಾಡುವಂತೆ ಒತ್ತಾಯಿಸಿವೆ.

ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದ ತಾಲೂಕು ಅಧ್ಯಕ್ಷ ಸು.ನರಸಿಂಹಮೂರ್ತಿ, ಕನ್ನಡಪರ ಸಂಘಟನೆಗಳ ಮುಖಂಡರಾದ ತ.ನ.ಪ್ರಭುದೇವ, ಸಂಜೀವನಾಯ್ಕ್, ರಾಜಘಟ್ಟರವಿ, ಡಿ.ಪಿ.ಆಂಜನೇಯ, ಪ್ರಮಿಳಾ ಮಹದೇವ್, ಪರಮೇಶ್, ಚೌಡರಾಜ್, ರಮೇಶ್, ಜನಪರ ಮಂಜು, ಗುರು, ನವೀನ್, ಸೂರಿ, ಮಂಜು, ಮನು, ನಾಗಣ್ಣ ಮತ್ತಿತರರಿದ್ದರು.

ನ್ಯೂ ಕ್ರೇಂಬಿಡ್ಜ್ ಪಬ್ಲಿಕ್ ಪ್ರೌಢಶಾಲೆಗೆ ಶೇ.98 ಫಲಿತಾಂಶ | ಆಡಳಿತ ಮಂಡಳಿ, ಶಿಕ್ಷಕ ವೃಂದ ಭಾಗಿ

## ಸಾಧಕ ವಿದ್ಯಾರ್ಥಿಗಳಿಗೆ ಆತ್ಮೀಯ ಅಭಿನಂದನೆ



• **ಆನೇಕಲ್:** ತಾಲೂಕಿನ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾರಂಡಹಳ್ಳಿ ಸಮೀಪವಿರುವ ನ್ಯೂ ಕ್ರೇಂ ಬಿಡ್ಜ್ ಪಬ್ಲಿಕ್ ಪ್ರೌಢಶಾಲೆಯಲ್ಲಿ ಎಸ್ಎಸ್ಎಲ್ ಸಿ ಪರೀಕ್ಷೆಯಲ್ಲಿ ಶೇ.98 ಫಲಿತಾಂಶ ಬಂದಿದೆ, ಹಾಗಾಗಿ ಶಾಲೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ಸೇರಿದಂತೆ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು.

ನ್ಯೂ ಕ್ರೈಮ್ ಬ್ರಿಡ್ಜ್ ಪಬ್ಲಿಕ್ ಪ್ರೌಢಶಾಲೆಯ ಕಾರ್ಯದರ್ಶಿ ಕಾಳಿನಾಥ್ ಮಾತನಾಡಿ, ಕಳೆದ ವರ್ಷಕ್ಕಿಂತ ಈ ವರ್ಷ ಉತ್ತಮ ಫಲಿತಾಂಶ ಪ್ರಕಟವಾಗಿದೆ, ಈ ಬಾರಿ ಬಾಲಕಿ ವಿಭಾಗದಲ್ಲಿ ನಿಕಿತಾ ಅವರಿಗೆ 625ಕ್ಕೆ 598 ಅಂಕ ಗಳಿಸುವ ಮೂಲಕ ಶೇ96 ಪಡೆದರೆ ಬಾಲಕರ ವಿಭಾಗದಲ್ಲಿ ಅಭಯ್ 588 ಅಂಕ ಪಡೆದು ಶೇ . 94 ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಇನ್ನು ಈ ಶಾಲೆಯಲ್ಲಿ ಒಟ್ಟು 47 ವಿದ್ಯಾರ್ಥಿಗಳಿದ್ದು 21 ಜನ ಡಿಸ್ಟಿಂಕ್ಷನ್ ನಿಂದ ಪಾಸ್ ಆಗಿದ್ದಾರೆ. 19 ಜನ ಫಸ್ಟ್ ಕ್ಲಾಸ್ ನಲ್ಲಿ ಪಾಸ್ ಆಗಿದ್ದಾರೆ. 5ಜನ ಸೆಕೆಂಡ್ ಕ್ಲಾಸ್ , 2 ಪಾಸ್ ಆಗಿದ್ದಾರೆ ಆ ಒಟ್ಟು 98.5% ಫಲಿತಾಂಶ ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದು ಕೊಟ್ಟಿದ್ದಾರೆ,ಇನ್ನು ಮಕ್ಕಳು ಯಾವುದೇ ಕಾರಣಕ್ಕೂ ಶಿಕ್ಷಣ ದಿಂದ ವಂಚಿತರಾಗಬಾರದು ಎಂದು ಭಾವಿಸಿ ಉತ್ತಮ ಶಿಕ್ಷಣ ನೀಡುವುದೇ ನಮ್ಮ ಧ್ಯೇಯ ಅಲ್ಲದೆ ಪೋಷಕರು ಮತ್ತು ಶಿಕ್ಷಕರು ಸಹಕಾರದಿಂದ ಉತ್ತಮ ಫಲಿತಾಂಶ ಬರಲು ಸಾಧ್ಯವಾಯಿತು ಎಂದರು.

ಇನ್ನು ಶಾಲೆ ಶಿಕ್ಷಕಿ ಸವಿತಾ ಮಾತನಾಡಿ, ಕಳೆದ ವರ್ಷಕ್ಕಿಂತ ಈ ವರ್ಷ ಉತ್ತಮ ಫಲಿತಾಂಶ ಬಂದಿದೆ ನಮ್ಮ ಶಾಲೆಯಲ್ಲಿ ಬ್ರೇನಕಲ್ ಕ್ಲಾಸ್ ನೆಟ್ ಗ್ಲಾಸ್ ಕರಾಟೆ ಕ್ಲಾಸ್ ಸೇರಿದಂತೆ ಅನೇಕ ವಿಷಯದ ಬಗ್ಗೆ ನುರಿತ ಶಿಕ್ಷರನ್ನ ಕರೆಸಿ ಉಚಿತವಾಗಿ ಶಾಲೆಯಿಂದ ಬೋಧನೆ ಮಾಡಲಾಗುತ್ತಿದೆ,ಅಲ್ಲದೇ ಈಭಾಗದಲ್ಲಿ ಅತಿ ಹೆಚ್ಚು ಕಡಿಮೆ ಶುಲ್ಕದಲ್ಲಿ ಶಿಕ್ಷಣವನ್ನು ನೀಡುತ್ತಿದ್ದೇವೆ ಹಾಗಾಗಿ ವಿದ್ಯಾರ್ಥಿಗಳಿಗೆ ಗುಣ ಮಟ್ಟದ ಶಿಕ್ಷಣ ನೀಡುವುದೇ ನಮ್ಮ ಶಾಲೆ ಧ್ಯೇಯ ಎಂದರು.

ಇನ್ನು ರಾಂಕ್ ಪಡೆದ ವಿದ್ಯಾರ್ಥಿನಿ ನಿಕಿತ ಮಾತನಾಡಿ ಶಾಲೆಯಲ್ಲಿ ಶಿಕ್ಷಕರು ಹೆಚ್ಚಾಗಿ ಪ್ರೋತ್ಸಹ ನೀಡುತ್ತಿದ್ದರು, ಯಾವುದೇ ಡೌಟ್ ಇದ್ದರೂ ಸಮಸ್ಯೆ ಬಗೆಹರಿಸಿ ಕೊಡುತ್ತಿದ್ದರು ತಂದೆ-ತಾಯಿಗಳು ಸಹಕಾರದಿಂದ ಉತ್ತಮ ಅಂಕ ಪಡೆಯಲು ಸಾಧ್ಯವಾಯಿತು ಎಂದರು.

ವಿದ್ಯಾರ್ಥಿ ಮನೋಜ್ ರೆಡ್ಡಿ ಮಾತನಾಡಿ, ನಮ್ಮ ತಂದೆ ಕ್ಯಾಬ್ ಡ್ರೈವರ್ ತಾಯಿ ಗೃಹಣಿ ಶಿಕ್ಷಕರ ಸಹಾಯದಿಂದ 587ಅಂಕ ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು, ಇದೇ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರಾದ ನವೀನ್ ಕುಮಾರ್ ಹಾಗೂ ಆಡಳಿತ ಸಿಬ್ಬಂದಿಗಳು ಮತ್ತು ಪೋಷಕರು ವಿದ್ಯಾರ್ಥಿಗಳು ಹಾಜರಿದ್ದರು.

## ಕೆ.ಆರ್.ಪೇಟೆಯಲ್ಲಿ ಭ್ರೂಣಲಿಂಗ ಅಕ್ರಮ ಪತ್ತೆ ಪ್ರಕರಣ

# ಮೂವರು ವೈದ್ಯರ ಬಂಧನ


ಡಾ. ದಿವ್ಯಾ


ಡಾ. ಹರೀಶ್


ಡಾ.ಹರ್ಷಿತ್

ಖಾಸಗಿ ಡಯೋಗ್ನೋಸ್ಟಿಕ್ ಸೆಂಟರ್ ವಿರುದ್ಧ ಕ್ರಮ

**ಮಂಡ್ಯ:** ಭ್ರೂಣಲಿಂಗ ಅಕ್ರಮ ಪತ್ತೆ ಪ್ರಕರಣದ ಆರೋಪದ ಮೇರೆಗೆ ಕೆ.ಆರ್.ಪೇಟೆಯ ಎರಡು ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಲ್ಲಿ ಓರ್ವ ಮಹಿಳಾ ವೈದ್ಯೆಯೂ ಸೇರಿದಂತೆ ಮೂವರು ವೈದ್ಯರನ್ನು ಕೆ.ಆರ್.ಪೇಟೆ ಪಟ್ಟಣ ಮತ್ತು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಮತ್ತೋರ್ವ ಮಹಿಳಾ ವೈದ್ಯೆಗಾಗಿ ಶೋಧನಾ ಕಾರ್ಯ ನಡೆಸುತ್ತಿದ್ದಾರೆ.

ಕೆ.ಆರ್.ಪೇಟೆಯ ಚೇತನ ಮೆಟರ್ನಿಟಿ ಸೆಂಟರ್‌ನ ಡಾ.ದಿವ್ಯಚೇತನಾ, ನಾವಿ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ.ವೈ.ಆರ್.ಹರ್ಷಿತ್, ಕುಶಾಲ್ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ.ಹರೀಶ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ನ್ಯಾಯಾಲಯ ಮೂವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ. ಡಾ.ಪ್ರಿಯಾಂಕ ಎಂಬ ವೈದ್ಯೆ ತಲೆಮರೆಸಿಕೊಂಡಿದ್ದು, ಆಕೆಗಾಗಿ ಪೊಲೀಸರು ಎಲ್ಲೆಡೆ ಶೋಧನೆ ನಡೆಸುತ್ತಿದ್ದಾರೆ. ಕೆ.ಆರ್.ಪೇಟೆಯ ಎರಡು ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳು ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರಗಳನ್ನು ಅಕ್ರಮವಾಗಿ ಬಳಕೆ ಮಾಡಿಕೊಂಡು ಲಿಂಗಪತ್ತೆ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ರಾಮನಗರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಗೆ ಶೋಧನೆ ಮಾಡಲು ಆದೇಶ ಹೊರಡಿಸಿದ್ದರು.

ಅದರಂತೆ ಏ.16ರಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಕೆ.ಆರ್.ಪೇಟೆಯ ನಾವಿ ಡಯಾಗ್ನೋಸ್ಟಿಕ್ ಸೆಂಟರ್, ಕುಶಾಲ್ ಡಯಾಗ್ನೋಸ್ಟಿಕ್ ಸೆಂಟರ್, ಡಿಹೆಚ್ಒ ಕಚೇರಿಯ ಜಾರಿ ಅಧಿಕಾರಿ ಕಚೇರಿ ಹಾಗೂ 6 ಸಾರ್ವಜನಿಕ ಆಸ್ಪತ್ರೆ ಸೇರಿ 9 ಕಡೆ ದಾಳಿ ನಡೆಸಿ ಸರ್ಕಾರಿ ನೌಕರರ ಅಧಿಕಾರ ದುರುಪಯೋಗ ಹಾಗೂ ಅಪರಾಧ ಕೃತ್ಯ ನಡೆಸಿರುವುದನ್ನು ಪತ್ತೆ ಹಚ್ಚಿದ್ದರು.

ಕುಶಾಲ್ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ 7 ಪ್ರಕರಣಗಳಲ್ಲಿ 18 ವರ್ಷಕ್ಕಿಂತ ಕೆಳಗಿನ ಹೆಣ್ಣು ಮಕ್ಕಳಿಗೆ ಸ್ಕ್ಯಾನಿಂಗ್ ಮಾಡಿರುವುದು. 64 ಪ್ರಕರಣಗಳಲ್ಲಿ 18 ವರ್ಷಕ್ಕಿಂತ ಹೆಚ್ಚು 20 ವರ್ಷಕ್ಕಿಂತ ಕಡಿಮೆ ಇರುವ ಹೆಂಗಸರಿಗೆ ವಯಸ್ಸಿನ ದೃಢೀಕರಣ ದಾಖಲೆಗಳನ್ನು ಪಡೆದುಕೊಳ್ಳದೆ ಸ್ಕ್ಯಾನಿಂಗ್ ಮಾಡಲಾಗಿತ್ತು. ಕಡತಗಳಲ್ಲಿ ಮಹಿಳೆಯರ ವಯಸ್ಸಿನ ದೃಢೀಕರಣ ದಾಖಲೆ ಪಡೆದು ಪರಿಶೀಲಿಸದೆ ಸ್ಕ್ಯಾನಿಂಗ್ ಮಾಡಿರುವುದು ಕಂಡುಬಂದಿತ್ತು. ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗರ್ಭಿಣಿ ಮತ್ತು ಸ್ತ್ರೀರೋಗ ತಜ್ಞರು ಮಹಿಳೆಯರ ಗರ್ಭಧಾರಣೆ ಸಂಬಂಧ ಪರೀಕ್ಷೆಗಳನ್ನು ನಡೆಸಲು ಉನ್ನತ ದರ್ಜೆಯ ಸರ್ಕಾರಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಬೇಕಿದ್ದರೂ ಸಹ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳ ಲೆಟರ್ ಹೆಡ್‌ಗಳಲ್ಲಿ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಶಿಫಾರಸು ಮಾಡುವ ಮೂಲಕ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳ ಆಡಳಿತ ಮಂಡಳಿಗೆ ಅನುಕೂಲ ಮಾಡಿಕೊಡುತ್ತಿರುವುದು ಬೆಳಕಿಗೆ ಬಂದಿತ್ತು.

ಸರ್ಕಾರಿ ವೈದ್ಯಾಧಿಕಾರಿಗಳ ಈ ಧೋರಣೆಯಿಂದ ಸಾರ್ವಜನಿಕರು ವಿನಾಯಿಲ್ಲದೆ ಹೆಚ್ಚಿನ ಶುಲ್ಕವನ್ನು ಭರಿಸಿ ಪರೀಕ್ಷೆಗೆ ಒಳಪಡಬೇಕಾದ ಅನಿವಾರ್ಯತೆ ಉಂಟಾಗಿರುವುದು ಕೂಡ ಲೋಕಾಯುಕ್ತ ತನಿಖೆಯಿಂದ ಗೊತ್ತಾಗಿತ್ತು. ಕೆ.ಆರ್.ಪೇಟೆಯ ನಾವಿ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಪಿಸಿ ಪಿಎನ್ ಡಿಟಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿ 2024ರಲ್ಲಿ 18 ಮತ್ತು 2025ರಲ್ಲಿ 5 ಪ್ರಕರಣ ಸೇರಿದಂತೆ ಒಟ್ಟು 24 ಬಾಲ ಗರ್ಭಿಣಿಯರನ್ನು ಸ್ಕ್ಯಾನ್ ಮಾಡಲಾಗಿದೆ. ನಾವಿ ಡಯಾಗ್ನೋಸ್ಟಿಕ್ ಸೆಂಟರ್‌ನ ರೇಡಿಯಾಲಜಿಸ್ಟ್ ಡಾ.ವೈ.ಆರ್.ಹರ್ಷಿತ್ ಸ್ಥಳೀಯ ಪೊಲೀಸ್ ಠಾಣೆ ಮತ್ತು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡದೆ ಪೋಕ್ಸೋ ಕಾಯ್ದೆಯ ಸೆಕ್ಷನ್ 19 ಉಲ್ಲಂಘಿಸಿ ಅಪ್ರಾಪ್ತ ಗರ್ಭಿಣಿಯರ ಸ್ಕ್ಯಾನಿಂಗ್ ಪ್ರಕ್ರಿಯೆ ನಡೆಸಿರುವುದಾಗಿ ವರದಿಯಲ್ಲಿ ತಿಳಿಸಿದ್ದರು.

ಲೋಕಾಯುಕ್ತ ವರದಿಯಾಧರಿಸಿ ಏ.22ರಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಪಿ.ಎಸ್.ಆಶಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ ಅವರು ಪೋಕ್ಸೋ ಕಾಯ್ದೆಯಲ್ಲಿ ನ್ಯೂನತೆಗಳಿರುವ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಖುದ್ದು ಪರಿಶೀಲನೆ ಮಾಡಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಉಪ ಲೋಕಾಯುಕ್ತರು ನಿರ್ದೇಶಿಸಿದ್ದರ ಮೇರೆಗೆ ಮೂವರು ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿದ್ದರು.

ಈ ಕೃತ್ಯವು ಕಲಂ 65(1), 64(2)(ಎಂ), 376(2)(ಎನ್) ಭಾರತೀಯ ನ್ಯಾಯ ಸಂಹಿತೆ-2023 ಮತ್ತು 6 ಮತ್ತು 21 ಪೋಕ್ಸೋ ಕಾಯ್ದೆ 2012ರಡಿ ಬರುವುದರಿಂದ ಒಟ್ಟು 12 ಮೊಕದ್ದಮೆಗಳನ್ನು ಕೆ.ಆರ್.ಪೇಟೆ ಪಟ್ಟಣ ಮತ್ತು ಗ್ರಾಮಾಂತರ ಠಾಣೆಯಲ್ಲಿ ದಾಖಲಿಸಿ ಪೊಲೀಸರ ಮೂಲಕ ಮೂವರು ವೈದ್ಯರನ್ನು ಬಂಧಿಸಿದ್ದರು.

ಈ ಕ್ರಮವು ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಗೆ ಮಾತ್ರ ಸಂಬಂಧಪಟ್ಟಿದ್ದು, ಉಳಿದಂತೆ ಜಿಲ್ಲೆಯ ಮಳವಳ್ಳಿ, ಮದ್ದೂರು, ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲೂಕುಗಳಿಗೆ ಸಂಬಂಧಪಟ್ಟ ತನಿಖೆಯು ಪ್ರಗತಿಯಲ್ಲಿರುವುದಾಗಿ ಉಪಲೋಕಾಯುಕ್ತ ಬಿ.ವೀರಪ್ಪ ಅವರು ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೆಹಲಿಗೆ ಹೋಗಬಾರದೆಂಬ ಕಾನೂನಿಲ್ಲ

> ರಾಜ್ಯದಲ್ಲಿ ಸಿಎಂ ಬದಲಾವಣೆ ಕುರಿತು ಈ ಎಲ್ಲಾ ವಿಚಾರಗಳಿಗೆ ಶೀಘ್ರದಲ್ಲೇ ನಮ್ಮ ಹೈಕಮಾಂಡ್ ಉತ್ತರ ನೀಡಲಿದೆ. ಯಾವುದೇ ಗೊಂದಲವಿಲ್ಲದೆ ನಾವು ಜನರಿಗೆ ನೀಡಿದ ಭರವಸೆಯಂತೆ ಆಡಳಿತ ನಡೆಸುತ್ತಿದ್ದೇವೆ.
> ■ ಜಿ.ಪರಮೇಶ್ವರ, ಗೃಹ ಸಚಿವ

**ಕಲಬುರಗಿ:** ದೆಹಲಿಗೆ ಹೋಗಬಾರದು ಎನ್ನುವ ಯಾವುದೇ ಕಾನೂನು ಇಲ್ಲ, ಇಲಾಖೆಯ ಕೆಲಸಕ್ಕಾಗಿ ಹೋದರೂ ರಾಜಕೀಯ ಚರ್ಚೆಗಳು ನಡೆಯುವುದು ಸಹಜ. ಎಐಸಿಸಿ ಕಚೇರಿಗೆ ಭೇಟಿ ನೀಡುವುದು ಸಾಮಾನ್ಯ ಪದ್ಧತಿ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಡಿನ್ನರ್ ರಾಜಕೀಯ ವಿವಾದಕ್ಕೆ ಸ್ಪಷ್ಟನೆ ನೀಡಿದ ಅವರು, ಒಟ್ಟಿಗೆ ಊಟ ಮಾಡುವುದೇ ತಪ್ಪೇ? ಸಿಎಂ, ರಾಜಣ್ಣ, ಸತೀಶ ಜಾರಕಿಹೊಳಿ, ಮಹಾದೇವಪ್ಪ, ಜಮೀರ್ ಅಹ್ಮದ್ ಎಲ್ಲರೂ ಸೇರಿ ಊಟ ಮಾಡುತ್ತೇವೆ. ಜೊತೆಗೆ ರಾಜಕೀಯ ವಿಚಾರಗಳನ್ನೂ ಚರ್ಚಿಸುತ್ತೇವೆ. ಇದರಲ್ಲಿ ತಪ್ಪೇನಿದೆ? ಎಂದು ಅವರು ಪ್ರಶ್ನಿಸಿದರು. ಕ್ರಿಪ್ಟೋ ಕರೆನ್ಸಿ ಪ್ರಕರಣದ ಕುರಿತು ಮಾತನಾಡಿದ ಅವರು, ಸರ್ಕಾರಿ ವೆಬ್‌ಸೈಟ್ ಹ್ಯಾಕ್ ಪ್ರಕರಣವನ್ನು



ಭಾರತ ಸರ್ಕಾರದ ಇಡಿಗೆ ಒಪ್ಪಿಸಲಾಗಿದೆ. ಈ ಕುರಿತು ನಾವು ಎರಡು ವರ್ಷಗಳ ಹಿಂದೆಯೇ ಮಾಹಿತಿಯನ್ನು ನೀಡಿದ್ದೇವೆ. ಪ್ರಸ್ತುತ ಬೆಂಗಳೂರುದಲ್ಲಿ ತನಿಖೆ ನಡೆಯುತ್ತಿದೆ. ಇನ್ನೊಂದು ತಿಂಗಳೊಳಗೆ ಚಾರ್ಜ್‌ಶೀಟ್ ಸಲ್ಲಿಸುವ ನಿರೀಕ್ಷೆಯಿದೆ ಎಂದು ಹೇಳಿದರು. ರಾಜ್ಯದ ಪೊಲೀಸರು ಉತ್ತಮ ಕೆಲಸ ಮಾಡುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಒಳ್ಳೆಯ ಹೆಸರು ಇದೆ. ಐಪಿಎಲ್ ಬೆಟ್ಟಿಂಗ್ ಹಾಗೂ ಮಟ್ಕಾ ಆಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಎಸ್‌ಪಿ ಮತ್ತು ಕಮಿಷನರ್‌ಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಇಂತಹ ಅಕ್ರಮಗಳಲ್ಲಿ ತೊಡಗಿದವರ ವಿರುದ್ಧ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದಾರೆ. ಪಿಎಸ್‌ಐ ನೇಮಕಾತಿ ಕುರಿತು ಮಾಹಿತಿ ನೀಡಿದ ಅವರು, ಹಿಂದಿನ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದ್ದುದನ್ನು ಉಲ್ಲೇಖಿಸಿ, ಇದೀಗ ಎಲ್ಲಾ ಸಮಸ್ಯೆಗಳು ಬಗೆಹರಿದಿವೆ. ಒಟ್ಟು 545 ಪಿಎಸ್‌ಐಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

**ಡಿಕೆಶಿಗೆ 'ಬರ್ತ್‌ಡೇ ಗಿಫ್ಟ್'!:** ದಲಿತ ಸಿಎಂ ಕೂಗು ಕುರಿತು ಮಾತನಾಡಿದ ಜಿ.ಪರಮೇಶ್ವರ, ಅದು ಜನಾಭಿಪ್ರಾಯ. ಜನರು ಪ್ರೀತಿ ಮತ್ತು ವಿಶ್ವಾಸದಿಂದ ಈ ರೀತಿಯ ಮಾತುಗಳನ್ನು ಹೇಳುತ್ತಾರೆ. ನಮ್ಮ ಪಕ್ಷದ ಹೈಕಮಾಂಡ್ ಎಲ್ಲವನ್ನೂ ಗಮನಿಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ. ಡಿ.ಕೆ.ಶಿವಕುಮಾರ ಅವರಿಗೆ 'ಬರ್ತ್‌ಡೇ ಗಿಫ್ಟ್' ರೂಪದಲ್ಲಿ ಅಧಿಕಾರ ಬದಲಾವಣೆ ನಡೆಯಬಹುದು ಎಂಬ ಮಾತುಗಳಿಗೆ ಪ್ರತಿಕ್ರಿಯಿಸಿದ ಅವರು, ಹೈಕಮಾಂಡ್ ಯಾವ ತೀರ್ಮಾನ ತೆಗೆದುಕೊಂಡರೂ ನಾವು ಅದಕ್ಕೆ ಬದ್ಧರಾಗಿರುತ್ತೇವೆಂದರು.

---

**IN THE COURT OF THE ASSISTANT COMMISSIONER AT KOLAR**
**RA.NO. 534/2025**
**Appellant : Muktiyar Pasha**
**V/S**
**Respondents : The Tahsildar & another**
**NOTICE UNDER ORDER 5 RULE 20 OF CPC TO RESPONDENT**

**Nazeer Sab** S/o Late Usman Sab Aged about 70 years R/at Rahamathangara Behind, Makka Maszid Mulbagal Town

Whereas, filed this appeal against the orders passed by the 1st respondent in in MR.No.H-5/2021-22 DT.17.9.2021 in land bearing Sy.No.56 total measuring 1 acre situated at Raachabandahalli village, Duggasandra Hobli, Mulbagal Taluk. This Hon'ble court be pleased to issued notice to the proposed RESPONDENT No.2 is intentionally evading and avoiding to receive the summons issued by this Hon'ble court. Hence you proposed at RESPONDENT No.2 is hereby notice to appear in this court in person or by an advocate **on : 04.06.2026** at 03:00 p.m. to file objections to the appeal, in default of your appearance on the same day the court take as exparte.

Given under my hand seal and signature on this day 22-04 of 2026 at Kolar.

**By order of the court**
**The Assistant Commissioner KOLAR**
Advocate of appellant:
**R.Raghupathigowda**
Advocate, Kolar, Kolar, Date: 27/4/2026

---

**IN THE COURT OF THE 4th ADD CIVIL JUDGE AND J.M.F.C. AT ANEKAL**
**C.MIS No. 705/2026**

BETWEEN:- **1.Smt. munirathnamma** W/o late ChinappaAged about 56 years, **2. Smt. Renuka** D/o Late Chinappa Aged about 37 years, **3.Sri. naveen** S/o Late Chinappa, Aged about 35 years, **4.Sri. Mariyamma** D/o Late Venkatappa, Aged about 52 years, **5. Smt.Nagamma** D/o Late Venkatappa Aged about 50 years, All are R/at. Behind Su vidya college, kammasandra Village, hebbagodi Attibele Hobli, Anekal Taluk Bangalore, Urban District. **...PETITIONERS**

**And The Chief officer at hebbagodi ...RESPONDENT**

**PUBLIC NOTICE**

WHEREAS, the petitioner filed the above petition for directing the respondent to make necessary entries in respect the date of death of mother-in-law of the petitioner no.1,grand mother of petitioner no.2 and 3 and mother of the petitioner no.4 and 5. Namely Smt Shamakka @Shyamakka W/o Late venkatappa has died on 08.06.2013. At Behind Su vidya college kammasandra Village, Attibele Hobli, Anekal Taluk, Bangalore Urban District. In C.Misc No 705 /2026. On the file 4th add Civil Judge and JMFC at Anekal, and anybody have any objection pleased to appear in this Hon'ble court in person or by an advocate duly instructed on 21/05/2026, at 11.00 A.M. to answer the claim. Take notice that in default of your appearance on the day above mentioned the matter will be heard and decided in your absence as per law.

Given under my hand and seal of the court this is the 28th April 2026

**By Order of the Court**
**Sheristedar, Civil Judge (Jr.Dn) and JMFC., Court at Anekal.**
ADVOCATE FOR PETITIONER: **Vandana V,**
Anekal Town, STB Complex, Opp. Court Complex, Anekal - 562 106.

---

**BEFORE MOTOR ACCIDENT CLAIMS TRIBUNAL AT BANGALORE (SCCH-16)**
**M.V.C No.6995/2016**
**BETWEEN: MUNIRAJU @ MUNIRAJAPPA ...PETITIONER**
**AND: BHARATHI AXA GEN INS CO. LTD. &** ANOTHER... **RESPONDENTS**
**NOTICE TO PROPOSED RESPONDENT NO.3**

**NAGARAJU**, S/O LATE. RAMAIAH, # Samethanahalli Village Post, Hoskote taluk, Bangalore-560067. (Owner of the Vehicle).

WHEREAS, the petitioner has instituted the above case against the Respondents claiming compensation of Rs. 6,00,000/-(Rupees Six Lakhs only) for the injuries occurred in a Road Traffic Accident, which took place on 22-09-2016 at about 6.15 P.M. near Gowtham colony circle, Hosakote -Town, Bangalore-Kolar, NH-75 road, Bangalore-dist. involved TATA Sumo bearing Reg. No. KA-05-N-6348. You are hereby summoned to appear before this court in person or by pleader on **09-06-2026** at 11:00 A.M, failing which the case will be disposed off Exparte.

Given under my Hand and seal of the court on this 25-04-2026.

By order of the Court, Assistant Registrar, Court of Smart Causes, Bengaluru.

**P. SURESH,** Advocate.
No. 11, V.M.C Complex, F-10, 10th cross, Cubborpet, Banappa Park Road, Bangalore-560 002.

---

## Affidavit

I, **REVANNA KT** S/o Thimmegowda, (Aadhar No.4888 0149 6908) aged about 33 years, residing at kirahalli Village, Kasaba hobali, Hunasavalli Post, Alur Taluk, Hassan District, Karnataka state. I Do here by solemnly affirm That my name is recorded as **REVANNA K.T** (with space) in my Aadhar Card/PAN Card/ Other valid document. That in certain other 10th Marks card my name hasbeen written as **REVANNA K.T. shital** (sp. ang). That I wish to clar that **REVANNA K. T and REVANNA K.T. shital** represent one and the same Person, vide Affidavit **Date : 27.04.2026** Sworn before NOTARY **B. MANJEGOWDA** Alur.

---

**ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**
Hero Housing Finance
ಇ-ಮೇಲ್: customer.care@herohfl.com
ವೆಬ್‌ಸೈಟ್: www.herohousingfinance.com

**ಸ್ವಾಧೀನ ನೋಟಿಸ್ (ಸ್ಥಿರಾಸ್ತಿಗಾಗಿ)**

ದಿನಾಂಕ: 29-04-2026.
ಸ್ಥಳ: ಮೈಸೂರು
ಸಹಿ/- ಅಧಿಕೃತ ಅಧಿಕಾರಿ
ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ

---

**BEFORE THE NOMINEE OF THE DEPUTY REGISTRAR OF CHITS 2ndZONE, 2ndFLOOR, MARGOSA ROAD SAHAKARA SOUDHA MALLESWARAM, AT BANGALORE-03**
**DRB-2/CFS/DIS/No.25/2025-26**
**DISPUTANT : Akshodaya Chits Pvt Ltd.,**
**AND**
**OPPONENTS: Ranganatha.B.K and another**
**SUIT SUMMONS BY PAPER PUBLICATION TO OPPONENT 1 to 3**

**1. Sri. Ranganatha B K** S/o late. Krishna Murthy.B.T Aged about 63 years, #401, Venkatachala, Residency Nanda Kumar layout, Uttarahalli, Bangalore.
**2. Smt. Shashikala Hegde** W/o, Ranganath B K, Aged about 56 years
**3. Sri. Suhas Sharma B.R** S/o. Ranganath B K, Aged about 31 years
**All Residing at:** Flat No.102, Siri Hari, Tejas apt, 2nd main, Arehalli road, AGS layout, Bangalore-560061 **...Opponents**

Whereas The Disputant Has Instituted The Above Dispute U/S 64(1) Of The Chit Funds Act, 1982, Before The Deputy Registrar of Chits, 3rd Zone, 2nd Floor Margosa Road, 8thCross Sahakara Soudha, Malleswaram Bangalor-03, For Recovery of A Sum of **Rs.1,86,746/- (Rupees One Lakh Eighty six Thousand Seven Hundred and forty six Only)** From The Opponents.

The Deputy Register of chits 2ndZone, 2ndfloor, Sahakara Soudha, Margosa Road, 8th Cross, Malleswaram, Bangalore-03 has appointed me as his Nominee and referred the above dispute to me for Adjudication and Disposal, Notice summons is hereby made that the said opposite parties are required to appear on day **7th of May 2026 at 3.00.PM** the Akshodaya Chits Pvt Ltd., No.109/1, 2nd Floor, SLR Complex, Vivekananda Nagar, Kathriguppe, BSK 3rd Stage, Bangalore-560085, failing which the above matter will be heard and determined exparte.

The Said Opponent to Take Notice That In Default Of Appearance on the Day before Mentioned, The Dispute Will Be Heard And Disposed Ex-Parte On Merits.

Given Under My Hand and Seal of the Court This 18.04.2026.

**Nominee of Deputy Registrar of Chits, 2nd Zone, Malleswaram, At Bangalore.**
**Advocate for Disputant.**
**B.G.RAJSHEKHAR & ASSOCIATES,**
**B.G.Rajshekhar, Advocates,** No.2/1, 2nd Main, 5th Cross, Gandhinagar, Bangalore-560 009

---

**IN THE COURT OF THE XIV ADDITIONAL CHIEF JUDICIAL MAGISTRATE AT BANGALORE**
**C. Misc. No. 50162/2026**
**BETWEEN:**
**SRI. SHAIKHH AIYAZ,** Aged about 47 years, Son of Shaikh Shaffi, Residing at No. 8, 1st Main, 1st Cross, Near Mosque, Islampura, Vimanapura Post, Bangalore-560017 **.... Petitioner**
**AND**
**THE REGISTRAR BIRTH AND DEATH**
**The Commissioner B.B.M.P. Bangalore ... Respondent**

**PAPER PUBLICATION**
**NOTICE TO DEFENDANT**
**THE REGISTRAR BIRTH AND DEATH**
The Commissioner B.B.M.P. Bangalore

Whereas the petitioner has filed the petition for obtaining death certification of my grandfather for which the respondent have not registered in the record.

You are hereby summoned to appear before XIV Additional Chief Judicial Magistrate at Mayo Hall, Bangalore in person or by pleader duly instructed **on dated 8-6-2026 at 11.00 a.m.** to answer the same failing which the suit will be heard and determined Ex-parte.

Given under my hand and seal of the court on this **28-04-2026**

**By the order of the court**
**SHERISTEDAR**
**XIV ADDL. C.M.M. Court**
**Mayo Hall, BANGALORE**
**SRI N. GHOPAL**
**Advocate**
Office situated at No. 1, Bowee lane 'A' street, Ashoknagar, Bangalore-560025.
KAR No. 885/1992.

---

**ಸಾರ್ವಜನಿಕ ಪ್ರಕಟಣೆ**

ಇ-ಮೇಲ್: **basappahd2018@gmail.com**
ಸ್ಥಳ: ಬೆಂಗಳೂರು ದಿನಾಂಕ: 29.04.2026.

---

**BEFORE THE NOMINEE OF THE DEPUTY REGISTRAR OF CHITS 2nd ZONE, 2ndFLOOR, MARGOSA ROAD SAHAKARA SOUDHA MALLESWARAM, AT BANGALORE-03**
**DRB-2/CFS/DIS/No.24/2025-26**
**DISPUTANT : Akshodaya Chits Pvt Ltd.,**
**AND**
**OPPONENTS : Ranganatha.B.K and another**
**SUIT SUMMONS BY PAPER PUBLICATION TO OPPONENT 1 to 3**

1. **Sri. Ranganatha B K** S/o late. Krishna Murthy.B.T, Aged about 63 years, #401, Venkatachala, Residency Nanda Kumar layout, Uttarahalli, Bangalore.
**2. Smt. Shashikala Hegde** W/o, Ranganath B K, Aged about 56 years
**3. Sri. Suhas Sharma B.R** S/o. Ranganath B K, Aged about 31 years
**All Residing at:** Flat No.102, Siri Hari, Tejas apt, 2nd main, Arehalli road, AGS layout, Bangalore-560061 **...Opponents**

Whereas The Disputant Has Instituted The Above Dispute U/S 64(1) Of The Chit Funds Act, 1982, Before The Deputy Registrar of Chits, 3rd Zone, 2nd Floor Margosa Road, 8thCross Sahakara Soudha, Malleswaram Bangalor-03, For Recovery of A Sum of **Rs.77,652/- (Rupees Seventy seven Thousand six Hundred and fifty two Only)** From The Opponents.

The Deputy Register of chits 2ndZone, 2ndfloor, Sahakara Soudha, Margosa Road, 8th Cross, Malleswaram, Bangalore-03 has appointed me as his Nominee and referred the above dispute to me for Adjudication and Disposal, Notice summons is hereby made that the said opposite parties are required to appear on day **7th of May 2026 at 3.00.PM** the Akshodaya Chits Pvt Ltd., No.109/1, 2nd Floor, SLR Complex, Vivekananda Nagar, Kathriguppe, BSK 3rd Stage, Bangalore-560085, failing which the above matter will be heard and determined exparte.

The Said Opponent to Take Notice That In Default Of Appearance on the Day before Mentioned, The Dispute Will Be Heard And Disposed Ex-Parte On Merits.

Given Under My Hand and Seal of the Court This 18.04.2026 Day of March-2026.

**Nominee of Deputy Registrar of Chits, 2nd Zone, Malleswaram, At Bangalore.**
**Advocate for Disputant.**
**B.G.RAJSHEKHAR & ASSOCIATES,**
**B.G.Rajshekhar, Advocates,** No.2/1, 2nd Main, 5th Cross, Gandhinagar, Bangalore-560 009

---

**IN THE COURT OF THE III ADDITIONAL DISTRICT AND SESSIONS JUDGE AT ANEKAL**
**IC No. 5001/2023**

**Between: Sri.Prashanth M Benahal** S/o Mahagundappa Benahal No.547/105, H.No.3, Behind BES School, Vinayaka Nagara, Hebbagodi, Anekal Taluk, Bangalore Rural-560099 **Petitioner**
**AND: M/s Fullertron India Credit company Ltd & others Respondents**
**SUMMONS TO THE RESPONDENT NO.1 to 4, 6, 8, 10 & 11**

**1. M/S Fullertron India Credit Company Ltd** No.37, 2nd Floor, Bramhananda Court Lalbhagh Road, bangaore-560027, Mr.Sundarraman Subramanaian-Nodal officer South region B wing, 6th floor, Supreme business park, Hiranandani.powai, Mumbai-400702 Contact No.9840999651. Represented by its Managing Director **2. M/s Indusind Bank,** No.28, Ground Floor, Centanary Building, MG Road, Bangalore-560001 Represented by Mr. Rakesh Ranjan Executive vice president and principal nodal officer PAN house, 2nd Floor, Plot No.57, Near Datamatics 701, street No. 17, Andheri East Mumbai-400093. **3. M/s Moneyvie.** Clix Capital Centanary Building, MG Road, Bangalore-560001. Represented by Mr. Venkataramana Narayan, 3rd floor, Survey No. 17, 1A, Outer Ring Road, Kadubeesanahalli, Bellanduru, Bangalore, Karnataka-560087. **4. M/s Preferloan MI Credix** Archid Block E, Ground floor to 4th floor, Embassy Tech Village, Marathalli, Sarjapura Outer Ring Road, Bangalore. **6. M/s Navifinserve Ltd** AMR Tech Park, 2nd floor, Hy No.23 and 24, Hosur Road, Hongasandra, Bangalore-560068. Represented by Mr. Vikranth Choudary 402, 403, 404 A and B wing, 4th Floor, Fulcrum sahara Road, Next to Hyatt Regency, And 400099. **8. M/s Stashfin** New Delhi. CRC2, 1 Floor, Khasra No.337, Mehrauli Gurgaon Road, Sultanpur Represented by Mr.Sanjeev Walia CRC-2, 1st Floor, Khasra, No.337, Mehrauli, Gurgaon Road, Sultanpur, Delhi Delhi--110030 **10. M/s Cashe Technology** No.679, Swagath Road, BTV Area, 4th T Block East, Tilak Nagar, Bangalore-560041. Represented by Mr.Prateek Saxena, Bhanix Finance and investment limited 5th Floor, pavilie House, twin lane, Veer Savarkar Marg, Phabhadevi, Mumbai-400025. **11. M/s Flex Salary** California Resort E 1501, NCC Meadows Phase2 Puttenalli, Doddaballapur, Major Akshay Girish Kumar Road, Near Ramanashree, Yelahanka New Town, Bangalore, Karnataka-560 064. Represented by Mr.Prakash Rajan-Grievance Officer 3-A Sanali Infor Park, Road No.2 Banjara Hills, Hyderabad, Telangana-5600 034. **:Respondents**

Whereas the petitioner has filed the above petition against the respondents for the relief of insolvency against the respondents. Whereas the below mentioned date either in person or through pleader to answer on 01-06-2026, all the respondent NO.1 to 4, 6, 8, 10 & 11 are hereby set to be appeared before this Hon'ble At 11.00 am failing which the court will hear the matter in your absence and proceed with the matter in accordance with law. questions involved in the matter on at

Given under my hand seal of this

**By order of Court**
**Chief Ministerial Officer**
**Addl. Dist. & Sessions Judg. Court Anekal, Bangalore Rural Dist.**
Advocate for petitioner: **Asha.N,** Advocate Office at My Law Chambers, Opp Court, Attibele Main Read Anekal Town, Anekal Taluk, Bangalore District.

---

**:: ಓದುಗರ ಗಮನಕ್ಕೆ ::**
**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು**

---

**IN THE COURT OF THE HON'BLE SENIOR JUDGE AT KOLAR**
**P & S.C.No. 06/2026**

**Petitioners :**
**1. Kum. Chaithanya N.S.** D/o. Srirama N.V. aged about 21 years, Aadhar No754432996993
**2. Kum. Jnana Shree N.S.** D/o. Srirama N.V. aged about 18 years. Aadhar No.915253906498
Both are residing, at Nukkanahalli Village Kasaba Hobli, Kolar Tq.,

**-Vs-**

**Respondents :**
**1. Smt. Arunamma T,** W/o. late Srirama N.V. aged about 54 years
**2. Kum. N.S. Samiksha,** D/o. late Srirama N.V. aged about 10 years Minor, represented by her mother Smt. T. Arunamma, first respondent
Both are residing at Nukkanahalli Village, Kasaba Hobli, Kolar Tq.,
**3. The Divisional Controlor, KSRTC,** Kolar Division, C.B. Pura Road, Kolar.
**4. The Manager, Canara Bank,** Itharasanahalli Branch, Kasaba Hobli, Kolar Tq.,
**5. The Manager, Karnataka Bank Ltd.,** Kolar Branch, Kolar.
**6. The Manager, State Bank of India,** Rojoranahalli Branch, Kasaba Hobli, Kolar Tq.,
**7. The Secretary, Karnataka State Road Transport Employees Credit Co-operative Society Ltd.,** K.H. Road, Bengaluru-560 027.

**NOTICE TO GENERAL PUBLIC AS PER SECTION 372 OF INDIAN SUCCESSION ACT.,**

The petitioners above named filed the above petition against the above named respondents for grant of succession certificate/probate in respect of death benefits of their father late Srirama N.V. who was working with 3rd respondent and died on 12-11-2026 while in service, which amounts are in the custody of the respondents above named. The above case is posted for hearing on **23.06.2026.** before this Hon'ble court, any person or persons who are interested to oppose the said claim are hereby called upon to appear before this Hon'ble court in the above case on the said date and time with documents to defend the same, in the absence of any opposition or defense, the above case will be decided as per law, which please note.

Given under my hand and seal on this **27th day of April, 2026.**

**By order of the Court**
**Sheristedar**
**Prl. Senior Civil Judge at Kolar**
**G.C. Hanumanth** B.Com., LL.B.,
**Shantala Hanumanth** B.A., LL.B., (Spl.,)
**Advocates**
Sree Harshadarshan, Dharmarayanagara Bangaropet Road, near Railway Station, KOLAR-563 102

---

**IN THE COURT OF THE HON'BLE PRL.DISTRICT AND. SESSIONS JUDGE AT KOLAR**
**P& SC.NO. 49/2026**

ಯಲಹಂಕ ಕ್ಷೇತ್ರದ ಕಡತನಮಲೆ ಗ್ರಾಮ, ರಾಜಾನುಕುಂಟೆ ಮತ್ತು ಅರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಕ್ಕಪಕ್ಕದ ಗ್ರಾಮಗಳ ರೈತರ ಹೊಲಗಳಲ್ಲಿ ಪಂಪ್ಸೆಟ್ ಕೇಬಲ್ ಕಳ್ಳರ ಹಾವಳಿ ಹೆಚ್ಚಾಗಿದ್ದು, ನೂರಾರು ಮೀಟರ್ ಕೇಬಲ್‌ಅನ್ನು ಕ್ಷಣ ಮಾತ್ರದಲ್ಲಿ ಕಿತ್ತು ಹೊತ್ತುಯ್ಯುವ ಹಲವು ಪ್ರಕರಣಗಳು ನಡೆದಿದೆ.

ಈ ಕುರಿತು ಪಂಪ್ಸೆಟ್ ಕೇಬಲ್ ಕಳ್ಳತನವಾಗಿರುವ ಸಂತ್ರಸ್ತ ರೈತರನ್ನು ಭೇಟಿ ಮಾಡಿ ಮಾತನಾಡಿದ ಅವರು, ಒಂದೆಡೆ ಬಿಸಿಲಿನ ತಾಪ, ನೀರಿನ ಬವಣೆಯ ನಡುವೆ ತಮ್ಮ ಬೆಳೆ, ತೋಟ ರಕ್ಷಿಸಿಕೊಳ್ಳಲು ಪರಿತಪಿಸುತ್ತಿರುವ ರೈತರಿಗೆ ಪಂಪ್ಸೆಟ್ ಕೇಬಲ್ ಕಳ್ಳರ ಹಾವಳಿ ತಲೆ ನೋವಾಗಿ ಪರಿಣಮಿಸಿದ್ದು, ರಾತ್ರಿ ನೋಡಿ ಬಂದ ಕೇಬಲ್ ಬೆಳಗಾಗುವಷ್ಟರಲ್ಲಿ ಕಳ್ಳರ ಕೈಚಳಕಕ್ಕೆ ಒಳಗಾಗಿ ನಾಪತ್ತೆಯಾಗುತ್ತಿ ರುವುದು ರೈತರನ್ನು ಕಂಗೆಡಿಸಿದೆ ಎಂದರು.

ಕೇಬಲ್ ಕಳ್ಳರ ಹಾವಳಿಯನ್ನ ತಪ್ಪಿಸುವ ದಿಸೆಯಲ್ಲಿ ರೈತರು ಸ್ಥಳೀಯ ಆಡಳಿತವನ್ನು ಒತ್ತಾಯಿಸಿದ್ದು, ಕೇಬಲ್ ಕಳ್ಳತನಕ್ಕೆ ಕಡಿವಾಣ ಹಾಕುವ ದಿಸೆಯಲ್ಲಿ ಸೂಕ್ತ ಗಸ್ತು ವ್ಯವಸ್ಥೆ ಕಲ್ಪಿಸಬೇಕು. ರೈತರು ಸಹ ಕೇಬಲ್ ಕಳ್ಳರನ್ನು ಹಿಡಿಯುವ ನಿಟ್ಟಿನಲ್ಲಿ ಒಗ್ಗಟ್ಟಾಗಿದ್ದು, ರಾತ್ರಿ ವೇಳೆ ತಮ್ಮ ಹೊಲ, ತೋಟಗಳಲ್ಲಿನ ಪಂಪ್ಸೆಟ್ಟುಗಳನ್ನು ಕಾಯಲು ತೆರಳುವ ನಿರ್ಧಾರಕ್ಕೆ ಬಂದಿದೆ.

ಒಂದೊಮ್ಮೆ ಕೇಬಲ್ ಕಳ್ಳರು ಪತ್ತೆಯಾದ ವೇಳೆ ಅವರನ್ನು ಹಿಡಿಯುವ ಭರದಲ್ಲಿ ಕಳ್ಳರನ್ನು ಥಳಿಸುವ ಪರಿಸ್ಥಿತಿ ಎದುರಾಗುವುದು ಸಹಜ, ಅಂತಹ ವಿಷಮ ಪರಿಸ್ಥಿತಿಯಲ್ಲಿ ಕಳ್ಳರ ಮೇಲೆ ಮಾರಣಾಂತಿಕ ಹಲ್ಲೆಯಾದರೆ ಅದಕ್ಕೆ ಕಳ್ಳರು ಹೊಣೆಯೇ ಹೊರತು ರೈತರನ್ನು ಹೊಣೆಗಾರರನ್ನಾಗಿ ಮಾಡಬಾರದೆಂದು ಬಿ.ಜಿ.ನಂಜುಂಡಪ್ಪ ಕಡತನಮಲೆ ಅವರು ಒತ್ತಾಯಿಸಿದರು.

## ಮೇ 15ಕ್ಕೆ ಮನೆಗಣತಿ ಪೂರ್ಣ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೇ 15ರೊಳಗೆ ಶೇ.100ರಷ್ಟು ಮನೆಪಟ್ಟಿ ಗಣತಿಯನ್ನು ಪೂರ್ಣಗೊಳಿಸುವಂತೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪಿ. ಸುನೀಲ್ ಕುಮಾರ್ ಗಣತಿದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ರಾಷ್ಟ್ರೀಯ ಜನಗಣತಿ-2027 ಕಾರ್ಯಗಳ ಪ್ರಗತಿ ಕುರಿತು ಪರಿಶೀಲನಾ ಸಭೆ ನಡೆಸಿದ ಅವರು, ಮೊದಲ ಹಂತದಲ್ಲಿ ಮನೆಪಟ್ಟಿ ಕಾರ್ಯವನ್ನು ವೇಗವಾಗಿ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಲು ಹಾಗೂ ಮೇ 15ರೊಳಗೆ ಶೇ.100ರಷ್ಟು ಮನೆ ಗಣತಿ ಕಾರ್ಯವನ್ನು ಕಡ್ಡಾಯವಾಗಿ ಮುಗಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಗಣತಿ ನಡೆಸಿದ ಅಧಿಕಾರಿಗಳನ್ನು ಪ್ರಶಂಸಿಸಿದ ಅವರು, ಉತ್ತಮ ಕಾರ್ಯನಿರ್ವಹಣೆಯನ್ನು ಮುಂದುವರಿಸಲು ಸೂಚಿಸಿದ್ದಾರೆ.

ಗಣತಿದಾರರಿಗೆ ಗೌರವಧನ ಪಾವತಿ ಸಂಬಂಧವಾಗಿ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಸಾಮಾಜಿಕ-ಆರ್ಥಿಕ ಸಮೀಕ್ಷೆಯಲ್ಲಿ ಭಾಗವಹಿಸಿದ ಬಹುತೇಕ ಸಿಬ್ಬಂದಿಗಳಿಗೆ ಈಗಾಗಲೇ ಗೌರವಧನ ಪಾವತಿ ಮಾಡಲಾಗಿದೆ. ಪಾವತಿ ಬಾಕಿ ಇರುವ ಗಣತಿದಾರರಿಗೆ ಶೀಘ್ರದಲ್ಲಿ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ಗಣತಿ ಕಾರ್ಯಕ್ಕೆ ಗೈರುಹಾಜರಾಗಿರುವ ಸಿಬ್ಬಂದಿಗಳ ವಿರುದ್ಧ ಈಗಾಗಲೇ ಕೆಲಸ ಮಾಡದ ದಿನ ಆದೇಶ ಹೊರಡಿಸಲಾಗಿದೆ.



ಸನ್ಮಾನ




ಕೆಎಸ್‌ಡಿಎಲ್ ನಗರದ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಮೈಸೂರು ಸ್ಯಾಂಡಲ್‌ನ ಸಾಧನೆ ಶಿಖರ ಕಾರ್ಯಕ್ರಮದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ಸಿ.ಎಸ್.ನಾಡಗೌಡ, ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೆಎಸ್‌ಡಿಎಲ್ ಎಂಡಿ ಪಿಕೆಎಂ ಪ್ರಶಾಂತ್ ಇದ್ದರು.

ವಿಪರೀತ ಬಿಸಿ ಬೆಂಗಳೂರಿನ ಮೇಲೆ ಅದರ ಪರಿಣಾಮ ಕುರಿತ ವಿಚಾರ ಸಂಕಿರಣದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ

# ತಾಪಮಾನ ತಗ್ಗಿಸಲು ಕ್ರಿಯಾಯೋಜನೆ

• **ಬೆಂಗಳೂರು:** ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಲು ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ (ಕೆಎಸ್‌ಎಪಿಸಿಸಿ) ರೂಪಿಸಲಾಗಿದೆ. ಇದರ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ಮಾಧ್ಯಮ ಅಕಾಡಮಿ ಮತ್ತು ಅಸರ್ ಸೋಷಿಯಲ್ ಇಂಪ್ಯಾಕ್ಟ್ ಆಯೋಜಿಸಿದ್ದ ವಿಪರೀತ ಬಿಸಿ ಮತ್ತು ಬೆಂಗಳೂರಿನ ಮೇಲೆ ಅದರ ಪರಿಣಾಮ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಈ ಕ್ರಿಯಾ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಾರಿಗೆ ತರಲು ಪರಿಸರ ಇಲಾಖೆ ವ್ಯಾಪ್ತಿಗೆ ಒಳಪಡುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಕಚೇರಿಗಳ ಸಹಯೋಗದೊಂದಿಗೆ ಕೆಎಸ್‌ಎಪಿಸಿಸಿ ಅನುಷ್ಠಾನ ಮತ್ತು ಅದರ ಪ್ರಗತಿಯ ಕುರಿತು ಜಿಲ್ಲಾ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.



### 31 ಜಿಲ್ಲೆಗಳಲ್ಲಿ ಅನುಷ್ಠಾನ

ಜಿಲ್ಲಾ ಪಂಚಾಯತ್ ಕಚೇರಿಗಳ ಸಹಯೋಗದೊಂದಿಗೆ ಕೆಎಸ್‌ಎಪಿಸಿಸಿ ಅನುಷ್ಠಾನ ಮತ್ತು ಅದರ ಪ್ರಗತಿಯ ಕುರಿತು ಜಿಲ್ಲಾ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

### 11 ಕೋಟಿ ಸಸಿ ನೆಡಲಾಗಿದೆ

ರಾಜ್ಯದ ಎಲ್ಲೆಡೆ ಅದರಲ್ಲೂ ಬೆಂಗಳೂರು ನಗರದಲ್ಲಿ ಹಸಿರುಹೊದಿಕೆ ಹೆಚ್ಚಿಸಲು ಶ್ರಮಿಸುತ್ತಿದ್ದೇನೆ. ಕಳೆದ 3 ವರ್ಷದಲ್ಲಿ ರಾಜ್ಯದಲ್ಲಿ ಸುಮಾರು 11 ಕೋಟಿ ಸಸಿಗಳನ್ನು ನಡೆಲಾಗಿದೆ. ಈ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆ ವೆಬ್ ಸೈಟ್‌ನಲ್ಲಿ ಹಾಕುವ ಮೂಲಕ ಪಬ್ಲಿಕ್ ಡೊಮೈನ್‌ನಲ್ಲಿ ಮಾಹಿತಿ ಹಾಕಲಾಗಿದೆ.

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯಿಂದಾಗಿ ಇಂದು ಋತುಮಾನಗಳೇ ಬದಲಾಗುತ್ತಿವೆ. ಇದನ್ನು ಮನಗಂಡು ಹಸಿರು ಹೊದಿಕೆಯನ್ನು ಹೆಚ್ಚಿಸಲು ಸಕಲ ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದ ಎಲ್ಲೆಡೆ ಅದರಲ್ಲೂ ಬೆಂಗಳೂರು ನಗರದಲ್ಲಿ ಹಸಿರುಹೊದಿಕೆ ಹೆಚ್ಚಿಸಲು ಶ್ರಮಿಸುತ್ತಿದ್ದೇನೆ. ಕಳೆದ 3 ವರ್ಷದಲ್ಲಿ ರಾಜ್ಯದಲ್ಲಿ ಸುಮಾರು 11 ಕೋಟಿ ಸಸಿಗಳನ್ನು ನಡೆಲಾಗಿದೆ. ಈ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್ ಸೈಟ್‌ನಲ್ಲಿ ಹಾಕುವ ಮೂಲಕ ಪಬ್ಲಿಕ್ ಡೊಮೈನ್‌ನಲ್ಲಿ ಮಾಹಿತಿ ಹಾಕಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ನಗರದ ಕೊತ್ತನೂರು, ಕಾಡುಗೋಡಿ, ಬಿ.ಎಂ. ಕಾವಲ್, ತುರಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ಆಗಿದ್ದ ಸುಮಾರು 10 ಸಾವಿರ ಕೋಟಿ ರೂ. ಬೆಲೆ ಬಾಳುವ 250 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಿಸಲಾಗಿದೆ. ಒತ್ತುವರಿ ತೆರವು ಮಾಡಿದ ಜಾಗದಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ನೆಡುತೋಪು ನಿರ್ಮಾಣ ಮಾಡಲಾಗಿದೆ. ಈ ಮೂಲಕ ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಕಾಡಮಿ ಅಧ್ಯಕ್ಷೆ ಆಯೇಶಾ ಖಾನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ವಾಯುಪಡೆಗೆ ನೀಡಿದ್ದ ಜಾಗ ವಾಪಸ್

ಹಿಂದೆ ಕೈಗಾರಿಕೆಯ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಂಟಿಗೆ ಪೀಣ್ಯ ಪ್ಲಾಂಟೇಷನ್‌ನಲ್ಲಿ ಸುಮಾರು 400 ಎಕರೆಗೂ ಹೆಚ್ಚು ಅರಣ್ಯ ಭೂಮಿಯನ್ನು ನೀಡಲಾಗಿತ್ತು. ಆದರೆ ಎಚ್‌ಎಂಟಿ. 160 ಎಕರೆ ಅರಣ್ಯ ಭೂಮಿಯನ್ನು ಮಾರಾಟ ಮಾಡಿದ್ದಾರೆ. ಇನ್ನೂ ಅಲ್ಲಿ 280 ಎಕರೆ ಅರಣ್ಯ ಉಳಿದಿದ್ದು, ಮರಳಿ ಇಲಾಖೆಗೆ ಪಡೆಯಲಾಗುವುದು. ಇದಕ್ಕಾಗಿ ಕಾನೂನು ಹೋರಾಟ ನಡೆಯುತ್ತಿದೆ. ಇದರ ಜತೆಗೆ ಜಾರಕಬಂಡೆ ಪ್ರದೇಶದಲ್ಲಿ ಭಾರತೀಯ ವಾಯುಪಡೆಗೆ 444 ಎಕರೆ ಭೂಮಿಯನ್ನು ನೀಡಲಾಗಿತ್ತು. 1980ರ ಕಾಯಿದೆ ರೀತ್ಯ ಅರಣ್ಯ ಭೂಮಿಯನ್ನು ಯಾರಿಗೂ ನೀಡಲು ಅವಕಾಶವಿಲ್ಲ, ಹೀಗಾಗಿ 2017ರಲ್ಲಿ ಅಂದಿನ ಜಿಲ್ಲಾಧಿಕಾರಿ ಈ ಭೂ ಮಂಜೂರಾತಿ ರದ್ದು ಮಾಡಿದ್ದಾರೆ. ಈಗ ಆ ಅರಣ್ಯ ಭೂಮಿ ಮರಳಿ ಇಲಾಖೆಗೆ ಪಡೆದು ಹಸಿರು ಉಳಿಸಲು ಕ್ರಮ ಕೈಗೊಳ್ಳಲಾಗಿದೆಂದು ಸಚಿವರು ತಿಳಿಸಿದರು.

## ಕಿರುಸುದ್ದಿ

### ಹಿರಣ್ಯಾಕ್ಷ ವಧೆ ಯಕ್ಷಗಾನ ಪ್ರದರ್ಶನ



• **ಬೆಂಗಳೂರು:** ಕರ್ನಾಟಕ ಕಲಾದರ್ಶಿನಿ ತಂಡದ ವತಿಯಿಂದ ಬೇಸಿಗೆ ಶಿಬಿರದ ಅಂಗವಾಗಿ ಬಾಲಕಲಾವಿದರಿಂದ ಹಿರಣ್ಯಾಕ್ಷ ವಧೆ - ಭಕ್ತ ಪ್ರಹ್ಲಾದ ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗವನ್ನು ಗಿರಿನಗರದ ಶ್ರೀ ರಾಮಚಂದ್ರಾಪುರ ಮಠದಲ್ಲಿ ಪ್ರದರ್ಶಿಸಲಾಯಿತು. ಬೇಸಿಗೆ ಶಿಬಿರ ಅಂಗವಾಗಿ ಯಕ್ಷಗುರು ಶ್ರೀನಿವಾಸ ಸಾಸ್ತಾನ ಅವರು ಪುಟಾಣಿಗಳಿಗೆ ಯಕ್ಷಗಾನ ತರಬೇತಿ ನೀಡಿ, ಈ ಪ್ರಸಂಗವನ್ನು ನಡೆಸಿಕೊಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶ್ರೀ ರಾಮಚಂದ್ರಾಪುರ ಮಠದ ಸಹಕಾರದಿಂದ ನಡೆದ ಈ ಕಾರ್ಯಕ್ರಮದಲ್ಲಿ, ಶ್ರೀರಾಮಸೇವಾಸಮಿತಿ ಅಧ್ಯಕ್ಷ ರಮೇಶ್ ಹೆಗಡೆ, ಯಕ್ಷಗಾನ ಕಲಾವಿದ ಸದಾನಂದ ಹೆಗಡೆ, ಯಕ್ಷಗಾನ ಗುರು ಹಾಗೂ ಕರ್ನಾಟಕ ಕಲಾದರ್ಶಿನಿ ತಂಡದ ಮುಖ್ಯಸ್ಥರಾದ ಶ್ರೀನಿವಾಸ ಸಾಸ್ತಾನ, ಕಲಾವಿದ ಮಟ್ಟಿ ರಾಮಚಂದ್ರ ರಾವ್ ಮತ್ತಿತರರು ಭಾಗವಹಿಸಿದ್ದರು. ಯಕ್ಷಗಾನ ಕಾರ್ಯಕ್ರಮದಲ್ಲಿ, ಬಾಲಕಲಾವಿದರಾದ ಶ್ರೇಯಸ್ ಸರಳಾಯ, ಧೃತಿ ಅಮ್ಮೆಂಬಳ, ಸೃಷ್ಟಿ ಚೇತನ್ ಜಯಂತ, ಆಯುಷ್ ಎಸ್., ಶ್ರೀವತ್ಸ ಸರಳಾಯ, ಇಶಾನಿ ಎಸ್., ಶ್ರೇಷ್ಠಾ ಚೇತನ್ ಜಯಂತ, ಕೃತಿ ಅಮ್ಮೆಂಬಳ, ಧನುಶ್, ಪರ್ಯಂತ್ ಪಾತ್ರಗಳನ್ನು ನಿರ್ವಹಿಸಿದ್ದರು. ಹಿಮ್ಮೇಳದಲ್ಲಿ ಪ್ರಸನ್ನ ಹೆಗಡೆ (ಭಾಗವತ), ರಘು ಶರ್ಮ (ಮೃದಂಗ) ಮಂಜುನಾಥ ದೇವಾಡಿಗ (ಚೆಂಡೆ) ಭಾಗವಹಿಸಿದ್ದರು.

### ಕಿರುಚಿತ್ರ ಸ್ಪರ್ಧೆಗೆ ಅರ್ಜಿ ಆಹ್ವಾನ

• **ಬೆಂಗಳೂರು:** ಹೊಸದಿಲ್ಲಿಯ ಭಾರತದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ 2015ರಿಂದ ಮಾನವ ಹಕ್ಕುಗಳ ಕುರಿತು ಕಿರುಚಿತ್ರ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದೆ. 2026 ರಲ್ಲಿ ಸ್ಪರ್ಧೆಯ 12 ನೇ ಆವೃತ್ತಿಗೆ, ದೇಶದ ನಾಗರಿಕರಿಂದ ಆನ್‌ಲೈನ್‌ನಲ್ಲಿ ಪ್ರವೇಶವನ್ನು ಆಹ್ವಾನಿಸಿದೆ. ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಕ್ಕೆ ಬಹುಮಾನದ ಮೊತ್ತವು ಕ್ರಮವಾಗಿ ರೂ. 2 ಲಕ್ಷ, 1 ಲಕ್ಷ 50 ರೂ. ಸಾವಿರ ಮತ್ತು 1 ಲಕ್ಷ ರೂ. ಆಗಿರುತ್ತದೆ. ಆಯೋಗವು 3 ನಗದು ಪ್ರಶಸ್ತಿಗಳು, ಪ್ರಮಾಣಪತ್ರಗಳು ಮತ್ತು ಟ್ರೋಫಿಗಳ ಜತೆಗೆ, ತೀರ್ಪುಗಾರರು ಶಿಫಾರಸು ಮಾಡಿದ ಗರಿಷ್ಠ ನಾಲ್ಕು (4) ಚಿತ್ರಗಳಿಗೆ ತಲಾ 50 ಸಾವಿರ ರೂ. ನಗದು ಬಹುಮಾನದೊಂದಿಗೆ ಪ್ರಮಾಣಪತ್ರವನ್ನು ನೀಡಲಾಗುವುದು. ಕಿರುಚಿತ್ರಗಳು ಹಿಂದಿ ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿರಬಹುದು, ಇಂಗ್ಲೀಷ್‌ನಲ್ಲಿ ಉಪಶೀರ್ಷಿಕೆಗಳನ್ನು ಹಾಕಿರಬೇಕು. ಕಿರುಚಿತ್ರದ ಅವಧಿ ಕನಿಷ್ಠ 3 ನಿಮಿಷಗಳು ಮತ್ತು ಗರಿಷ್ಠ 10 ನಿಮಿಷಗಳು. ಪ್ರವೇಶಗಳನ್ನು ಸ್ವೀಕರಿಸಲು ಜೂ.30 ಕೊನೆಯ ದಿನವಾಗಿದೆ. ಗೂಗಲ್ ಡ್ರೈವ್ ಬಳಸಿ nhrcshortfilm@gmail.com ಗೆ ಆನ್‌ಲೈನ್‌ನಲ್ಲಿ ಕಿರುಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬೇಕು. ನಿಯಮಗಳು ಮತ್ತು ಷರತ್ತುಗಳು ಮತ್ತು ಅರ್ಜಿ ನಮೂನೆಯ ಪ್ರತಿಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವೆಬ್‌ಸೈಟ್ https://nhrc.nic.in ಅಥವಾ ಲಿಂಕ್ https://nhrc.nic.in/flipbook/files/255 ನಿಂದ ಡೌನ್ಲೋಡ್ ಮಾಡಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ. 011-24663281/24663367 ಸಂಪರ್ಕಿಸಬಹುದು ಎಂದು ಎನ್‌ಎಚ್‌ಆರ್‌ಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಉಪನಿರ್ದೇಶಕ ಜೈಮಿನಿ ಕುಮಾರ್ ಶ್ರೀವಾಸ್ತವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಸ್ರೋ ಜಂಕ್ಷನ್ ರಸ್ತೆ ಸಂಚಾರದಲ್ಲಿ ಮಾರ್ಪಾಡು

## ಜಿಬಿಎಯಿಂದ ಕೆಳಸೇತುವೆ ಕಾಮಗಾರಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಕೆಳ ಸೇತುವೆ ಕಾಮಗಾರಿ ಕೈಗೊಳ್ಳುವ ಸಲುವಾಗಿ ಮೇ 1ರಿಂದ 60 ದಿನಗಳ ಕಾಲ ಹಳೇ ವಿಮಾನ ನಿಲ್ದಾಣ ರಸ್ತೆಯ ಎಂಡ್‌ನೆಲ್ ರಸ್ತೆ ಜಂಕ್ಷನ್ (ಇಸ್ರೋ ಜಂಕ್ಷನ್) ಬಳಿ ಸಂಚಾರ ಮಾರ್ಪಾಡುಗೊಳಿಸಲಾಗುವುದು.

ಸಾರ್ವಜನಿಕರಹಿತದೃಷ್ಟಿಯಿಂದ ಜೆ.ಬಿ.ನಗರ ಸಂಚಾರ ಪೊಲೀಸರು ಪರ್ಯಾಯ ಮಾರ್ಗಗಳ ವ್ಯವಸ್ಥೆ ಮಾಡಿದ್ದಾರೆ. ಈ ಅವಧಿಯಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆಯ ದೊಮ್ಮಲೂರು ಫ್ಲೈಓವರ್‌ನಿಂದ ಮಾರತ್‌ಹಳ್ಳಿ ಕಡೆಗೆ ಸಾಗುವ ರಸ್ತೆಯಲ್ಲಿ ಸಂಚಾರ ಇರುವುದಿಲ್ಲ.ಎಸ್.ಡಿ.ರಸ್ತೆ ಜಂಕ್ಷನ್ ಕಡೆಯಿಂದ ದೊಮ್ಮಲೂರು ಕಡೆಗೆ ಸಂಚರಿಸುವ ಬಿಎಂಟಿಸಿ ಬಸ್ ಮತ್ತು ಭಾರಿ ವಾಹನಗಳಿಗೆ ನಿಷೇಧ ಹೇರಲಾಗಿದೆ. ಇಂದಿರಾನಗರ 12ನೇ ಮುಖ್ಯ ರಸ್ತೆಯಿಂದ 80 ಅಡಿ ರಸ್ತೆ ಕಡೆಗೆ ಸಂಚರಿಸುವ ವಾಹನಗಳಿಗೂ ತಾತ್ಕಾಲಿಕ ನಿರ್ಬಂಧ ವಿಧಿಸಲಾಗಿದೆ.

**ಪರ್ಯಾಯ ಮಾರ್ಗ:** ಮಾರತ್‌ಹಳ್ಳಿ ಕಡೆಗೆ ಸಂಚರಿಸುವವರು ದೊಮ್ಮಲೂರು ಫ್ಲೈಓವರ್ ವೃತ್ತದಲ್ಲಿ ಎಡಕ್ಕೆ ತಿರುಗಿ, 17ನೇ ಮುಖ್ಯ ರಸ್ತೆ ಹಾಗೂ ಇಂದಿರಾನಗರ 100 ಅಡಿ ರಸ್ತೆ ಮೂಲಕ ಸಾಗಿ ಬಿ.ಎಂ.ಶ್ರೀ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು, ತಿಪ್ಪಸಂದ್ರ ಮುಖ್ಯ ರಸ್ತೆ ಹಾಗೂ ಬೆಮೆಲ್ ಜಂಕ್ಷನ್ ಮುಖಾಂತರ ಹಳೇ ವಿಮಾನ ನಿಲ್ದಾಣ ರಸ್ತೆಯನ್ನು ಸೇರಬಹುದು.

## ಮ್ಯಾನೇಜರ್ ಅಸಭ್ಯ ವರ್ತನೆ: ದೂರು

• **ಬೆಂಗಳೂರು:** ಖಾಸಗಿ ಹೋಟೆಲ್‌ನಲ್ಲಿ ಯುವತಿಯೊಬ್ಬಳ ಮೇಲೆ ಮ್ಯಾನೇಜರ್ ಅಸಭ್ಯವಾಗಿ ವರ್ತಿಸಿ, ಹಲ್ಲೆ ನಡೆಸಿರುವ ಘಟನೆ ಎಂ.ಜಿ. ರಸ್ತೆಯಲ್ಲಿ ನಡೆದಿದೆ.

ಸಂತ್ರಸ್ತ ಯುವತಿ ನೀಡಿದ ದೂರಿನನ್ವಯ ಹೋಟೆಲ್ ಮ್ಯಾನೇಜರ್ ರವಿ ಎಂಬಾತನ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೀರ್ತಿ ಎಂಬ ಯುವತಿ ಏ.27ರಂದು ಮಧ್ಯಾಹ್ನ 2.30ರ ಸುಮಾರಿಗೆ ತಮ್ಮ ಸ್ನೇಹಿತರೊಂದಿಗೆ ಊಟಕ್ಕಾಗಿ ತಂದೂರ್ ಹೋಟೆಲ್‌ಗೆ ತೆರಳಿದ್ದರು. ಈ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಗ್ರಾಹಕರು ಮತ್ತು ಹೋಟೆಲ್ ಮ್ಯಾನೇಜರ್ ನಡುವೆ ಮಾತಿನ ಚಕಮಕಿ ಆರಂಭವಾಗಿದೆ. ಇದು ವಿಕೋಪಕ್ಕೆ ತಿರುಗಿದಾಗ ಮ್ಯಾನೇಜರ್ ರವಿ ಯುವತಿಯೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ. ರವಿ ತನ್ನನ್ನು ಅವಾಚ್ಯ ಶಬ್ದದಿಂದ ನಿಂದಿಸಿದ್ದಲ್ಲದೆ, ಮೈಮೇಲೆ ಕೈಹಾಕಿ ಹಲ್ಲೆ ನಡೆಸಿದ್ದಾನೆ ಅಷ್ಟೇ ಅಲ್ಲದೇ ಯುವತಿಯ ಬಟ್ಟೆ ಹರಿಯಲು ಯತ್ನಿಸಿ ಅಸಭ್ಯವಾಗಿ ವರ್ತಿಸಿದ್ದಾನೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಘಟನೆ ನಡೆದ ಕೂಡಲೇ ಸಂತ್ರಸ್ತೆಯು ಹಲಸೂರು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಹೋಟೆಲ್‌ನಲ್ಲಿನ ಸಿಸಿಟಿವಿ ದೃಶ್ಯಾವಳಿಯನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿ ಮ್ಯಾನೇಜರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದವರಿಂದ ವಾಸ: ತಪ್ಪಿದ ಪ್ರಾಣಾಪಾಯ

## ಕಾರ್ಮಿಕರಿದ್ದ 12 ಗುಡಿಸಲಿಗೆ ಬೆಂಕಿ

• **ಬೆಂಗಳೂರು:** ಸೋಮಸುಂದರಪಾಳ್ಯದಲ್ಲಿ ಪಶ್ಚಿಮ ಬಂಗಾಳ ಮೂಲದ ಕಾರ್ಮಿಕರು ವಾಸವಿದ್ದ ಸುಮಾರು 12 ಗುಡಿಸಲುಗಳಿಗೆ ಆಕಸ್ಮಿಕ ಬೆಂಕಿ ತಗುಲಿ ಸುಟ್ಟು ಭಸ್ಮವಾಗಿರುವ ಘಟನೆ ಭಾನುವಾರ ಮುಂಜಾನೆ ಸಂಭವಿಸಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.



ಬಂಡೇಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಎಚ್‌ಎಸ್‌ಆರ್ 2ನೇ ವಲಯದ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆಯ ಕೊನೆಯ ಭಾಗದಲ್ಲಿರುವ ಪ್ರಕಾಶ್ ಎಂಬವರಿಗೆ ಸೇರಿದ ಜಾಗದಲ್ಲಿ ಈ ಅವಘಡ ನಡೆದಿದೆ. ಭಾನುವಾರ ಬೆಳಗಿನ ಜಾವ ಸುಮಾರು 3ಗಂಟೆಯ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸ್ಥಳೀಯರ ಮಾಹಿತಿ ಮೇರೆಗೆ ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತು ಬಂಡೇಪಾಳ್ಯ ಪೊಲೀಸರು ಸುಮೊಟೊ ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಮುಂದುವರಿಸಿದ್ದಾರೆ.

**ಲಕ್ಷಾಂತರ ಮೌಲ್ಯದ ವಸ್ತುಗಳು ನಾಶ:** ಬೆಂಕಿಯ ಕೆನ್ನಾಲಿಗೆಗೆ ಗುಡಿಸಲುಗಳಲ್ಲಿದ್ದ ಒಂದು ಫ್ರಿಜ್, ಎರಡು ಹಳೆಯ ಸ್ಕೂಟರ್‌ಗಳು, ಎರಡು ಸೈಕಲ್ ಸೇರಿದಂತೆ ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ. ಘಟನಾ ಸ್ಥಳದಲ್ಲಿ ಐದಾರು ಗ್ಯಾಸ್ ಸಿಲಿಂಡರ್‌ಗಳು ಪತ್ತೆಯಾಗಿದ್ದು, ಬೆಂಕಿ ಕಾಣಿಸಿಕೊಂಡ ನಂತರ ಸಿಲಿಂಡರ್‌ಗಳು ಸ್ಫೋಟಗೊಂಡಿರುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

**ಗಾಂಜಾ ವ್ಯಸನಿಗಳ ಕೃತ್ಯವೇ?:** ಘಟನೆಯ ಬಗ್ಗೆ ಸ್ಥಳೀಯರು ಗಂಭೀರ ಆರೋಪವೊಂದನ್ನು ಮಾಡಿದ್ದಾರೆ. ಸೆಕೆಯಿಂದಾಗಿ ನಿದ್ದೆ ಬಾರದೆ ಬಾಗಿಲು ತೆರೆದು ಹೊರಗೆ ಬಂದಾಗ ಬೆಂಕಿ ಉರಿಯುತ್ತಿತ್ತು. ಇದಕ್ಕೂ ಮೊದಲು ಗಾಂಜಾ ಸೇವಿಸಿದ್ದ ಕೆಲವು ಯುವಕರು ಇಲ್ಲಿ ಗಲಾಟೆ ಮಾಡುತ್ತಿದ್ದರು. ಅವರ ಗಲಾಟೆಯ ನಂತರವೇ ಈ ದುರಂತ ಸಂಭವಿಸಿದೆ ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ. ಆದರೆ, ಪೊಲೀಸರು ಈ ಆರೋಪವನ್ನು ತಳ್ಳಿಹಾಕಿದ್ದು, ಗಾಂಜಾ ವ್ಯಸನಿಗಳ ಕೃತ್ಯ ಎಂಬುದು ಸದ್ಯಕ್ಕೆ ಸುಳ್ಳು ಸುದ್ದಿ, ನಾವು ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

### ಚುನಾವಣೆಗೆ ತೆರಳಿದ್ದ ನಿವಾಸಿಗಳು

ಈ ಗುಡಿಸಲುಗಳಲ್ಲಿ ಪಶ್ಚಿಮ ಬಂಗಾಳ ಮೂಲದ ಕಾರ್ಮಿಕರು ವಾಸವಿದ್ದರು. ಸದ್ಯ ಆ ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಬಹುತೇಕ ನಿವಾಸಿಗಳು ತಮ್ಮ ಊರುಗಳಿಗೆ ತೆರಳಿದ್ದರು. ಬೆಂಕಿ ಸಂಭವಿಸಿದ ಸಮಯದಲ್ಲಿ ಗುಡಿಸಲುಗಳಲ್ಲಿ ಯಾರೂ ಇಲ್ಲದ ಕಾರಣ ಭಾರಿ ಸಾವು-ನೋವು ತಪ್ಪಿದಂತಾಗಿದೆ.



ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ಶಂಕರಮಠ ವಾರ್ಡಿನ ಕಾವೇರಿನಗರದಲ್ಲಿನ ರಸ್ತೆಗಳ ದುರಸ್ತಿ ಒಳಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಶಾಸಕ ಕೆ.ಗೋಪಾಲಯ್ಯ ಸಾರ್ವಜನಿಕರೊಂದಿಗೆ ಚರ್ಚಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಅಕ್ರಮ ಸಂಬಂಧ ಹಿನ್ನೆಲೆಯಲ್ಲಿ ವಿಕೃತಿ : ದೂರು ದಾಖಲು

## ಕೈ ಮುಖಂಡನಿಂದ ಮಕ್ಕಳ ಮೇಲೆ ಹಲ್ಲೆ

• **ಬೆಂಗಳೂರು:** ಅಕ್ರಮ ಸಂಬಂಧದ ವಿಚಾರವಾಗಿ ಕಾಂಗ್ರೆಸ್ ಮುಖಂಡನೊಬ್ಬ ಮನುಷ್ಯತ್ವ ಮರೆತು ಅಪ್ರಾಪ್ತ ಮಕ್ಕಳ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿರುವ ಘಟನೆ ಬೆಳಕಿಗೆ ಬಂದಿದೆ.

ಬೆಂಗಳೂರು ಉತ್ತರ ಜಿಲ್ಲಾ ಡಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಆನಂದ್ ನಾಯ್ಡು ಎಂಬಾತನ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರುದಾರ ರಾಘವೇಂದ್ರ ಎಂಬವರ ಪತ್ನಿಯ ಜತೆ ಆನಂದ್ ನಾಯ್ಡು ಅಕ್ರಮ ಸಂಬಂಧ ಹೊಂದಿದ್ದ ಎನ್ನಲಾಗಿದೆ. ಈ ಅಕ್ರಮ ವ್ಯವಹಾರವನ್ನು ಪತಿ ರಾಘವೇಂದ್ರ ಅವರು ಪ್ರಶ್ನಿಸಿದ್ದು, ಇದರಿಂದ ಆಕ್ರೋಶಗೊಂಡ ಮುಖಂಡ ತನ್ನ ವಿಕೃತಿಯನ್ನು ಮಕ್ಕಳ ಮೇಲೆ ತೋರಿಸಿದ್ದಾನೆ. ರಾಘವೇಂದ್ರ ಅವರ ಅಪ್ರಾಪ್ತ ಮಕ್ಕಳ ಮೇಲೆ ಮನಬಂದಂತೆ ಹಲ್ಲೆ ನಡೆಸಿರುವ ಆನಂದ್ ನಾಯ್ಡು, ಕಬ್ಬಿಣದ ರಾಡ್‌ನಿಂದ ಮಕ್ಕಳ ಕಾಲು ಹಾಗೂ ಮೈಮೇಲೆ ಹೊಡೆದು ಗಂಭೀರವಾಗಿ ಗಾಯಗೊಳಿಸಿದ್ದಾನೆ. ಅಷ್ಟೇ ಅಲ್ಲದೆ, ಮಕ್ಕಳಿಗೆ ಹಲ್ಲಿನಿಂದ ಕಚ್ಚಿ ವಿಕೃತಿ ಮೆರೆದಿರುವುದು ದೂರಿನಲ್ಲಿ ಉಲ್ಲೇಖವಾಗಿದೆ.

### ಆಸ್ತಿ ಲೂಟಿ ಮತ್ತು ಪಿತೂರಿ

ಕೇವಲ ದೈಹಿಕ ಹಲ್ಲೆ ಮಾತ್ರವಲ್ಲದೆ, ಆರ್ಥಿಕವಾಗಿಯೂ ಸಂತ್ರಸ್ತ ಕುಟುಂಬಕ್ಕೆ ವಂಚಿಸಿರುವ ಆರೋಪ ಕೇಳಿಬಂದಿದೆ. ಪತಿ ರಾಘವೇಂದ್ರ ಅವರ ಒಪ್ಪಿಗೆ ಇಲ್ಲದೆಯೇ ಅವರ ಪತ್ನಿ ಮತ್ತು ಆನಂದ್ ನಾಯ್ಡು ಸೇರಿಕೊಂಡು ಬೆಲೆಬಾಳುವ ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಈ ಮೂಲಕ ಅಕ್ರಮ ಸಂಬಂಧ ಮತ್ತು ಆಸ್ತಿ ಹಗರಣದ ಕರಾಳ ಮುಖ ಈಗ ಸಾರ್ವಜನಿಕವಾಗಿ ಬಯಲಾಗಿದೆ.

ಮಕ್ಕಳ ಮೇಲೆ ನಡೆದ ಪೈಶಾಚಿಕ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಿರುವ ಅನ್ನಪೂರ್ಣೇಶ್ವರಿ ನಗರ ಪೊಲೀಸರು, ಮಕ್ಕಳ ಹೇಳಿಕೆ ಹಾಗೂ ತಂದೆಯ ದೂರಿನ ಅನ್ವಯ ಆನಂದ್ ನಾಯ್ಡು ವಿರುದ್ಧ ಪೋಕ್ಸೋ ಕಾಯ್ದೆ ಹಾಗೂ ಬಿಎನ್‌ಎಸ್ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಯುವತಿ ಅನುಮಾನಾಸ್ಪದ ಸಾವು

• **ಬೆಂಗಳೂರು:** ಬಾಡಿಗೆ ಮನೆಯೊಂದರಲ್ಲಿ ಯುವತಿಯೊಬ್ಬಳು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ.

ಮೃತ ಯುವತಿಯನ್ನು ಜಾರ್ಖಂಡ್ ಮೂಲದ ಪೂಜಾ ದತ್ತಾ (34) ಎಂದು ಗುರುತಿಸಲಾಗಿದೆ. ಮೃತ ಪೂಜಾ ದತ್ತಾ ಅವರು ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಆಡುಗೋಡಿಯ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಕಳೆದ ಎರಡು ಮೂರು ದಿನಗಳಿಂದ ಪೂಜಾ ಅವರ ಮನೆ ಬಾಗಿಲು ತೆರೆಯದ ಹಿನ್ನೆಲೆ ಹಾಗೂ ಮನೆಯ ಒಳಗಿನಿಂದ ವಿಪರೀತ ದುರ್ವಾಸನೆ ಬರುತ್ತಿದ್ದ ಕಾರಣ, ನೆರೆಹೊರೆಯವರು ಅನುಮಾನಗೊಂಡು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.



ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಆಡುಗೋಡಿ ಪೊಲೀಸರು ಮನೆಯ ಬಾಗಿಲು ಮುರಿದು ಒಳಪ್ರವೇಶಿಸಿದಾಗ ಪ್ರಕರಣದ ಭೀಕರತೆ ಬಯಲಾಗಿದೆ. ಯುವತಿಯ ಮೃತದೇಹವು ಸಂಪೂರ್ಣ ಬೆತ್ತಲೆ ಸ್ಥಿತಿಯಲ್ಲಿ ಹಾಗೂ ಅರೆಬರೆ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೃತದೇಹವು ಸಂಪೂರ್ಣವಾಗಿ ಕೆಟ್ಟು ಹೋಗಿರುವುದರಿಂದ, ಸಾವು ಸಂಭವಿಸಿ ಕನಿಷ್ಠ 2 ರಿಂದ 3ದಿನಗಳು ಕಳೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಯುವತಿಯ ಸಾವು ಆಕಸ್ಮಿಕವೇ ಅಥವಾ ಕೊಲೆಯೇ ಎಂಬ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದ್ದು, ವರದಿಯ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಸದ್ಯಕ್ಕೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೃತರ ಕುಟುಂಬದವರಿಗೆ ಮಾಹಿತಿ ನೀಡಿದ್ದಾರೆ.

ವಿವಿಧೆಡೆ ಪೊಲೀಸ್ ದಾಳಿ: 24 ಮಂದಿ ಬಂಧನ

## ಐಪಿಎಲ್ ಟಿಕೆಟ್ ಅಕ್ರಮ ಮಾರಾಟ

• **ಬೆಂಗಳೂರು:** ಕಳೆದ ಒಂದು ತಿಂಗಳ ಅವಧಿಯಲ್ಲಿ ನಗರದ ವಿವಿಧೆಡೆ ದಾಳಿ ನಡೆಸಿದ ಪೊಲೀಸರು ಐಪಿಎಲ್ ಪಂದ್ಯಗಳ ಟಿಕೆಟ್ ಅನ್ನು ಬ್ಲಾಕ್‌ನಲ್ಲಿ ಹೆಚ್ಚಿನ ಬೆಲೆ ಮಾರಾಟ ಮಾಡುತ್ತಿದ್ದ 24 ಮಂದಿ ಆರೋಪಿಗಳನ್ನು ಬಂಧಿಸಿ, 17 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಕೇಂದ್ರ ವಿಭಾಗದ ಪೊಲೀಸರು ನಡೆಸಿದ ಈ ಕಾರ್ಯಾಚರಣೆಯಲ್ಲಿ, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 16 ಹಾಗೂ ಹಲಸೂರು ಗೇಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದು ಪ್ರಕರಣ ದಾಖಲಾಗಿದೆ. ಬಂಧಿತರಿಂದ ಒಟ್ಟು 37 ಐಪಿಎಲ್ ಟಿಕೆಟ್ ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಮಾಹಿತಿ ನೀಡಿದ್ದಾರೆ.

• **ಸಿಸಿಬಿಯಿಂದಲೂ ತೀವ್ರ ದಾಳಿ:** ಸ್ಥಳೀಯ ಪೊಲೀಸರ ಜತೆಗೆ ಸಿಸಿಬಿ ಅಧಿಕಾರಿಗಳು ಸಹ ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಖನೌ ಸೂಪರ್ ಜೈಂಟ್ಸ್ ನಡುವಿನ ಪಂದ್ಯದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಅಕ್ರಮವಾಗಿ ಟಿಕೆಟ್ ಮಾರುತ್ತಿದ್ದ ಪಿ. ಚಂದ್ರಶೇಖರ್ ಎಂಬ ಕ್ಯಾಂಟೀನ್ ನೌಕರನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಈತನ ಬಳಿ ಬರೋಬ್ಬರಿ 100ಕ್ಕೂ ಹೆಚ್ಚು ಟಿಕೆಟ್‌ಗಳು ಪತ್ತೆಯಾಗಿವೆ.

ಕಂಪನಿಗಳ ವಿರುದ್ಧವೂ ಎಫ್‌ಐಆರ್: ಈ ದಂಧೆಯ ಹಿಂದೆ ದೊಡ್ಡ ಮಟ್ಟದ ಜಾಲವಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಕಾರ್ಪೊರೇಟ್ ಕಂಪನಿಗಳ ಹೆಸರಿನಲ್ಲಿ ಅಧಿಕೃತವಾಗಿ ಖರೀದಿಸಿದ ಟಿಕೆಟ್‌ಗಳನ್ನು ದುರ್ಬಳಕೆ ಮಾಡಿಕೊಂಡು ಅಕ್ರಮ ಮಾರ್ಗದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧವೂ ಸಿಸಿಬಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ವಿಚಾರಣೆ ಚುರುಕುಗೊಳಿಸಿದ್ದಾರೆ.

### ಇಂದು ನಗರದಲ್ಲಿ...

- ಬಲಮುರಿ ಗಣೇಶ ಕುಂಭಾಭಿಷೇಕ. ಸ್ಥಳ: ಸಿರೂರು ಪಾರ್ಕ್ ರೋಡ್, ಶೇಷಾದ್ರಿಪುರಂ, ಬೆಳಗ್ಗೆ 7
- ಬುದ್ಧ ಜಯಂತಿ ವಿಶೇಷ ಉಪನ್ಯಾಸ. ಸ್ಥಳ: ಡಾ.ಮನಮೋಹನ್ ಸಿಂಗ್ ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 12:30
- ಶಿವರಾತ್ರಿ ಸಂದರ್ಭದ ಕಾವ್ಯವಾಚನ. ಸ್ಥಳ: ಆಂಜನೇಯಸ್ವಾಮಿ ದೇವಸ್ಥಾನ, ರಾಗೀಗುಡ್ಡ, ಜಯನಗರ, ಸಂಜೆ 6:30
- ವಿಶ್ವ ನೃತ್ಯ ದಿನಾಚರಣೆ ನಿಮಿತ್ತ ವಿಶೇಷ ನೃತ್ಯ ಪ್ರದರ್ಶನ. ಸ್ಥಳ: ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರ, ಸಂಜೆ 7




## ಐಪಿಎಲ್-2026 ಅಂಕಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ರನ್‌ರೇಟ್ |
|---|---|---|---|---|---|---|
| ಪಂಜಾಬ್ | 8 | 6 | 1 | 1 | 13 | +1.043 |
| ಆರ್‌ಸಿಬಿ | 8 | 6 | 2 | 0 | 12 | +1.919 |
| ರಾಜಸ್ಥಾನ | 9 | 6 | 3 | 0 | 12 | +0.617 |
| ಹೈದರಾಬಾದ್ | 8 | 5 | 3 | 0 | 10 | +0.815 |
| ಗುಜರಾತ್ | 8 | 4 | 4 | 0 | 8 | -0.475 |
| ಚೆನ್ನೈ | 8 | 3 | 5 | 0 | 6 | -0.121 |
| ದಿಲ್ಲಿ | 8 | 3 | 5 | 0 | 6 | -1.060 |
| ಕೆಕೆಆರ್ | 8 | 2 | 5 | 1 | 5 | -0.751 |
| ಮುಂಬೈ | 7 | 2 | 5 | 0 | 4 | -0.736 |
| ಲಖನೌ | 8 | 2 | 6 | 0 | 4 | -1.106 |

## ಕಿರುಸುದ್ದಿ

### ಸ್ವಿಂಗ್ ಸಿಕ್ಕಿರುವುದೇ ದೊಡ್ಡ ಬಲ: ಭುವನೇಶ್ವರ ಕುಮಾರ್

• **ಹೊಸದಿಲ್ಲಿ:** ದಿಲ್ಲಿ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವಿಗೆ ಪ್ರಮುಖ ಕಾರಣವಾದ ಭುವನೇಶ್ವರ ಕುಮಾರ್ ತಮ್ಮ ಬೌಲಿಂಗ್ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ಸೋಮವಾರದ ಪಂದ್ಯದಲ್ಲಿ ನಡೆದ ಪಂದ್ಯದಲ್ಲಿ ಕೇವಲ 5 ರನ್ ನೀಡಿ 3 ವಿಕೆಟ್ ಪಡೆದ ಭುವನೇಶ್ವರ, ಆರಂಭದಲ್ಲೇ ಸ್ವಿಂಗ್ ಬಳಸಿಕೊಂಡು ಎದುರಾಳಿಯನ್ನು ಒತ್ತಡಕ್ಕೆ ಒಳಪಡಿಸಿದರು. ಪಂದ್ಯದ ಬಳಿಕ ಮಾತನಾಡಿದ ಅವರು, ಈ ಸೀಸನ್‌ನಲ್ಲಿ ಸ್ವಿಂಗ್ ಸ್ವಲ್ಪ ಹೆಚ್ಚಾಗಿದೆ. ಬಾಲ್ ಸ್ವಿಂಗ್ ಆದಾಗ ಮತ್ತು ಆರಂಭದಲ್ಲೇ ವಿಕೆಟ್ ಸಿಕ್ಕಾಗ, ಮುಂದೆ ಕೆಲಸ ಸುಲಭವಾಗುತ್ತದೆ. ಇಂದು ಅಂತಹ ದಿನಗಳಲ್ಲಿ ಒಂದಾಗಿತ್ತು. ಎಡ್ಜ್ ಅಥವಾ ಬೌಲ್ಡ್ ಆಗಿ ಫಲ ಸಿಕ್ಕಿತು, ಎಂದು ಹೇಳಿದರು. ಹಿಂದಿನ ಪಂದ್ಯದಲ್ಲಿ 250ಕ್ಕೂ ಹೆಚ್ಚು ರನ್ ಆಗಿದ್ದರಿಂದ, ಇಂತಹ ಪಿಚ್ ಸ್ವಲ್ಪ ಅಚ್ಚರಿಯಾಯ್ತು. ಆದರೆ ಬಾಲ್ ಸ್ವಿಂಗ್ ಆಗುವುದು ಎಂದು ಗಮನಿಸಿದ ಮೇಲೆ ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದೆವು, ಎಂದರು. ಭುವನೇಶ್ವರನ ಈ ಪರಿಣಾಮಕಾರಿ ಬೌಲಿಂಗ್‌ನಿಂದ ದಿಲ್ಲಿ ಕ್ಯಾಪಿಟಲ್ಸ್ ತಂಡ ಕೇವಲ 75 ರನ್‌ಗೆ ಸೀಮಿತವಾಯಿತು. ಈ ಆರಂಭಿಕ ದಾಳಿಯೇ ಪಂದ್ಯವನ್ನು ಸಂಪೂರ್ಣವಾಗಿ ಆರ್‌ಸಿಬಿ ಪರ ತಳ್ಳಿತು.

### 6 ಬಿಸಿಸಿಐ ಅಕಾಡೆಮಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

• **ಗ್ಯಾಂಗ್ಟಾಕ್ (ಸಿಕ್ಕಿಂ):** ಈಶಾನ್ಯ ರಾಜ್ಯಗಳಲ್ಲಿ ಆರು ಕಡೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ನಿರ್ಮಿಸಿರುವ ಒಳಾಂಗಣ ಕ್ರಿಕೆಟ್ ಅಕಾಡೆಮಿಗಳನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಉದ್ಘಾಟಿಸಿದರು. ಸಿಕ್ಕಿಂ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, 6 ಹೈಪರ್ಫಾರ್ಮನ್ಸ್ ಕ್ರಿಕೆಟ್ ಕ್ಲಬ್‌ಗಳನ್ನು ವರ್ಚುವಲ್ ಚಾಲನೆ ನೀಡಿದರು. ಈಶಾನ್ಯದಲ್ಲಿ ಕ್ರಿಕೆಟ್ ಕಹಳೆ ಮೊಳಗಿಸಲು ಮತ್ತು ಯುವಕರಿಗೆ ಅವಕಾಶ ಕಲ್ಪಿಸುವ ಯೋಜನೆಯಲ್ಲಿ ಕ್ರಮವನ್ನು ಕೈಗೊಂಡ ಬಿಸಿಸಿಐ ಸಿಕ್ಕಿಂನ ರಾಂಗ್ಪೊ, ಅರುಣಾಚಲ ಪ್ರದೇಶದ ದೋಯಿಮುಖ್, ಮಣಿಪುರದ ಇಂಫಾಲ್, ಮೇಘಾಲಯದ ಮದನ್ ಕುರ್ಕಲಾಂಗ್, ಮಿಜೋರಾಂನ ಐಝ್ವಾಲ್, ನಾಗಾಲ್ಯಾಂಡ್‌ನ ದಿಮಾಪುರದಲ್ಲಿ ಕ್ಲಬ್‌ಗಳನ್ನು ಅಭಿವೃದ್ಧಿ ಪಡಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ಎಲ್ಲಾ ಬಿಸಿಸಿಐ ಸದಸ್ಯರು ಮತ್ತು ಐಸಿಸಿ ಅಧ್ಯಕ್ಷ ಜಯ್ ಶಾ ಕೂಡ ಇದ್ದರು. ಅಕಾಡೆಮಿಗಳು ಒಳಾಂಗಣ ಕ್ರೀಡಾಂಗಣಗಳಲ್ಲಿ ನಿರ್ಮಿಸಲಾಗಿದೆ. ಇವುಗಳು ಹೈಪರ್ಫಾರ್ಮನ್ಸ್ ಸೆಂಟರ್, ಒಳಾಂಗಣ ಅಭ್ಯಾಸ ಪಿಚ್, ಹೈ-ಟೆಕ್ ಜಿಮ್, ಈಜುಕೊಳ ಮತ್ತು ಟ್ರೇನಿಂಗ್ ಬ್ಲಾಕ್‌ಗಳನ್ನೂಯ ಹೊಂದಿರಲಿವೆ.

### ಜೂನಿಯರ್ ವೇಟ್‌ಲಿಫ್ಟಿಂಗ್: ಭಾರತಕ್ಕೆ ವಿವಿಧ ಪದಕ

• **ಹೊಸದಿಲ್ಲಿ:** ಸಮೋವಾದ ಅಪಿಯಾದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಯೂತ್ ಮತ್ತು ಜೂನಿಯರ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಮತ್ತು ಅದಕ್ಕೆ ಅನುಗುಣವಾದ ಯೂನಿವರ್ಸಲ್ ಕಪ್ (ಸೀನಿಯರ್) ಸ್ಪರ್ಧೆಯ ಎರಡನೇ ದಿನದಂದು ಭಾರತೀಯರು ನಾಲ್ಕು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. 65 ಕೆಜಿ ಪುರುಷರ ವಿಭಾಗದಲ್ಲಿ ಸುನಿಲ್ ಸಿಂಗ್ ಒಟ್ಟು 271 ಕೆಜಿ (ಸ್ನ್ಯಾಚ್‌ನಲ್ಲಿ 126 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 145 ಕೆಜಿ) ಭಾರ ಎತ್ತಿ ಚಿನ್ನ ಗೆದ್ದರು, ಮಹಿಳೆಯರ 58 ಕೆಜಿ ವಿಭಾಗದಲ್ಲಿ ಐಸಾಂಗ್ಬಾ ಗೊಗೊಯ್ ಅಗ್ರ ಬಹುಮಾನ ಗೆದ್ದರು ಮತ್ತು ಪುರುಷರ 71 ಕೆಜಿ ವಿಭಾಗದಲ್ಲಿ ಅಭಿನೋಬ್ ಗೊಗೊಯ್ ಚಿನ್ನದ ಪದಕ ಗೆದ್ದರು. 58 ಕೆಜಿ ಮಹಿಳೆಯರ ವಿಭಾಗದಲ್ಲಿ ಐಸಾಂಗ್ಬಾ ಒಟ್ಟು 185 ಕೆಜಿ (ಸ್ನ್ಯಾಚ್‌ನಲ್ಲಿ 79 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 106 ಕೆಜಿ) ಭಾರ ಎತ್ತಿ ಚಿನ್ನ ಗೆದ್ದರು, ಆದರೆ ಅಭಿನೋಬ್ ಒಟ್ಟು 284 ಕೆಜಿ (ಸ್ನ್ಯಾಚ್‌ನಲ್ಲಿ 129 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 155 ಕೆಜಿ) ಭಾರ ಎತ್ತಿ 71 ಕೆಜಿ ಪುರುಷರ ವಿಭಾಗದಲ್ಲಿ ಅಗ್ರ ಸ್ಥಾನ ಪಡೆದರು.

## ಕಿಂಗ್ ಕೊಹ್ಲಿ ಹೆಸರಿಗೆ ಯಾರೂ ಮಾಡದ ದಾಖಲೆ
## ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯದ ವೇಳೆ ದಾಖಲೆ

**9000** ಐಪಿಎಲ್‌ನಲ್ಲಿ ಕೊಹ್ಲಿ ಬಾರಿಸಿದ ರನ್

# ವಿರಾಟ ರನ್ ಪರ್ವತ!

ಕ್ರಿಕೆಟ್ ಲೋಕದ ಬೆಸ್ಟ್ ಬ್ಯಾಟರ್‌ಗಳಲ್ಲಿ ಒಬ್ಬ, ಅಭಿಮಾನಿಗಳ ಪಾಲಿನ ಕಿಂಗ್, ಬೆಂಗಳೂರು ತಂಡದ ಪ್ರಮುಖ ಮತ್ತು ಪ್ರಬಲ ಆಟಗಾರ. ಚೇಸ್ ಮಾಸ್ಟರ್, ರನ್ ಮಶೀನ್ ಹೀಗೆ ಹತ್ತಾರು ಬಿರುದು ಪಡೆದಿರುವ ವಿರಾಟ್ ಕೊಹ್ಲಿ, ಭಾರತೀಯ ಕ್ರಿಕೆಟ್ ಕ್ಷೇತ್ರದಲ್ಲಿ ಮತ್ತೊಮ್ಮೆ ಅಚ್ಚಳಿಯದ ದಾಖಲೆ ಮಾಡಿದರು.

ಸೋಮವಾರದಂದು ಐಪಿಎಲ್‌ನಲ್ಲಿ ಬೆಂಗಳೂರು ಮತ್ತು ದಿಲ್ಲಿ ತಂಡಗಳು ಎದುರಾಗಿದ್ದವು. ಇದರಲ್ಲಿ ಆರ್‌ಸಿಬಿ ಏಕಪಕ್ಷೀಯ ಗೆಲುವು ಸಾಧಿಸಿತು. ಇದೇ ಪಂದ್ಯದಲ್ಲಿ ಜಗತ್ತಿನಲ್ಲಿ ಯಾರೂ ಮಾಡದ, ಯಾರಿಂದಲೂ ಸರಳವಾಗಿ ಮಾಡಲಾಗದ ದಾಖಲೆಯೊಂದನ್ನು ಬರೆದು ಮೆರೆದಾಡಿದರು ವಿರಾಟ್ ಕೊಹ್ಲಿ.

ದಿಲ್ಲಿ ಕ್ಯಾಪಿಟಲ್ಸ್ ಮೊದಲು ಬ್ಯಾಟಿಂಗ್ ಮಾಡಿ 75ಕ್ಕೆ ಪತನಗೊಂಡಿತ್ತು. ಆರ್‌ಸಿಬಿ ತಡ ಮಾಡದೆ ದಂಡಿಸಿ 6.3 ಓವರ್‌ಗಳಲ್ಲಿ ಪಂದ್ಯ ಮುಗಿಸಿತು. ಈ ಚಿಕ್ಕ ಇನ್ನಿಂಗ್ಸ್‌ನಲ್ಲಿ ಕೊಹ್ಲಿ 23 ರನ್ ಬಾರಿಸಿದರು. ಇದೇ ವೇಳೆ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 9 ಸಾವಿರ ರನ್ ಪೂರೈಸಿದರು. ಇದೇ ಯಾರೂ ಮಾಡದ ಸಾಧನೆ! ಇದೇ ಇತಿಹಾಸದಲ್ಲಿ ಏಕೈಕ ಆಟಗಾರ ಮಾಡಿದ ದಾಖಲೆ. ಇದೇ ಐಪಿಎಲ್‌ನಲ್ಲಿ ಬ್ಯಾಟರ್ ಒಬ್ಬ ಮಾಡಬಹುದಾದ ದೊಡ್ಡ ಸಾಧನೆಯಾಗಿದೆ.ಆಗ 2008. ಐಪಿಎಲ್‌ನ ಮೊದಲನೇ ಆವೃತ್ತಿಗೆ ಸಿದ್ಧತೆ ನಡೆಯುತ್ತಿತ್ತು. ಹರಾಜಿನಲ್ಲಿ ನೂರಾರು ಹೆಸರು. ಆದರೆ ಆಗಷ್ಟೇ ಅಂಡರ್-19 ವಿಶ್ವಕಪ್ ತಂದುಕೊಟ್ಟಿದ್ದ ವಿರಾಟ್ ಕೊಹ್ಲಿ ಹೆಸರು ಹರಾಜಿನಲ್ಲಿರಲಿಲ್ಲ, ಆದರೆ ಐಪಿಎಲ್‌ನ ಆಗಿನ ಮಾನದಂಡ ಪ್ರಕಾರ ಭಾರತದ ಅಂಡರ್-19 ಆಟಗಾರರನ್ನು ಸೇರಿಸಿಕೊಳ್ಳಲು ವಿಶೇಷ ಅವಕಾಶ ನೀಡಲಾಗಿತ್ತು. ಅಲ್ಲೇ ಆರ್‌ಸಿಬಿ ವಿಶ್ವಕಪ್ ಗೆಲ್ಲಿಸಿದ್ದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅವರನ್ನು ಸೇರಿಸಿಕೊಂಡಿತು. ಆಗಿನಿಂದಲೇ ಶುರುವಾಯಿತು ಕೊಹ್ಲಿ ರನ್ ಪರ್ವತ.

**ಐಪಿಎಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ 5 ಬ್ಯಾಟರ್ಸ್**

| ಆಟಗಾರ | ತಂಡ | ರನ್ |
|---|---|---|
| ವಿರಾಟ್ ಕೊಹ್ಲಿ | ಆರ್‌ಸಿಬಿ | 9012 |
| ರೋಹಿತ್ ಶರ್ಮ | ಮುಂಬೈ | 7183 |
| ಶಿಖರ್ ಧವನ್ | ಪಂಜಾಬ್ | 6769 |
| ವಾರ್ನರ್ | ದಿಲ್ಲಿ | 6565 |
| ರಾಹುಲ್ | ದಿಲ್ಲಿ | 5580 |



**ಪ್ರತಿ ಆವೃತ್ತಿಯಲ್ಲೂ ಕೊಹ್ಲಿ ರನ್**

| ವರ್ಷ | ಪಂದ್ಯ | ರನ್ |
|---|---|---|
| 2008 | 13 | 165 |
| 2009 | 16 | 246 |
| 2010 | 16 | 307 |
| 2011 | 16 | 557 |
| 2012 | 16 | 364 |
| 2013 | 16 | 634 |
| 2014 | 14 | 359 |
| 2015 | 16 | 505 |
| 2016 | 16 | 973 |
| 2017 | 10 | 308 |
| 2018 | 14 | 530 |
| 2019 | 14 | 464 |
| 2020 | 15 | 466 |
| 2021 | 15 | 405 |
| 2022 | 16 | 341 |
| 2023 | 14 | 639 |
| 2024 | 15 | 741 |
| 2025 | 15 | 657 |
| 2026 | 8* | 351* |

### ದಾಖಲೆಯ ಸರದಾರ

ಪ್ರತಿ ಪಂದ್ಯದಲ್ಲೂ ವಿರಾಟ್ ಕೊಹ್ಲಿ ಹೊಸ ದಾಖಲೆ ಮಾಡುತ್ತಾರೆ. ಐಪಿಎಲ್ ಇತಿಹಾಸದಲ್ಲಿ ಕೊಹ್ಲಿ ಪ್ರಭಾವ ಯಾವ ಮಟ್ಟದಲ್ಲಿದೆ ಎಂದರೆ, ಪಂದ್ಯವೊಂದರಲ್ಲಿ ಕೊಹ್ಲಿ ಮೈದಾನಕ್ಕಿಳಿದರೆ ಸಾಕು, ದಾಖಲೆಯ ಪುಸ್ತಕದಲ್ಲಿ ಇತಿಹಾಸವೊಂದು ಮೂಡುತ್ತದೆ. ಪ್ರತಿ ಆವೃತ್ತಿಯಲ್ಲೂ ದಾಖಲೆಗಳ ಶಿಖರ ಕಟ್ಟಿರುವ ಕೊಹ್ಲಿ ಇದೀಗ 9 ಸಾವಿರ ರನ್ ಬಾರಿಸಿದ್ದಾರೆ. ಇದು ಐಪಿಎಲ್‌ನಲ್ಲಿ ಯಾವುದೇ ಬ್ಯಾಟರ್ ಗಳಿಸಿದ್ದಕ್ಕಿಂತ ಹೆಚ್ಚು.

### ಒಂದು ತಂಡ; 9 ಸಾವಿರ ರನ್‌ಗಳ ಇತಿಹಾಸ

ಐಪಿಎಲ್‌ನಂತೆ ಜಗತ್ತಿನಲ್ಲಿ ಹತ್ತಾರು ರಾಷ್ಟ್ರ ಮಟ್ಟದ, ಫ್ರಾಂಚೈಸಿ ಮಾದರಿಯ ಕೂಟಗಳು ನಡೆಯುತ್ತವೆ.



ಅಂತಹ ಟೂರ್ನಿಗಳಲ್ಲಿ ವಿವಿಧ ಬ್ಯಾಟರ್‌ಗಳು ಸಾವಿರಾರು ರನ್ ಗಳು ಮಾಡಿದ್ದಾರೆ. ಆದರೆ ಯಾವುದೇ ಬ್ಯಾಟರ್ ಕೂಡ ಒಂದೇ ತಂಡದ ಪರ 9 ಸಾವಿರ ರನ್ ಇದುವರೆಗೂ ಟಿ20ಯಲ್ಲಿ ಮಾಡೇ ಇಲ್ಲ, ಮಾಡಿದ್ದಾರೆ ಎನ್ನುವುದಾದರೆ ಅದು ವಿರಾಟ್ ಕೊಹ್ಲಿ ಮಾತ್ರ. 19 ಆವೃತ್ತಿ ಆರ್‌ಸಿಬಿ ಪರವೇ ಆಡಿರುವ ಕೊಹ್ಲಿ 9 ಸಾವಿರ ರನ್ ಮಾಡಿದ್ದಾರೆ. ಇದರೊಂದಿಗೆ ಒಂದೇ ತಂಡದ ಪರ ಇಷ್ಟೊಂದು ರನ್ ಮಾಡಿದ ಏಕೈಕ ಆಟಗಾರ ಅನಿಸಿಕೊಂಡರು.

### ಚೇಸಿಂಗ್ ವೇಳೆ ಮೂಡಿಬಂದವು 4 ಸಾವಿರಕ್ಕೂ ಹೆಚ್ಚು ರನ್

ವಿಶೇಷವಾಗಿ ವಿರಾಟ್ ಕೊಹ್ಲಿ 9 ಸಾವಿರ ರನ್‌ಗಳಲ್ಲಿ 4 ಸಾವಿರಕ್ಕೂ ಹೆಚ್ಚು ರನ್‌ಗಳನ್ನು ಚೇಸಿಂಗ್ ವೇಳೆ ಮಾಡಿದ್ದಾರೆ. ಚೇಸ್ ಮಾಸ್ಟರ್ ಎಂಬ ಹೆಸರನ್ನು ಹೊತ್ತಿರುವ ವಿರಾಟ್ ಕೊಹ್ಲಿ ಗುರಿ ಬೆನ್ನತ್ತುವಾಗ ಯಾವುದೇ ಬ್ಯಾಟರ್ ಗಳಿಸದಷ್ಟು ರನ್ ಮಾಡಿದ್ದಾರೆ. 2023ರಿಂದ ಇಲ್ಲಿಯವರೆಗೂ ಕೊಹ್ಲಿ 72 ಆವರೇಜ್ ಅನ್ನು ಹೊಂದಿದ್ದಾರೆ. ಈ ಬಾರಿಯೂ ವಿರಾಟ್ ಹೆಚ್ಚಿನ ರನ್‌ಗಳನ್ನು ಚೇಸ್ ಮಾಡುವ ವೇಳೆ ಬಾರಿಸಿದ್ದಾರೆ.





| ರನ್‌ಗಳು | ಪಂದ್ಯ | ಇನ್ನಿಂಗ್ಸ್ | ಗರಿಷ್ಠ ರನ್ | ಆಡಿರುವ ಬಾಲ್ | ಅವರೇಜ್ | ಸ್ಟ್ರೈಕ್‌ರೇಟ್ | ಶತಕ | ಅರ್ಧಶತಕ |
|---|---|---|---|---|---|---|---|---|
| 9,012 | 275 | 267 | 113 | 6735 | 40+ | 133.81 | 8 | 66 |

## ಪಂಜಾಬ್ ಓಟಕ್ಕೆ ಬ್ರೇಕ್

• **ಚಂಡೀಗಢ:** ಪಂಜಾಬ್ ತಂಡದ 7 ಪಂದ್ಯಗಳ ಗೆಲುವಿನೋಟಕ್ಕೆ ರಾಜಸ್ಥಾನ ರಾಯಲ್ಸ್ ಬ್ರೇಕ್ ಹಾಕಿದೆ. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಬ್ಯಾಟಿಂಗ್ ನಂತರ ಫೆರಾರಿಯಾ ಮಿಂಚಿದ ನಂತರ ಆರ್‌ಆರ್ 6 ವಿಕೆಟ್‌ಗಳಿಂದ ಗೆದ್ದಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 222 ರನ್ ಗಳಿಸಿತು. ಗುರಿ ಬೆನ್ನತ್ತಿದ ರಾಜಸ್ಥಾನ 19.2 ಬಾಲ್‌ಗಳಲ್ಲಿ 228/4 ಗಳಿಸಿತು.

**ರಾಜಸ್ಥಾನ ಮಿಂಚಿನಾಟ:** ಗುರಿ ಬೆನ್ನತ್ತಿದ ರಾಜಸ್ಥಾನ ಅಬ್ಬರದ ಆರಂಭ ಪಡೆಯಿತು. ಎಂದಿನಂತೆ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮೊದಲಿನ ಮೂರು ಓವರ್‌ಗಳಲ್ಲಿ ಪಂಜಾಬ್ ಭಾರೀ ಹಿನ್ನಡೆ ಅನುಭವಿಸಿತು. ಫರ್ಗುಸನ್, ಅರ್ಷದೀಪ್ ಅಂಥ ಬೌಲರ್‌ಗಳನ್ನು ದಂಡಿಸಿದ ಅವರು, 16 ಬಾಲ್‌ಗಳಲ್ಲೇ 43 ರನ್ ಗಳಿಸಿ ಕ್ಯಾಚ್ ಆದರು. ವೈಭವ್ ವಿಕೆಟ್ ಬಿದ್ದಂತೆ ಜೈಸ್ವಾಲ್ ವೈಭವ ಶುರುವಾಯಿತು. ಒಂದು ಹಂತದಲ್ಲಿ ಸಿಂಗಲ್‌ಗಳ ಮೂಲಕ ಬ್ಯಾಟಿಂಗ್ ಮಾಡುತ್ತಿದ್ದ ಜೈಸ್ವಾಲ್ ಇತ್ತ ಸ್ಫೋಟಕ ಸಿಕ್ಸರ್ ಬಾರಿಸಲಾರಂಭಿಸಿದರು. ಪವರ್‌ಪ್ಲೇನಲ್ಲಿ ರಾಜಸ್ಥಾನ 84 ರನ್ ಬಾರಿಸಿ ಮುನ್ನಡೆ ಸಾಧಿಸಿತು. ಮೂರನೇ ಕ್ರಮಾಂಕದಲ್ಲಿ ಬಂದ ಧ್ರುವ್ ಜುರೇಲ್ ನಿಧಾನ ಬ್ಯಾಟಿಂಗ್ ಮಾಡಿದರು. ಇತ್ತ ಜೈಸ್ವಾಲ್ ಅರ್ಧಶತಕ ಪೂರೈಸಿಕೊಂಡರು. ಆದರೆ 51 ರನ್ ಬಾರಿಸುತ್ತಿದ್ದಂತೆ ಕ್ಯಾಚಿತ್ತರು. ಧ್ರುವ್ 16ಕ್ಕೆ ಔಟಾದರು. ಪರಾಗ್ ಫೆರಾರಿಯಾ ಒಂದಾದರು. ಮಧ್ಯಮ ಕ್ರಮಾಂಕದಲ್ಲಿ ಮಿಂಚಿನಾಟ. ಇದೇ ಮೊದಲ ಬಾರಿಗೆ ಮಿಂಚಲಾರಂಭಿಸಿದ್ದರು ಪರಾಗ್. ಆದರೆ 16 ಬಾಲ್‌ಗಳಲ್ಲಿ 29 ರನ್ ಗಳಿಸಿದಾಗ ಔಟಾದರು. ಇಂಪ್ಯಾಕ್ಟ್ ಆಟಗಾರನಾಗಿ ಬಂದ ಶುಭಂ ದುಬೆ ಉತ್ತಮ ಬ್ಯಾಟಿಂಗ್ ಮಾಡಿದ್ದಲ್ಲದೆ ಹೋಪ್ ಉಳಿಸಿದವರಾದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ 84 ರನ್ ಮಾಡಿತು. ಡೆತ್ ಓವರ್‌ನಲ್ಲಿ ರಾಜಸ್ಥಾನಕ್ಕೆ 43 ರನ್ ಬೇಕಿತ್ತು. 17ನೇ ಓವರ್‌ನಲ್ಲಿ ಉತ್ತಮ ಬೌಲಿಂಗ್ ಸಂಘಟಿಸಿದ ಫರ್ಗುಸನ್ 8 ರನ್ ಬಿಟ್ಟುಕೊಟ್ಟರು. 18ನೇ ಓವರ್‌ನಲ್ಲಿ ಶುಭಂ ಬೌಂಡರಿಗಳೊಂದಿಗೆ ಮಿಂಚಿದರು. ಫೆರಾರಿಯಾ ಅರ್ಷದೀಪ್ ಸಿಂಗ್‌ಗೆ ದಂಡಿಸಿದರು. ಕೊನೆಯ ಎರಡು ಓವರ್‌ಗಳಲ್ಲಿ 18 ರನ್ ಬೇಕಿತ್ತು. 19ನೇ ಓವರ್‌ನ ಮೊದಲೆರಡು ಬಾಲ್‌ಗಳಲ್ಲಿ 10 ರನ್ ಬಂದವು. ಮಿಕ್ಕಿರುವ 8 ರನ್ ಅನ್ನು ಸಲೀಸಾಗಿ ಗಳಿಸಿ ರಾಜಸ್ಥಾನ ಪಂದ್ಯವನ್ನು ಗೆದ್ದಿತು. ಅಂತಿಮದಲ್ಲಿ ಫೆರಾರಿಯಾ 52, ಶುಭಂ 31 ರನ್ ಗಳಿಸಿದರು.

### ಸ್ಟೋಯಿನಿಸ್ ಅಬ್ಬರ

ಪ್ರಭಸಿಮ್ರನ್ (59) ಪ್ರಿಯಾಂಶ್(29) ಬ್ಯಾಟಿಂಗ್‌ನೊಂದಿಗೆ ಪಂಜಾಬ್ ಮಿಂಚಿತು. ನಂತರ ಡೆತ್ ಓವರ್‌ಗಳಲ್ಲಿ ಮಾರ್ಕಸ್ ಸ್ಟೋಯಿನಿಸ್ ಅವರದ್ದೇ ಅಬ್ಬರ. ಶ್ರೇಯಸ್ ಅಯ್ಯರ್ 30 ರನ್ ಗಳಿಸಿದಾಗ ಕ್ಯಾಚಿತ್ತರು. ಇದಕ್ಕೂ ಮುನ್ನ ಬಡ್ತಿ ಪಡೆದು ಬ್ಯಾಟಿಂಗ್ ಗಿಳಿದಿದ್ದ ಸ್ಟೋಯಿನಿಸ್ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. ಮೊದಲನೇ ಬಾಲ್‌ನಿಂದಲೂ ಬಿರುಸಿನ ಬ್ಯಾಟಿಂಗ್ ಮಾಡಿ ಸ್ಟ್ರೈಕ್ ರೇಟ್ ಗಗನಕ್ಕೇರಿಸಿದರು. ಇತ್ತ ರಾಜಸ್ಥಾನ ಹಾಕಿದ್ದ ಕಡಿವಾಣವೆಲ್ಲಾ ವ್ಯರ್ಥವಾಯಿತು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಲು ಶುರು ಮಾಡಿದರು. ಡೆತ್ ಓವರ್ ಬೌಲಿಂಗ್ ಮಾಡಲು ಬಂದ ಪ್ರತಿಯೊಬ್ಬ ಬೌಲರ್ ಅನ್ನೂ ಮನಬಂದಂತೆ ದಂಡಿಸಿದರು. ಬರೋಬ್ಬರಿ 280ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಸ್ಟೋಯಿನಿಸ್ 6 ಸಿಕ್ಸರ್, 4 ಬೌಂಡರಿ ಬಾರಿಸಿದರು. 22 ಬಾಲ್‌ನಲ್ಲಿ 62 ರನ್ ಗಳಿಸಿದರು. ಪಂಜಾಬ್ ಒಟ್ಟು 222 ಗಳಿಸಿತು.

## ಮುಂಬೈಗೆ ಹೈದರಾಬಾದ್ ಸವಾಲು

• **ಮುಂಬೈ:** ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಸೋಲು-ಗೆಲುವಿನ ಮಧ್ಯೆ ಮಿಶ್ರ ಫಲಿತಾಂಶ ಪಡೆದಿರುವ ಹೈದರಾಬಾದ್ ಗೆಲುವಿನ ಹಳಿಗೆ ಮರಳಿದ್ದು, ಅಗ್ರ ನಾಲ್ಕರಲ್ಲಿ ಭದ್ರವಾಗಿದೆ. ಇತ್ತ ಮುಂಬೈ ನಿರಂತರ ಸೋಲುಗಳಿಂದ ಕಂಗೆಟ್ಟಿದೆ.

**ಭರವಸೆಯಲ್ಲಿ ಹೈದರಾಬಾದ್:** ಟಿ20 ಮಾದರಿ ಕ್ರಿಕೆಟ್‌ನ ಭರವಸೆಯ ಬ್ಯಾಟರ್ ಅಭಿಷೇಕ್ ಶರ್ಮ ಲಯಕ್ಕೆ ಮರಳಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಅವರು, ಸದ್ಯ ಆರೆಂಜ್ ಕ್ಯಾಪ್ ಪಡೆದಿದ್ದಾರೆ. ಕಳೆದ ಪಂದ್ಯಗಳಲ್ಲಿ ಹೆಡ್ ಕೂಡ ನಿರ್ಣಾಯಕ ಕೊಡುಗೆಗಳನ್ನು ಕೊಟ್ಟಿರುವುದು ತಂಡದ ಉತ್ಸಾಹ ಹೆಚ್ಚಿಸಿದೆ. ಇಶಾನ್ ಕಿಶನ್ ಲಯದ ಹುಡುಕಾಟದಲ್ಲಿದ್ದಾರೆ. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಹೆನ್ರಿಕ್ ಕ್ಲಾಸೆನ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದು, ತಂಡದ ಬಲ. ಇತ್ತ ಮಧ್ಯಮ ಕ್ರಮಾಂಕದಲ್ಲಿ ನಿತೀಶ್ ರೆಡ್ಡಿ, ಅಭಿನವ್ ಕೂಡ ಉತ್ತಮ ಬ್ಯಾಟಿಂಗ್ ಮಾಡಬಲ್ಲರು. ಬೌಲಿಂಗ್ ವಿಚಾರದಲ್ಲಿ ತಂಡಕ್ಕೆ ಆನೆ ಬಲ ತಂದಿರುವ ಪ್ಯಾಟ್ ಕಮ್ಮಿನ್ಸ್ ವಿಶ್ವಾಸ ಹೆಚ್ಚಿಸಿದ್ದಾರೆ. ಹರ್ಷ ದುಬೆ ಸ್ಪಿನ್ ಮೋಡಿ ಮಾಡಿದ್ದಾರೆ, ಇತ್ತ ಪ್ರಫುಲ್ ಹಿಂಗೆ, ಹುಸೈನ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ.

**ಮುಂಬೈಗೆ ಗೆಲುವಿನ ತವಕ:** ಮುಂಬೈ ಇಂಡಿಯನ್ಸ್ ಆಡಿರುವ ಹೆಚ್ಚಿನ ಪಂದ್ಯಗಳಲ್ಲಿಸ ಸೋಲೇ ಕಂಡಿದೆ. ಹಿಂದಿನ ಪಂದ್ಯದಲ್ಲಿ ಚೆನ್ನೈ ವಿರುದ್ಧ ಹೀನಾಯವಾಗಿ ಸೋತಿತ್ತು. ಅದಕ್ಕೂ ಮುಂಚೆ ಆಡಿದ್ದ ಗುಜರಾತ್ ವಿರುದ್ಧದ ಪಂದ್ಯದಲ್ಲಿ ಮಿಂಚಿತ್ತು. ಮುಖ್ಯವಾಗಿ ದೊಡ್ಡ ದೊಡ್ಡ ಬ್ಯಾಟರ್‌ಗಳು ತಂಡದಲ್ಲಿದ್ದರೂ ಲಯದಲ್ಲಿಲ್ಲ. ರೋಹಿತ್ ಶರ್ಮ ಅವರ ಗಾಯ ಭಾರೀ ಹಿನ್ನಡೆ ತಂದಿದೆ. ಬ್ಯಾಟರ್‌ಗಳಾದ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮ ಅಲ್ಪ ರನ್‌ಗಳನ್ನು ಮಾಡುತ್ತಿದ್ದಾರೆ. ಉಳಿದಂತೆ ಹಾರ್ದಿಕ್ ಪಾಂಡ್ಯ, ಕ್ವಿಂಟನ್ ಡಿಕಾಕ್ ಸೇರಿದಂತೆ ಬಹುತೇಕ ಎಲ್ಲರೂ ಲಯಕ್ಕಾಗಿ ಪರದಾಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಬೂಮ್ರಾ, ಬೋಲ್ಟ್ ಅಂಥವರು ದಂಡಿಸಿಕೊಂಡಿದ್ದಾರೆ. ವಿಕೆಟ್ ಕಿತ್ತುವ ಬೌಲರ್‌ಗಳೇ ದುಬಾರಿಯಾಗಿರುವುದು ಹಿನ್ನಡೆ.

**ಪಿಚ್:** ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಸಾಮಾನ್ಯವಾಗಿ ಬ್ಯಾಟರ್‌ಗಳಿಗೆ ಲಾಭ ಕೊಟ್ಟರೂ, ಕಳೆದ ಪಂದ್ಯದಲ್ಲಿ ಚೆನ್ನೈ ಬೌಲರ್‌ಗಳು ಮಿಂಚಿದ್ದಾರೆ. ಸ್ಪಿನ್ನರ್‌ಗಳಿಗೆ ಹೇಳಿ ಮಾಡಿಸಿದ ಪಿಚ್, ಹೆಚ್ಚಿನ ಬೌನ್ಸ್ ಇರುವುದರಿಂದ ಬ್ಯಾಟಿಂಗ್‌ಗೂ ಲಾಭ ಸಿಗಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಕೊಂಚ ಇಬ್ಬನಿ ಕಾಟ ಇರಲಿದ್ದು, ಟಾಸ್ ಗೆದ್ದ ತಂಡ ಬೌಲಿಂಗ್ ಮಾಡಲಿದೆ.

**ಪಂದ್ಯದ ವಿವರ: ಯಾವಾಗ?: ಬುಧವಾರ, ಎಲ್ಲಿ: ವಾಂಖೆಡೆ, ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್**

## ಟಿಟಿ ಆಡುತ್ತಿದ್ದ ವೇಳೆ ರಾಜ್ ಸಾವು

» ರಾಷ್ಟ್ರೀಯ ಕೂಟದ ವೇಳೆ ಘಟನೆ
» ಹೃದಯಾಘಾತದಿಂದ ಕುಸಿದು ಬಿದ್ದ ಪೆಡ್ಲರ್

• **ಪುಣೆ:** ಇಲ್ಲಿ ನಡೆಯುತ್ತಿದ್ದ 32ನೇ ರಾಷ್ಟ್ರೀಯ ಮಾಸ್ಟರ್ಸ್ ಟೇಬಲ್ ಟೆನಿಸ್ ಪಂದ್ಯಾವಳಿ ನಡೆಯುತ್ತಿರುವ ವೇಳೆ ತಮಿಳು ನಾಡಿನ ಟಿಟಿ ಆಟಗಾರ ಐ.ಎಮ್. ಲೂಯಿಸ್ ರಾಜ್ ಮೃತಪಟ್ಟರು.

ರವಿವಾರ ನಡೆಯುತ್ತಿದ್ದ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅವರು, ಪಂದ್ಯದ ನಡುವೆ ಕುಸಿದು ಬಿದ್ದರು. ತ್ವರಿತ ಚಿಕಿತ್ಸೆ ಫಲಿಸದ ನಂತರ ಅವರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿತ್ತು. ತಕ್ಷಣಕ್ಕೆ ಚಿಕಿತ್ಸೆ ಕೊಟ್ಟರೂ ಅವರು ಹೃದಯಾಘಾತದಿಂದ ಮೃತಪಟ್ಟರು. ಪಂದ್ಯಾವಳಿಯಲ್ಲಿ ರಾಜ್ 65+ ವಿಭಾಗದಲ್ಲಿ ಭಾಗವಹಿಸುತ್ತಿದ್ದರು. ಮೂರನೇ ಸುತ್ತಿನ ಪಂದ್ಯದಲ್ಲಿ ಆಂಧ್ರಪ್ರದೇಶದ ವಿ.ವಿ. ರಾಮನ್ ಅವರನ್ನು ಎದುರಿಸಿದ್ದರು. 2-0 ಅಂತರದ ಮುನ್ನಡೆಯಲ್ಲಿದ್ದ ಅವರು, 12:15ಕ್ಕೆ ಕುಸಿದುಬಿದ್ದರು. ರಾಜ್ ಸಾವಿಗೆ ಭಾರತೀಯ ಟೇಬಲ್ ಟೆನಿಸ್ ಸಂಸ್ಥೆ, ಮಹರಾಷ್ಟ್ರ ಟಿಟಿ ಸಂಸ್ಥೆ ಸೇರಿದಂತೆ ಆಟಗಾರರು, ಕ್ರೀಡಾಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

### ಬ್ಯಾಡ್ಮಿಂಟನ್: ಚೀನಾ ವಿರುದ್ಧ ಸೋತ ಮಹಿಳಾ ತಂಡದ ಅಭಿಯಾನ ಅಂತ್ಯ

## ಉಬರ್ ಕಪ್ ಫೈನಲ್ಸ್: ಭಾರತಕ್ಕೆ ಸೋಲು

• **ಹೊಸದಿಲ್ಲಿ:** ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಉಬರ್ ಕಪ್ ಫೈನಲ್ಸ್‌ನಲ್ಲಿ ಭಾರತ ಮಹಿಳಾ ತಂಡದ ಪಯಣ ನಿರಾಶಾದಾಯಕವಾಗಿ ಅಂತ್ಯಗೊಂಡಿದೆ. ಭಾರತ ಮಹಿಳಾ ಬ್ಯಾಡ್ಮಿಂಟನ್ ತಂಡ ಚೀನಾ ವಿರುದ್ಧ 0-5 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದಿದೆ.

ಪಂದ್ಯದ ಆರಂಭದಲ್ಲೇ ಭಾರತದ ನಿರೀಕ್ಷೆಗಳನ್ನು ಹೆಚ್ಚಿಸಿದ್ದವರು ಪಿ.ವಿ. ಸಿಂಧು. ಮೊದಲ ಸಿಂಗಲ್ಸ್‌ನಲ್ಲಿ ಚೀನಾದ ವಿಶ್ವ ನಂ.2 ವಾಂಗ್ ಝಿಯಿ ವಿರುದ್ಧ ಸಿಂಧು ತೀವ್ರ ಪೈಪೋಟಿ ನೀಡಿದರು. ನಿರ್ಣಾಯಕ ಗೇಮ್‌ನಲ್ಲಿ 18-12 ಮುನ್ನಡೆ ಪಡೆದಿದ್ದರೂ, ಆ ಮುನ್ನಡೆಯನ್ನು ಉಳಿಸಿಕೊಳ್ಳಲು ವಿಫಲರಾದ ಸಿಂಧು 16-21, 21-19, 19-21 ಅಂತರದಲ್ಲಿ ಸೋಲು ಕಂಡರು. ಈ ಸೋಲು ಪಂದ್ಯದಲ್ಲಿ ಪ್ರಮುಖ ತಿರುವಾಯಿತು.

**ಪ್ರಿಯಾ-ಶ್ರುತಿಗೂ ಸೋಲು:** ಮುಂದಿನ ಡಬಲ್ಸ್‌ನಲ್ಲಿ ಪ್ರಿಯಾ ಕೊಂಜೆಂಗ್ಬಾಮ್ ಮತ್ತು ಶ್ರುತಿ ಮಿಶ್ರಾ ಜೋಡಿ ಚೀನಾದ ವಿಶ್ವ ನಂ.1 ಜೋಡಿ



ಗೆ ಸಾಟಿ ನೀಡಲು ವಿಫಲವಾಗಿ ನೇರ ಗೇಮ್‌ಗಳಲ್ಲಿ ಸೋತರು. ಎರಡನೇ ಸಿಂಗಲ್ಸ್‌ನಲ್ಲಿ ಇಶಾರಾಣಿ ಉತ್ತಮ ಹೋರಾಟ ನೀಡಿದರೂ, ಟೋಕಿಯೋ ಒಲಿಂಪಿಕ್ ಚಾಂಪಿಯನ್ ಚೆನ್ ಯುಫೀ ಎದುರು ನಿರ್ಣಾಯಕ ಕ್ಷಣಗಳಲ್ಲಿ ತಪ್ಪುಗಳನ್ನು ಮಾಡಿ ಸೋಲಿಗೆ ಒಳಗಾದರು. ಇದರೊಂದಿಗೆ ಚೀನಾ 3-0 ಮುನ್ನಡೆ ಪಡೆದು ಪಂದ್ಯವನ್ನು ತನ್ನದಾಗಿಸಿಕೊಂಡಿತು. ಮುಂದಿನ ಪಂದ್ಯಗಳಲ್ಲಿ ಟ್ರೀಸಾ ಜಾಲಿ-ಗಾಯತ್ರಿ ಮತ್ತು ಜೋಡಿ ಹಾಗೂ ದೇವಿಕಾ ಸಿಹಾಗ್ ಕೂಡ ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಅಂತಿಮ ಕ್ಷಣಗಳಲ್ಲಿ ಸ್ಥಿರತೆ ಕಾಪಾಡಿಕೊಳ್ಳಲಾಗದೆ ಸೋಲು ಕಂಡರು.

ಒಟ್ಟಿನಲ್ಲಿ, ಭಾರತದ ಯುವ ಆಟಗಾರ್ತಿಯರು ಹೋರಾಟ ಮನೋಭಾವ ತೋರಿದರೂ, ಪ್ರಮುಖ ಕ್ಷಣಗಳಲ್ಲಿ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲರಾದರು. ವಿಶೇಷವಾಗಿ ಸಿಂಧು ಕಳೆದುಕೊಂಡ ಮುನ್ನಡೆ ಪಂದ್ಯ ಫಲಿತಾಂಶದ ಮೇಲೆ ದೊಡ್ಡ ಪರಿಣಾಮ ಬೀರಿತು. ಇದೀಗ ಗಮನ ಥಾಮಸ್ ಕಪ್ ಕಡೆಗೆ ತಿರುಗಿದ್ದು, ಪುರುಷರ ತಂಡ ಚೀನಾ ವಿರುದ್ಧ ಪ್ರತೀಕಾರ ತೀರಿಸಬಹುದೇ ಎಂಬ ಕುತೂಹಲ ಹೆಚ್ಚಾಗಿದೆ.

## ಪದಬಂಧ

» ರಾಜಾ ಸಂಗಮೇಶ ಹಿರೇಮಠ



**5968**

**ಎಡದಿಂದ ಬಲಕ್ಕೆ**
1.ದಾಹದ ನಡುವೆ ಅಡಗಿದ ಜಲಪಕ್ಷಿ (3)
3.ದೇಹ ದಂಡಿಸಲು ಮಾಡುವ ವ್ಯಾಯಾಮ (5)
5.ಲಾಲಿತ್ಯವನ್ನೊಳಗೊಂಡ ಆದಿಶಕ್ತಿ (3)
6.ಬೆಡಗು-ಒಯ್ಯಾರದಿಂದ ಕೂಡಿದ್ದು (3)
8. ಪರಿಮಳವನ್ನು ಹೀಗೂ ಹೇಳುತ್ತೇವೆ (4)
10.ಹಿಂದೂ ಜ್ಯೋತಿಷ್ಯದಲ್ಲಿ ಛಾಯಾಗ್ರಹಗಳು (4)
13.ಭಯ-ಭಾವೋದ್ರೇಕದಿಂದಾಗುವ ದೇಹ ನಡುಕ (3)
15.ಪಲ್ಲವಿಯ ಪಟದಲ್ಲಾದ ಬದಲಾವಣೆ (3)
16.ಲಲಿತವಿದ್ಯಾ ಪರಿಣಿತ ವ್ಯಕ್ತಿ (5)
17.ಜಗಳ ಮಾಡು-ಹೊಡೆದಾಟಕ್ಕೆ ಇಳಿ (3)

**ಮೇಲಿನಿಂದ ಕೆಳಕ್ಕೆ**
1.ಸೇವಕರ ಸೇವಕ-ಆಡಿಯಾಳು (5)
2.ಸಮತಟ್ಟಾದ ಫಲಕವಿದು (3)
3. ಗಾಳಿಸುದ್ದಿ (4)
4.ಸ್ಮರಣೆಯ ಸಮಾನಪದ (3)
7.ಬಾವುಟವಿಲ್ಲಿ ತಲೆಕೆಳಗಾಗಿದೆ (3)
9.ಸ್ವಾಭಾವಿಕವಲ್ಲದ್ದು-ಕೆಟ್ಟ ಆಕಾರ (3)
11.ಕಳವುಮಾಡು (5)
12.ಜನರಿಂದ ಬಂದ ಸಂಸ್ಕೃತಿ (4)
13.ಕಟಕಕ್ಕೆ ಬಂದ ಕಷ್ಟ-ವಿಘ್ನಗಳು (3)
14.ಇದು ಕುದುರೆ ಎಳೆಯುವ ಗಾಡಿ (3)

**5967 ಉತ್ತರ**

**ಎಡದಿಂದ ಬಲಕ್ಕೆ:**
1.ಭಾಗವಹಿಸು
3.ನಿರ್ನಾಮ 5.ಮನುಜ
6.ರಮಣಿ 8.ದಸರ
10.ನಿರತ 13.ಹರವಿ
15.ಗಿಟುಕು 16.ಗುರಾಣಿ
17.ರಕ್ತಸಂಬಂಧ

**ಮೇಲಿನಿಂದ ಕೆಳಕ್ಕೆ :**
1.ಭಾಸ್ಕರ 2.ಸುಮಧುರ
3.ನಿಜಪದ 4.ಮಧುಕರ
7.ಮಧ್ಯಂತರ 9.ಸಹಕಾರ
10.ನಿಬ್ಬೆರಗು 11.ತರಂಗಿಣಿ
12.ಬೀಜಾಂಕುರ
14.ವಿರೋಧ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಾರ್ನಿಂಗ್ ಶೋ
ಬುಧವಾರ 29 ಏಪ್ರಿಲ್ 2026, ಬೆಂಗಳೂರು



# ಆ ದಿನಗಳ ಮತ್ತೊಂದು ಅಧ್ಯಾಯ ಬಲರಾಮನ ದಿನಗಳು ಟೀಸರ್

ಆಕ್ಷನ್ ಚಿತ್ರಗಳಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ನಟ ಟೈಗರ್ ಪ್ರಭಾಕರ್ ಅವರು ಮಾದೇವ ಚಿತ್ರದ ನಂತರ ಹೊಸ ಇಮೇಜ್ ಪಡೆದುಕೊಂಡಿದ್ದಾರೆ. ಅವರೀಗ ಕಂಟೆಂಟ್ ಚಿತ್ರಗಳತ್ತ ಸರಿಯುತ್ತಿದ್ದಾರೆ. ಅದಕ್ಕೆ ಮತ್ತೊಂದು ಉದಾಹರಣೆ ಎಂದರೆ ಬಲರಾಮನ ದಿನಗಳು. ಪದ್ಮಾವತಿ ಜಯರಾಮ್ ಮತ್ತು ಶ್ರೇಯಸ್ ಅವರ ನಿರ್ಮಾಣದ ಈ ಚಿತ್ರದಲ್ಲಿ, ಟೈಗರ್ ವಿನೋದ್ ಪ್ರಭಾಕರ್ ಅವರ ಜತೆ ಪ್ರಿಯಾ ಆನಂದ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ವಿನೋದ್ ಪ್ರಭಾಕರ ಅಭಿನಯದ 25ನೇ ಚಿತ್ರ ಇದಾಗಿದೆ. ಬಲರಾಮನ ದಿನಗಳು ಎಂಬತ್ತರ ದಶಕದಲ್ಲಿ ನಡೆಯುವ ಕಥೆಯನ್ನು ಹೇಳುವ ಚಿತ್ರವಾಗಿದ್ದು, ಟೀಸರ್ ಗಮನಿಸಿದಾಗ ಆ ದಿನಗಳು ಸಿನಿಮಾದೊಂದಿಗೆ ಸಂಬಂಧ ಇರುವುದು ಗೋಚರಿಸುತ್ತದೆ.







ಆ ದಿನಗಳು, ಅಮ್ಮ ಐ ಲವ್‌ಯು, ಆಟಗಾರ ಚಿತ್ರಗಳ ಖ್ಯಾತಿಯ ನಿರ್ದೇಶಕ ಕೆ. ಎಂ. ಚೈತನ್ಯ ಅವರ ಸಾರಥ್ಯದಲ್ಲಿ ಮೂಡಿಬಂದಿರುವ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಿರ್ಮಾಪಕಿ ಪದ್ಮಾವತಿ ಜಯರಾಮ್ ಅವರು ಬಲರಾಮನ ದಿನಗಳು ಚಿತ್ರದ ಟೀಸರನ್ನು ಬಿಡುಗಡೆಗೊಳಿಸಿ ಮಾತನಾಡುತ್ತ ಚಿತ್ರ ನಿರ್ಮಾಣದಲ್ಲಿ ತೊಡಗಿಕೊಳ್ಳಲು ತಮ್ಮ ಮಕ್ಕಳು ನೀಡಿದ ಸಹಕಾರದ ಬಗ್ಗೆ ಹೇಳಿಕೊಂಡರು. ಪುತ್ರ ಶ್ರೇಯಸ್ ಹಾಗೂ ಸೊಸೆಯ ಬಗ್ಗೆಯೂ ಮೆಚ್ಚುಗೆಯ ಮಾತುಗಳನ್ನಾಡಿದರಲ್ಲದೆ, ವಿನೋದ್ ಪ್ರಭಾಕರ್ ಮತ್ತು ನಿರ್ದೇಶಕ ಕೆ.ಎಂ. ಚೈತನ್ಯ ಅವರು ತಮ್ಮ ಚಿತ್ರಕ್ಕೆ ಶಕ್ತಿಯಾಗಿರುವುದಾಗಿಯೂ ಹೇಳಿದರು. ಪದ್ಮಾವತಿ ಜಯರಾಮ್ ಅವರು ನಿರ್ಮಾಣದ ಜತೆಗೆ ಈ ಚಿತ್ರದಲ್ಲೊಂದು ಪಾತ್ರವನ್ನು ಕೂಡ ನಿಭಾಯಿಸಿರುವುದು ವಿಶೇಷ. ಜತೆಗೆ ಅವರ ಪುತ್ರ ತೇಜಸ್ ಕೂಡ ನಟಿಸಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ನಾಯಕನಟ ವಿನೋದ್ ಪ್ರಭಾಕರ್, ಒಂದು ಸಿನಿಮಾದಲ್ಲಿ ಅಭಿನಯಿಸುವುದರ ಮೂಲಕ ಪಡೆಯುವುದು ಅನುಭವವೇ ಅಲ್ಲ, ನನ್ನ ತಂದೆ ನೂರಾರು ಸಿನಿಮಾಗಳಲ್ಲಿ ನಟಿಸಿದರು. ಚಿತ್ರ ನಿರ್ಮಿಸಿ, ನಿರ್ದೇಶನವನ್ನೂ ಸಹ ಮಾಡಿದರು. ಆದರೂ ಸಹ ಸಿನಿಮಾ ಏನು ಎಂದು ನನಗಿನ್ನೂ ಅರ್ಥವಾಗಿಲ್ಲ ಎಂದೇ ಹೇಳುತ್ತಿದ್ದರು. ಹೀಗಾಗಿ ಈ ಚಿತ್ರದಲ್ಲಿ ಸಿಕ್ಕ ಅನುಭವವೇ ಅಂತಿಮ ಎಂದು ಹೇಳಲಾಗದು. ನಾವೆಲ್ಲರೂ ಸಿನಿಮಾ ವಿದ್ಯಾರ್ಥಿಗಳು. ಪ್ರತಿ ಚಿತ್ರದಲ್ಲೂ ಕಲಿಯುವುದು ಸಾಕಷ್ಟಿರುತ್ತದೆ. ಆದರೂ ಮಾದೇವ ಚಿತ್ರಕ್ಕೆ ಸಿಕ್ಕ ಯಶಸ್ಸು ಕಂಡ ಬಳಿಕ ಈ ಚಿತ್ರ ಅದರ ಎರಡುಪಟ್ಟು ಗೆಲುವು ಕಾಣುವ ನಿರೀಕ್ಷೆ ಮೂಡಿಸಿದೆ ಎಂದರು.

ನಿರ್ದೇಶಕ ಕೆ.ಎಮ್.ಚೈತನ್ಯ ಮಾತನಾಡುತ್ತ ಇದು ಆ ದಿನಗಳು ಚಿತ್ರದ ಮತ್ತೊಂದು ಅಧ್ಯಾಯ. 80ರ ದಶಕದ ಕಲ್ಟ್ ಕ್ಲಾಸಿಕ್ ಕಥೆಯನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ ಎನ್ನುತ್ತ ತಮ್ಮೊಂದಿಗೆ ಕೈಜೋಡಿಸಿದ ಸಹಾಯಕ ನಿರ್ದೇಶಕರ ತಂಡವನ್ನು ವೇದಿಕೆಗೆ ಕರೆದು ಪರಿಚಯಿಸಿದರು. ಇವರೆಲ್ಲ ಚಿತ್ರಕ್ಕಾಗಿ ತಂಡ ಸಮರ್ಪಣಾ ಭಾವದಿಂದ ಕೆಲಸ ಮಾಡಿರುವುದಾಗಿ ಹೇಳಿಕೊಂಡರು.

ನಟ ರಮೇಶ್ ಇಂದಿರಾ ಮಾತನಾಡುತ್ತ ತಾವು ಈ ಚಿತ್ರದಲ್ಲಿ ಮೋಣಪ್ಪ ರೈ ಎನ್ನುವ ಪಾತ್ರ, ನಿರ್ವಹಿಸಿದ್ದು ತುಳು ಭಾಷೆ ಮಾತನಾಡಿದ್ದೇನೆ ಎಂದು ಹೇಳಿದರು. ಬಿಗ್‌ಬಾಸ್ ಖ್ಯಾತಿಯ ನಟ ವಿನಯ್‌ಗೌಡ ಮಾತನಾಡುತ್ತ ತಾನು ಈ ಚಿತ್ರದಲ್ಲಿ ಕತ್ತಿ ಎಂಬ ರೌಡಿಯ ಪಾತ್ರ ನಿರ್ವಹಿಸಿರುವುದಾಗಿ ಹೇಳಿದರೆ, ಮತ್ತೋರ್ವ ಬಿಗ್‌ಬಾಸ್ ಸ್ಪರ್ಧಿ ರಜತ್, ಡ್ರ್ಯಾಗನ್ ಮಂಜು, ಪೊಲೀಸ್ ಪಾತ್ರ ನಿರ್ವಹಿಸಿರುವ ಪ್ರತಾಪ್ ನಾರಾಯಣ್ ಮತ್ತು ಅಶ್ವಿನ್‌ಹಾಸನ್, ಸಿಂಗ್ರಿ ಪಾತ್ರಧಾರಿ ನಟ ಆದಿತ್ಯ ಇವರೆಲ್ಲ ತಂತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು.

ಚಿತ್ರಕ್ಕೆ ಹಾಡುಗಳನ್ನು ಬರೆದಿರುವ ಸಾಹಿತಿ ಕವಿರಾಜ್, ನಾಗಾರ್ಜುನ ಶರ್ಮ ಮತ್ತು ಪ್ರಮೋದ್ ಮರವಂತೆ ಸಾಹಿತ್ಯದ ಕುರಿತಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಹೆಚ್.ಸಿ.ವೇಣು ಅವರ ಕ್ಯಾಮೆರಾವರ್ಕ್, ಸಂತೋಷ್ ನಾರಾಯಣನ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ, ಹಿರಿಯ ನಟರಾದ ಆಶಿಷ್ ವಿದ್ಯಾರ್ಥಿ, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ ಹಾಗೂ ಇತರರೂ ಚಿತ್ರದಲ್ಲಿ ನಟಿಸಿದ್ದಾರೆ.

# ಟಾಕ್ಸಿಕ್ ವಿವಾದಾತ್ಮಕ ದೃಶ್ಯಗಳ ಬಗ್ಗೆ ಮಾತನಾಡಿದ ಯಶ್

ರಾಕಿಂಗ್‌ಸ್ಟಾರ್ ಯಶ್ ಅಭಿನಯದ, ಗೀತು ಮೋಹನ್ ದಾಸ್ ಅವರ ನಿರ್ದೇಶನದ ಆಕ್ಷನ್ ಥ್ರಿಲ್ಲರ್ ಚಿತ್ರ ಟಾಕ್ಸಿಕ್ ಜೂನ್ 4ರಂದು ತೆರೆಗೆ ಬರುತ್ತಿದೆ. ಕೆವಿಎನ್ ಪ್ರೊಡಕ್ಷನ್ ಜೊತೆ ಸೇರಿ ಯಶ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಪ್ಯಾನ್ ವರ್ಲ್ಡ್ ಮಟ್ಟದಲ್ಲಿ ಈ ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಕೆಲದಿನಗಳ ಹಿಂದೆ ಬಿಡುಗಡೆಯಾಗಿದ್ದ ಚಿತ್ರದ ಟೀಸರ್ ದೊಡ್ಡ ವಿವಾದ ಸೃಷ್ಟಿಸಿತ್ತು. ಟಾಕ್ಸಿಕ್ ಟೀಸರ್‌ನಲ್ಲಿದ್ದ ಹಸಿಬಿಸಿ ದೃಶ್ಯಗಳ ಬಗ್ಗೆ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಬಗ್ಗೆ ದೂರು ದಾಖಲಾಗಿ ವಿವಾದ ಸೃಷ್ಟಿಯಾಗಿತ್ತು. ಕನ್ನಡ ಸಿನಿಮಾಗಳಲ್ಲಿ ಇದೆಲ್ಲಾ ಅತಿಯಾಯಿತು, ಯಶ್ ಚಿತ್ರಕ್ಕೆ ಇದೆಲ್ಲಾ ಬೇಕಿರಲಿಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಚರ್ಚೆಯಾಯಿತು. ಆದರೆ ಯಶ್ ಅಭಿಮಾನಿಗಳು ಇದಕ್ಕೆ ತಿರುಗೇಟು ನೀಡಿದ್ದರು. ಸಿನಿಮಾ ಬರುವವರೆಗೂ ತಾಳ್ಮೆಯಿಂದಿರಿ, ಕಾದು ನೋಡೋಣ ಎಂದಿದ್ದರು. ಇತ್ತೀಚೆಗೆ ಚಿತ್ರದ ವಿವಾದಾತ್ಮಕ ದೃಶ್ಯಗಳ ಬಗ್ಗೆ ಸ್ವತಃ ಯಶ್ ಅವರೇ ಮಾತನಾಡಿದ್ದಾರೆ. ಗೀತು ಮೋಹನ್ ದಾಸ್ ಕೆಲಸದ ಬಗ್ಗೆ ಮಾತನಾಡುತ್ತಾ ಹಸಿಬಿಸಿ ದೃಶ್ಯಗಳ ಕುರಿತು ಪ್ರತಿಕ್ರಿಯಿಸಿದ್ದಾರೆ. ಮಹಿಳಾ ನಿರ್ದೇಶಕಿಯೊಬ್ಬರು ಟಾಕ್ಸಿಕ ರೀತಿಯ ಆಕ್ಷನ್ ಚಿತ್ರವನ್ನು ನಿರ್ದೇಶನ ಮಾಡುವುದು ಅಪರೂಪ ಎಂದು ಯಶ್ ಹೇಳಿದ್ದಾರೆ. ಆಕ್ಷನ್ ನಮ್ಮ ಚಿತ್ರದ ರೋಮಾಂಚಕಾರಿ ಭಾಗವಾಗಿರುತ್ತದೆ. ಆಕ್ಷನ್ ಸಿನಿಮಾಗಳು ಅಂದಾಗ ಅದು ಪುರುಷ ನಿರ್ದೇಶಕರಿಗೆ ಮಾತ್ರ ಸೀಮಿತವಾಗಿರುತ್ತದೆ. ಇದು ದೊಡ್ಡ ಪ್ರಮಾಣದ ಆಕ್ಷನ್ ಸಿನಿಮಾ. ಆದರಲ್ಲೂ ಹೊಸ ಬಗೆಯ, ವಿಭಿನ್ನವಾದ ಸ್ತ್ರೀ ನೋಟ ಹೊಂದಿರುವ ಗ್ಯಾಂಗ್ ಸ್ಟರ್ ಸಿನಿಮಾ ಎಂದು ಯಶ್ ತಿಳಿಸಿದ್ದಾರೆ. ಗೀತು ಮೋಹನ್ ದಾಸ್ ಬಗ್ಗೆ ಮಾತು ಮುಂದುವರೆಸಿರುವ ಯಶ್,



ಆಕೆಯ ಆಲೋಚನೆಗಳು ತುಂಬಾ ಸ್ಪಷ್ಟವಾಗಿವೆ, ತಾನು ಮಾಡುವ ಯಾವುದೇ ಕೆಲಸದಲ್ಲಿ ಬಲವಾದ ನಂಬಿಕೆ ಹೊಂದಿದ್ದಾಳೆ. ಅದ್ಭುತ ಬರಹಗಾರ್ತಿ ಕೂಡ. ನಾನು ಆಕೆಯಿಂದ ಸಾಕಷ್ಟು ಕಲಿತೆ. ಬಯಕೆ ಅಥವಾ ಕೆಲಭಾವನೆಗಳು, ರೊಮ್ಯಾನ್ಸ್‌ನ್ನು ಒಬ್ಬ ಮಹಿಳೆಯಾಗಿ ಹೇಗೆ ತೋರಿಸಬಹುದು, ಎನ್ನುವುದು ಇಲ್ಲಿ ವಿಭಿನ್ನವಾಗಿದೆ, ಅದನ್ನು ನಾನು ಈ ಚಿತ್ರದಲ್ಲಿ ಕೆಲಸ ಮಾಡುವಾಗ ಅರಿತೆ ಎಂದಿದ್ದಾರೆ. ಟೀಸರ್‌ನಲ್ಲಿ ರಾಯನ ಅವತಾರದ ಯಶ್ ಅರ್ಭಟದ ಜೊತೆಗೆ ಕಾರಿನೊಳಗಿನ ರೊಮ್ಯಾಂಟಿಕ್ ದೃಶ್ಯಗಳು ಎಲ್ಲರ ಹುಬ್ಬೇರಿಸಿತ್ತು. ಆಮ್‌ಆದ್ಮಿ ಪಕ್ಷದ ಮಹಿಳಾಘಟಕ ಈಬಗ್ಗೆ ದೂರು ನೀಡಿ ಇಂತಹ ಸನ್ನಿವೇಶಗಳನ್ನು ತೋರಿಸುವುದು ತಪ್ಪು ಎಂದಿದ್ದರು. ಇನ್ನು ಈ ದೃಶ್ಯಗಳಲ್ಲಿ ಕಾರಿನೊಳಗೆ ಯಶ್ ಜೊತೆ ಕಾಣಿಸಿಕೊಂಡಿದ್ದ ಆ ನಟಿ ಯಾರು ಎನ್ನುವ ಬಗ್ಗೆ ಭಾರೀ ಚರ್ಚೆಯೂ ನಡೆದಿತ್ತು, ಅಂತಿಮವಾಗಿ ನಿರ್ದೇಶಕಿ ಗೀತು ಮೋಹನ್‌ದಾಸ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದರು. ಚಿತ್ರದಲ್ಲಿ ನಯನತಾರ, ಹುಮಾ ಖುರೇಷಿ, ಕಿಯಾರಾ ಅದ್ವಾನಿ, ಕನ್ನಡದ ರುಕ್ಮಿಣಿ ವಸಂತ್ ಸೇರಿದಂತೆ ಸ್ಟಾರ್ ನಟಿಯರ ದೊಡ್ಡ ತಾರಾಗಣವೇ ಟಾಕ್ಸಿಕ್ ಚಿತ್ರದಲ್ಲಿದೆ. ಹಾಗೆ ನೋಡಿದರೆ ಮಾರ್ಚ್ 19ರಂದೇ ಟಾಕ್ಸಿಕ್ ಚಿತ್ರ ತೆರೆಗೆ ಬರಬೇಕಿತ್ತು. ಇರಾನ್-ಇಸ್ರೇಲ್ ಯುದ್ಧದ ಕಾರಣವೊಡ್ಡಿ ಚಿತ್ರದ ಬಿಡುಗಡೆಯನ್ನು ಎರಡು ತಿಂಗಳು ಮುಂದೂಡಲಾಗಿತ್ತು.

# ಓಂಸಾಯಿಪ್ರಕಾಶ್ ನಿರ್ದೇಶನದಲ್ಲಿ ಕಾಮನ್ ಮ್ಯಾನ್ ಆದ ಗೌರೀಶಂಕರ್



ಸಾಮಾನ್ಯ ವ್ಯಕ್ತಿಯೊಬ್ಬ ರಾಜ್ಯದ ಮುಖ್ಯಮಂತ್ರಿಯಾದರೆ ಹೇಗಿರುತ್ತೆ ಎಂಬ ಎಳೆ ಇಟ್ಟುಕೊಂಡು ಕಥೆ ಬರೆದು ಸುರಭಿ ಫಿಲಂಸ್ ಅಡಿ ಎನ್.ನರಸಿಂಹಮೂರ್ತಿ ಅವರು 'ಕಾಮನ್ ಮ್ಯಾನ್' ಚಿತ್ರವನ್ನು ನಿರ್ಮಿಸಿದ್ದಾರೆ. ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ಅವರು ಈ ಚಿತ್ರದ ಚಿತ್ರಕಥೆ ರಚಿಸಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೆರೆಬೇಟೆ ಖ್ಯಾತಿಯ ನಟ ಗೌರೀಶಂಕರ್ ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ಚಿತ್ರದ ಟೈಟಲ್ ಹಾಗೂ ಫಸ್ಟ್‌ಲುಕ್ ಲಾಂಚ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಾಯಿಪ್ರಕಾಶ್ ಒಬ್ಬ ಕಾಮನ್‌ಮ್ಯಾನ್ ರಾಜ್ಯದ ಸಿಎಂ ಆದರೆ ಏನು ಮಾಡಬಹುದು ಎಂಬುದನ್ನು ನಮ್ಮ ಚಿತ್ರದಲ್ಲಿ ತೋರಿಸಿದ್ದೇವೆ. ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಆಸೆ ಇರುತ್ತೆ. ನಾಯಕ ಒಬ್ಬ ಲಾಯರ್, ಆತ ಅನಿರೀಕ್ಷಿತವಾಗಿ ರಾಜ್ಯದ ಸಿಎಂ ಆಗ್ತಾನೆ. ನಂತರ ಆತ ಏನೇನು ಮಾಡಬಹುದು, ಸಮಾಜದಲ್ಲಿ ಏನಾದರೂ ಸುಧಾರಣೆ ಮಾಡಲು ಸಾಧ್ಯವಾಯಿತಾ ಎಂಬುದನ್ನು ಕುತೂಹಲಕರವಾಗಿ ಹೇಳೋ ಪ್ರಯತ್ನ ಮಾಡಿದ್ದೇನೆ. ನಾಯಕನ ತಂದೆ ಒಬ್ಬ ಕಲಾವಿದ. ತನ್ನ ಮಗ ಲಾಯರ್ ಆಗಿ ಸಮಾಜಕ್ಕೆ ಏನಾದರೂ ಒಳ್ಳೆಯದು ಮಾಡಬೇಕು ಎನ್ನುವುದು ಆತನ ಆಸೆಯಾಗಿರುತ್ತೆ. ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದು ಅವಕಾಶ ಬರುತ್ತೆ. ಅದೇರೀತಿ ನಾಯಕನಿಗೂ ಅದು ಬಂದಾಗ ಅದನ್ನು ಆತ ಹೇಗೆ ಯುಟಿಲೈಸ್ ಮಾಡಿಕೊಳ್ತಾನೆ, ಅಲ್ಲದೆ ಆತ ಹೇಗೆ ಸಿಎಂ ಆದ ಎಂದು ಹೇಳುವುದೇ ಕಾಮನ್ ಮ್ಯಾನ್. ನಾಯಕಿ ಸೋನಾ ಲದ್ವಾ ಕೂಡ ಚೆನ್ನಾಗಿ ಆ್ಯಕ್ಟ್ ಮಾಡಿದ್ದು, ಪಾತ್ರಕ್ಕೆ ತಕ್ಕಂತೆ ಅಭಿನಯಿಸಿದ್ದಾರೆ. ಬಾಂಬೆ ಮೂಲದ ಮತ್ತೊಬ್ಬ ನಟಿಯೂ ಚಿತ್ರದಲ್ಲಿದ್ದಾರೆ. ಇದು ಕಂಟೆಂಟ್ ಸಿನಿಮಾ, ಜಾತ್ರೆ ಸಿನಿಮಾ ಅಲ್ಲ, ಶೈಲೇಶ್ ತುಂಬಾ ಚೆನ್ನಾಗಿ ಡೈಲಾಗ್ ಬರೆದಿದ್ದಾರೆ ಎಂದು ಹೇಳಿದರು.



ನಿರ್ಮಾಪಕ ಎನ್.ನರಸಿಂಹಮೂರ್ತಿ ಮಾತನಾಡುತ್ತ ನನಗೆ ಚಿಕ್ಕ ವಯಸಿನಿಂದಲೂ ರಂಗಭೂಮಿಯ ನಂಟಿದೆ. ಈ ಹಿಂದೆ 2 ಚಿತ್ರಗಳನ್ನು ನಿರ್ಮಾಣ ಮಾಡಿದ್ದೆ, ಅದರಿಂದ ಸಾಕಷ್ಟು ಪಾಠವನ್ನೂ ಕಲಿತೆ. ಇದು ಮೂರನೇ ಚಿತ್ರ. ನಿರ್ದೇಶಕರು ತುಂಬಾ ಪ್ಲಾನ್ಡ್ ಆಗಿ ಸಿನಿಮಾ ಅಡ್ತಾರೆ. ಮಾತಿನ ಭಾಗ 40 ದಿನ ಶೂಟಿಂಗ್ ಅಂದಿದ್ದರು. 32 ದಿನಕ್ಕೇ ಮುಗಿಸಿದರು. ಚಿತ್ರದಲ್ಲಿ ನಾನು ಒಬ್ಬ ಮುಖ್ಯಮಂತ್ರಿಯ ಪಾತ್ರ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಆಡಿಯೋ ಟ್ರೈಲರ್ ಲಾಂಚ್ ಮಾಡುವುದಾಗಿ ಹೇಳಿದರು.

ನಾಯಕ ಗೌರಿಶಂಕರ್ ಮಾತನಾಡಿ ರಾಜಹಂಸ, ಕೆರೆಬೇಟೆ ನಂತರ ಇದು ನನ್ನ ಮೂರನೇ ಚಿತ್ರ. ಕೆರೆಬೇಟೆ ನಂತರ ಒಂದೊಳ್ಳೆ ಕಥೆಗಾಗಿ ಕಾಯ್ತಿದ್ದೆ. ನನಗೆ ಕಾಲ್ ಬಂದಾಗ ಆಶ್ಚರ್ಯವಾಯ್ತು. ಬಯಸಿದಂಥ ಪಾತ್ರವೇ ಹುಡುಕಿಕೊಂಡು ಬಂದಿತ್ತು. ನಿರ್ದೇಶಕರು ನನ್ನಂಥ ಚಿಕ್ಕ ಕಲಾವಿದನಿಗೆ ಗಂಟೆಯವರೆಗೆ ತಾಳ್ಮೆಯಿಂದ ಕಥೆ ಹೇಳಿದರು. ಪಾತ್ರಗಳು, ದೃಶ್ಯಗಳನ್ನು ಆರಂಭದಿಂದ ಎಂಡ್ ವರೆಗೆ ನೀಟಾಗಿ ತೆಗೆದುಕೊಂಡು ಹೋಗಿದ್ದರು. ತುಂಬಾ ಶಿಸ್ತುಬದ್ದವಾಗಿ ಸಿನಿಮಾ ಮಾಡುತ್ತಾರೆ. ನಮಗೆಲ್ಲ ಅವರು ದೊಡ್ಡ ಪಾಠವಾಗಿದ್ದಾರೆ. ಯಾವ ಸಿನಿಮಾನೂ ಕಥೆಗಿಂತ ದೊಡ್ಡದಲ್ಲ ಎಂಬ ಅವರ ಮಾತು ಖಂಡಿತ ನಿಜ ಎಂದು ಹೇಳಿದರು. ನಾಯಕಿ ಸೋನಾ ಲದ್ವಾ ಮಾತನಾಡಿ ಇದೇ ನಿರ್ಮಾಪಕರ ಜತೆ 2 ಸಿನಿಮಾ ಮಾಡಿದ್ದೆ, ಇದು ಮೂರನೇ ಚಿತ್ರ ಎಂದು ಹೇಳಿದರು. ಛಾಯಾಗ್ರಾಹಕ ಜೆ.ಜಿ.ಕೃಷ್ಣ ಮಾತನಾಡಿ ನನ್ನ ಹಾಗೂ ಥ್ರಿಲ್ಲರ್ ಮಂಜು ಹಿಟ್ ಕಾಂಬಿನೇಶನ್ ಅನ್ನೋ ಮಾತಿದೆ. ಮಂಜು ತುಂಬಾ ರಿಸ್ಕ್ ತಗೊಂಡು ಆಕ್ಷನ್ ಕಂಪೋಜ್ ಮಾಡಿದ್ದಾರೆ. ಈ ಚಿತ್ರಕ್ಕೆ ನನ್ನಜತೆ ಮಗ ದೀಪಕ್ ಕೂಡ ಕ್ಯಾಮೆರಾ ವರ್ಕ್ ಮಾಡಿದ್ದಾನೆ ಎಂದರು. ಸಂಗೀತ ನಿರ್ದೇಶಕ ವಿನಯಚಂದ್ರ ಮಾತನಾಡಿ ಕಮರ್ಷಿಯಲಿ ಹಿಟ್ ಆಗುವಂಥ ನಾಲ್ಕು ಹಾಡುಗಳು ಹಾಗೂ ಬ್ಯಾಕ್ ಗ್ರೌಂಡ್ ಮ್ಯೂಸಿಕ್ ಕೂಡ ಮಾಡಿದ್ದೇನೆ ಎಂದರು. ಚಿತ್ರದ ಉಳಿದ ಪಾತ್ರಗಳಲ್ಲಿ ಗಣೇಶರಾವ್ ಕೇಸರ್‌ಕರ್, ಎಸ್ಮಾರ್ಟ್ ಶ್ರೀನಿವಾಸ್, ಪ್ರಕಾಶ್ ತುಮ್ಮಿನಾಡು ನಟಿಸಿದ್ದಾರೆ.

# ಮಹಿಳಾ ಪ್ರಧಾನ ಧೃತಿ ಟ್ರೈಲರ್ ಬಿಡುಗಡೆ



ಉದ್ಯಮಿ ಎಂ.ಜಗದೀಶ್‌ಗೆ ಚಿಕ್ಕಂದಿನಿಂದಲೂ ನಿರ್ದೇಶಕನಾಗುವ ಕನಸು. ಆ ಕನಸನ್ನು ಧೃತಿ ಚಿತ್ರ ನಿರ್ದೇಶಿಸುವ ಮೂಲಕ ನನಸಾಗಿಸಿಕೊಂಡಿದ್ದಾರೆ. ಜಗದೀಶ್ ಅವರ ನಿರ್ಮಾಣ ಹಾಗೂ ನಿರ್ದೇಶನದ ಮಹಿಳಾಪ್ರಧಾನ ಕಥಾಹಂದರ ಒಳಗೊಂಡ ಧೃತಿ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಪ್ರಶಾಂತ್ ಚಿತ್ರದ ನಾಯಕನಾಗಿದ್ದು, ಅಂಚಲ್ ನಾಯಕಿ ಪಾತ್ರ ಮಾಡಿದ್ದಾರೆ.



ಒಂದು ಘಟನೆ ನಡೆದಾಗ ಅದಕ್ಕೆ ನಾವು ಹೇಗೆ ಸ್ಪಂದಿಸಬೇಕು ಎಂದು ಕೆಲ ನೈಜಘಟನೆಗಳನ್ನು ಆಧಾರವಾಗಿಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ. ಟ್ರೈಲರ್, ಸಾಂಗ್ ನೋಡಿದಾಗ ಒಂದಷ್ಟು ಕಥೆ ನಮಗೆ ಅರ್ಥವಾಗುತ್ತದೆ. ನಾನೊಂದು ಚಿಕ್ಕಕಂಪನಿ ಮಾಡಿದ್ದೇನೆ. ಸಿನಿಮಾ ನೋಡುತ್ತ ಮೇಕಿಂಗ್ ಕಲಿತೆ. ಹೆಚ್ಚು ಬಂಡವಾಳ ಇರದ ಕಾರಣ ಮೊಬೈಲ್‌ನಲ್ಲೇ ಚಿತ್ರೀಕರಿಸುವ ಯೋಜನೆ ಇತ್ತು. ಆನಂತರ ಪತ್ನಿ ಹಾಗೂ ಸ್ನೇಹಿತರು ಸಹಕಾರ ನೀಡಿದರು. 6 ವರ್ಷದ ಹಿಂದೆ ಸ್ಕ್ರಿಪ್ಟ್‌ವರ್ಕ್ ಪ್ರಾರಂಭಿಸಿದ್ದೆ, ಶೂಟಿಂಗ್ ಆರಂಭಿಸಿದ ನಂತರ ಕ್ಯಾಮೆರಾಮ್ಯಾನ್ ಮೃತರಾದರು. ನಂತರ ಆ ಕೆಲಸ ನನ್ನ ಹೆಗಲಿಗೆ ಬಿತ್ತು. ಚಿತ್ರದ 80% ಶೂಟಿಂಗ್ ನಾನೇ ಮಾಡಿದ್ದೇನೆ, ನನ್ನ ಕಥೆ ಜನರಿಗೆ ಇಷ್ಟವಾಗಬೇಕು ಎಂದು ಟ್ರೈಲರ್‌ನಲ್ಲೇ ಎಲ್ಲವನ್ನೂ ಹೇಳಿದ್ದೇನೆ. ಅದು ಇಷ್ಟವಾಗಿಯಾದರೂ ಜನ ಥೇಟರಿಗೆ ಬಂದು ಸಿನಿಮಾ ನೋಡಲಿ ಎನ್ನುವುದು ನನ್ನ ಆಸೆ. ಮಧು ಮಂದಗೆರೆ ಅವರನ್ನು ಬಿಟ್ಟರೆ ನಾವೆಲ್ಲರೂ ಹೊಸಬರು. ಕೆಲಸಕ್ಕೆಂದು ಹೋದ ಮಗಳು ಸಂಜೆ 7ಕ್ಕೆ ಬರಬೇಕಿದ್ದವಳು, 8-9 ಆದರೂ ಬರದಿದ್ದಾಗ ಮನೆಯವರಿಗೆಲ್ಲ ಹೇಗೆ ಆತಂಕ ಹೆಚ್ಚುತ್ತಾ ಹೋಗುತ್ತದೆ ಎಂಬುದನ್ನು ತೋರಿಸಿದ್ದೇನೆ. ನಮ್ಮ ಸುತ್ತಮುತ್ತ ಹೆಣ್ಣಿನ ಮೇಲಿನ ನಡೆಯುತ್ತಿರುವ ಶೋಷಣೆ ಚಿತ್ರದಲ್ಲಿದೆ, ಹಾಗಂತ ಬರೀ ಶೋಷಣೆಯನ್ನೇ ತೋರಿಸಿಲ್ಲ, ಅದಕ್ಕೆ ಪರಿಹಾರವನ್ನೂ ಹೇಳಿದ್ದೇವೆ. ಪ್ರಸನ್ನಕುಮಾರ್ ಅವರ ಸಂಗೀತ ಚಿತ್ರದ ಹೈಲೈಟ್. ಕಥೆ, ಚಿತ್ರಕಥೆ, ಸಂಭಾಷಣೆ, ಗೀತರಚನೆ ನನ್ನದೇ. ವಿಜಯ್ ಸಿನಿಮಾಸ್ ಮೂಲಕ ಮೇ.8ರಂದು ನಮ್ಮ ಚಿತ್ರ ರಿಲೀಸಾಗುತ್ತಿದೆ ಎಂದರು.

ನಾಯಕಿ ಅಂಚಲ್ ಮಾತನಾಡುತ್ತ ಧೃತಿ ಬರೀ ಸಿನಿಮಾ ಮಾತ್ರವಲ್ಲ, ವುಮನ್ ಎಂಪವರ್‌ಮೆಂಟ್, ನನ್ನ ಪಾತ್ರದ ಹೆಸರು ಧೃತಿ. ಆಕೆ ಟೆನ್ನಿಸ್ ಪ್ಲೇಯರ್, ಒಂದು ರಾತ್ರಿ ಮನೆಗೆ ಹೋಗುವಾಗ ನಡೆದ ಘಟನೆ ಆಕೆಯನ್ನು ಕುಗ್ಗಿಸಿಬಿಡುತ್ತದೆ. ಸಾಕಷ್ಟು ಸಮಸ್ಯೆ ಎದುರಾದರೂ ಧೃತಿಗೆಡದೆ ಹೇಗೆ ಎಲ್ಲವನ್ನೂ ಎದುರಿಸುತ್ತಾಳೆ, ಆಕೆ ಹೇಗೆ ಮತ್ತೆ ಎದ್ದುನಿಲ್ಲುತ್ತಾಳೆ ಎನ್ನುವುದೇ ಈ ಚಿತ್ರ. ಟ್ರೈಲರ್‌ನಲ್ಲಿ ನೋಡಿರುವುದಷ್ಟೇ ಅಲ್ಲ, ಸಿನಿಮಾದಲ್ಲಿ ತುಂಬಾ ವಿಷಯಗಳಿವೆ. ನಮ್ಮ ಚಿತ್ರದ ಶೂಟಿಂಗ್ ಕೂಡ ರಾತ್ರಿ ಹೆಚ್ಚಿನ ಭಾಗ ನಡೆದಿದೆ. ಅಮ್ಮ ನನಗೆ ಧೈರ್ಯದಿಂದ ಕಳಿಸುತ್ತಿದ್ದರು ಎಂದರು.

ಈಗಾಗಲೇ 70ಕ್ಕೂ ಹೆಚ್ಚು ಚಿತ್ರಗಳಿ ನಟಿಸಿರುವ ಯುವನಟ ಮಧು ಮಂದಗೆರೆ ಮಾತನಾಡಿ ಈ ಟೀಮ್ ತುಂಬಾ ಆಳವಾಗಿ ಹೋಗಿ ಈ ಚಿತ್ರವನ್ನು ಮಾಡಿದ್ದಾರೆ. ಸಿನಿಮಾ ನಿಜಕ್ಕೂ ಚೆನ್ನಾಗಿ ಬಂದಿದೆ, ಸಮಾಜಕ್ಕೊಂದು ಉತ್ತಮ ಸಂದೇಶ ಈ ಚಿತ್ರದಲ್ಲಿದೆ ಎಂದರು,

ನಾಯಕ ಪ್ರಶಾಂತ್ ಮಾತನಾಡಿ ಅಭಿನಯಿಸುವ ಆಸೆ ಇತ್ತು, ನನಗೆ ಸಿಕ್ಕ ಮೊದಲ ಅವಕಾಶವಿದು. ಕಥೆಯಲ್ಲಿ ತುಂಬಾ ಸೂಕ್ಷ್ಮ ವಿಷಯಗಳಿವೆ. ಅದನ್ನು ನನ್ನ ಪಾತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದಾರೆ. ಒಂದು ವಿಷಯವನ್ನು ಮನರಂಜನೆಯ ಮೂಲಕ ಹೇಳಿದರೆ ಅದು ಜನರನ್ನು ಬೇಗ ಮುಟ್ಟುತ್ತೆ. ಅನ್ಯಾಯ ನಡೆದಾಗ ಅದಕ್ಕೆ ಬೆಂಬಲವಾಗಿ ನಿಲ್ಲಬೇಕಾ, ಬೇಡವಾ, ತಡೆದಾಗ ಅದು ಆತನ ಮೇಲೆ ಹೇಗೆ ಪರಿಣಾಮ ಬೀರಿತು ಎಂದು ಹೇಳಲಾಗಿದೆ, ಮತ್ತೊಬ್ಬನಟ ಮನೋಜ್‌ಕುಮಾರ್ ಮಾತನಾಡಿ ಇದು ನನ್ನ 3ನೇ ಚಿತ್ರ. ನನ್ನದು ಸಮಾಜದ ಕೆಟ್ಟ ಹುಳುವಿನ ಪಾತ್ರ ಎಂದರು.



ಸಂಗೀತ ನಿರ್ದೇಶಕ ಪ್ರಸನ್ನಕುಮಾರ್ ಮಾತನಾಡಿ ಚಿತ್ರದಲ್ಲಿರುವುದು ಒಂದೇ ಹಾಡು. ಸಿನಿಮಾ ನೋಡ್ತಿರುವಾಗ ನಮ್ಮುವರಿಗೇ ಏನೋ ಆಗ್ತಾಇದೆ ಅನಿಸುತ್ತೆ. ಜಗದೀಶ್ ಅವರಿಗೆ ಸಿನಿಮಾ ಪ್ಯಾಷನ್ ತುಂಬಾ ಇದೆ ಎಂದರು.

# ಆರ್.ಧನರಾಜ್ ನಿರ್ಮಾಣದ 2 ಚಿತ್ರಗಳಿಗೆ ಮಂಜುನಾಥನ ಸನ್ನಿಧಿಯಲ್ಲಿ ಚಾಲನೆ



ಪ್ರಾರ್ಥನಾ ಕ್ರಿಯೇಷನ್ಸ್ ಲಾಂಛನದಲ್ಲಿ ಕೋಟಿ ಚೆನ್ನಯ್ಯ ಖ್ಯಾತಿಯ ಡಾ॥ಆರ್. ಧನರಾಜ್ ಅವರು ನಿರ್ಮಿಸಿ, ನಿರ್ದೇಶಿಸುತ್ತಿರುವ ಕೊರಗ್ಗಾ ತನಿಯಾ(ಕೊರಗಜ್ಜ) ಮತ್ತು ಕನ ಚಿತ್ರಗಳ ಮುಹೂರ್ತ ಸಮಾರಂಭ ಇತ್ತೀಚೆಗೆ ಕದ್ರಿಯ ಶ್ರೀ ಮಂಜುನಾಥೇಶ್ವರ ದೇವಸ್ಥಾನದಲ್ಲಿ ಅದ್ದೂರಿಯಾಗಿ ನೆರವೇರಿತು. ಕೊರಗ್ಗಾ ತನಿಯಾ ಚಿತ್ರದ ಪ್ರಥಮ ದೃಶ್ಯಕ್ಕೆ ಶಾಸಕ ಸಿ.ಬಿ. ಸುರೇಶ್‌ಬಾಬು ಅವರು ಆರಂಭ ಫಲಕ ತೋರಿಸಿದರೆ, ಕದ್ರಿ ಮಂಜುನಾಥೇಶ್ವರ ದೇವಸ್ಥಾನದ ಮುಖ್ಯಸ್ಥ ಎ.ಜೆ.ಶೆಟ್ಟಿ ಅವರು ಆರಂಭ ಫಲಕ ತೋರಿಸಿದರು. ನಂತರ ಕನ ತುಳು ಚಿತ್ರದ ಪ್ರಥಮ ದೃಶ್ಯಕ್ಕೆ ವಿಜಯಕುಮಾರ್ ಕೋಡಿಯಾಲ ಬೈಲ್ ಅವರು ಕ್ಯಾಮೆರಾ ಚಾಲನೆ ಮಾಡಿದರೆ, ಮುಖ್ಯ ಪಾತ್ರದಲ್ಲಿ ನಟಿಸುತ್ತಿರುವ ಹಿರಿಯ ನಟ ಸುಮನ್ ತಲ್ವಾರ್ ಅವರು ಆರಂಭ ಫಲಕ ತೋರಿಸಿದರು. ಮುಹೂರ್ತದ ನಂತರ ದೇವಸ್ಥಾನದ ಆವರಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಡಾ॥ ಆರ್.ಧನರಾಜ್ ಅವರ ಮಾತೃಶ್ರೀ ಕೆ.ಪುಷ್ಪ ಅವರು ದೀಪ ಬೆಳಗುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು. ವೇದಿಕೆಯಲ್ಲಿ ಪ್ರಮುಖ ಪಾತ್ರಧಾರಿ ಸುಮನ್ ತಲ್ವಾರ್ ಅವರು ಮಾತನಾಡುತ್ತ 20 ವರ್ಷಗಳ ಹಿಂದೆ ಧನರಾಜ್ ಅವರು ಕೋಟಿ ಚೆನ್ನಯ್ಯ ಎಂಬ ಯಶಸ್ವೀ ಚಿತ್ರವನ್ನು ನಿರ್ಮಾಣ ಮಾಡಿದ್ದರು. ಆ ಚಿತ್ರ ಅವರಿಗೆ ದೊಡ್ಡ ಹೆಸರನ್ನು ಸಹ ತಂದುಕೊಟ್ಟಿತ್ತು. ಈಗ ನಾನೂ ಕೂಡ ಇವರ ಚಿತ್ರದಲ್ಲಿ ಒಂದು ಮುಖ್ಯ ಪಾತ್ರವನ್ನು ಮಾಡುತ್ತಿದ್ದೇನೆ. ಭಾಷೆ, ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಚಿತ್ರಗಳಿಗೆ ಸರ್ಕಾರ ಸಬ್ಸಿಡಿ ಮತ್ತು ತೆರಿಗೆ ವಿನಾಯಿತಿಯನ್ನು ನೀಡಬೇಕು ಎಂದು ಹೇಳಿದರು. ನಿರ್ಮಾಪಕ, ನಿರ್ದೇಶಕ ಆರ್.ಧನರಾಜ್ ಮಾತನಾಡುತ್ತ ನಮ್ಮ ಬ್ಯಾನರ್ ಮೂಲಕ ನಿರ್ಮಾಣವಾಗುತ್ತಿರುವ ಈ ಎರಡೂ ಚಿತ್ರಗಳು ಉತ್ತಮ ಕಥಾಹಂದರ ಹಾಗೂ ಸಂದೇಶವನ್ನು ಒಳಗೊಂಡಿದ್ದು, ಬಹುಭಾಷೆಗಳಲ್ಲಿ ಮೂಡಿಬರಲಿವೆ ಎಂದರು. ಶಾಸಕ ಸಿ.ಬಿ. ಸುರೇಶ್ ಬಾಬು ಅವರು ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್‌ಬೈಲ್, ಪಮ್ಮಿ ಕೊಡಿಯಾಲ್‌ಬೈಲ್, ಚಿತ್ರದ ನಾಯಕಿ ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕನ್ನಡ, ತುಳು ಸೇರಿದಂತೆ 6 ಭಾಷೆಯಲ್ಲಿ ತಯಾರಾಗುತ್ತಿರುವ ಕೊರಗ್ಗಾ ತನಿಯಾ ಚಿತ್ರಕ್ಕೆ ಡಾ.ಆರ್.ಧನರಾಜ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುವ ಜತೆ ನಿರ್ಮಾಣದ ಜವಾಬ್ದಾರಿಯನ್ನು ಸಹ ಹೊತ್ತಿದ್ದಾರೆ. ಅರ್ಚನ ಶೆಟ್ಟಿ ಈ ಎರಡೂ ಸಿನಿಮಾಗಳ ಸಹ ನಿರ್ಮಾಪಕಿಯಾಗಿದ್ದಾರೆ. ಯುವನಟ ಸಾಜನ್ ಶೆಟ್ಟಿ, ನಿಖಿಲ್ ಇಮಾನಿ ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ.

**ಒಂದೇ ವೇದಿಕೆಯಲ್ಲಿ ಕೊರಗ್ಗಾ ತನಿಯಾ ಮತ್ತು ಕನ ಚಿತ್ರಗಳ ಮುಹೂರ್ತ**

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26